
ಕರ್ನಾಟಕ ಸರ್ಕಾರ

# ಮತ್ತೆ ಸಿಕ್ಕಿತ್ ಕುಂಕುಮ

ಕಟ್ರತನ ಲಲಿತಾ ಅಯ್ಯಣ್ಣ



ಕರ್ನಾಟಕ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿ

# ಮತ್ತೆ ಸಿಕ್ಕಿತ್ ಕುಂಕುಮ

(ಕಾದಂಬರಿ)

- ಕಟ್ರತನ ಲಲಿತಾ ಅಯ್ಯಣ್ಣ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ - 571 201

**'MATHE SIKKITH KUMKUMA'** a Novel in Arebhase language written by Katrathana Lalitha Aiyanna, Gowli Street, Madikeri Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2016**

ಪ್ರತಿಗಳು : **500**

ಬೆಲೆ : ರೂ. 70/- Price : Rs. 70/-

ಪುಟಗಳು : ೧೨ + 88

® ಎಲ್ಲಾ ಹಕ್ಕನ್ನು ಕಾಯ್ದಿರಿಸಲಾಗಿದೆ. All Rights Reserved.

ಸಲಹಾ ಸಮಿತಿ :

ಶ್ರೀ ಕೊಲ್ಯದ ಗಿರೀಶ್
ಡಾ. ಪೂವಪ್ಪ ಕಣಿಯೂರು
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀ ಮೋಹನ ಸೋನ
ಶ್ರೀಮತಿ ಸಂಗೀತ ರವಿರಾಜ್

ಪ್ರಕಾಶಕರು : ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

**ಪುಸ್ತಕ ದೊರೆಯುವ ಸ್ಥಳ :**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272–223055

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

# ಅಧ್ಯಕ್ಷರ ಮಾತ್

ಅರೆಬಾಸೆಲಿ ಬರೆಯುವವು ಒಳ್ಳೊಂತೇಳ್ವ ವಿಚಾರ ಕೇಳ್ರೆ ಖುಷಿ ಆದೆ. ಸರಕಾರ ರಚನೆ ಮಾಡ್ದ ಅರೆಭಾಷೆ ಅಕಾಡೆಮಿಗೆ ಕೂಡ ಸಾರ್ಥಕತೆ ಇದ್ದದೆ. ಶುರುಗೆ 4 ಪುಸ್ತಕನ ಪ್ರಕಟನೆ ಮಾಡ್ದ ಗೌರವ ಅಕಾಡೆಮಿಗೆ ಸಲ್ಲಿದೆ, ಮತ್ತೆ 6 ಪುಸ್ತಕನ ಪ್ರಕಟಣೆ ಮಾಡ್ತಾವೊಳೊ.

ಪುಸ್ತಕ ಬರ್ದ ಎಲ್ಲಾ ಲೇಖಕರಿಗೂ ನನ್ನ ಹೃತ್ಪೂರ್ವಕ ಅಭಿನಂದನೆನ ತಿಳಿಸ್ತಾವೊಳೆ. ಬರ್ದ ಎಲ್ಲಾ ಪುಸ್ತಕ ಶ್ರೇಷ್ಠ ಅಂತ ನಾನ್ ಹೇಳ್ದುಲೆ. ಲೇಖಕರ್ ಅವರ ಸೃಜನ ಶೀಲತೆನ ಈ ಲೇಖನಲಿ ತೋರ್‍ಸೊಳೊ. ಹಂಗೆ ಎಲ್ಲಾ ಪ್ರಕಾರಗಳ್ಲಿ ಅವರ ಸಾಮರ್ಥ್ಯನ ಒರೆಗೆ ಹಚ್ಚಿಯೊಳೊ.

"ಮತ್ತೆ ಸಿಕ್ಕಿತ್ ಕುಂಕುಮ" ಕೌಟುಂಬಿಕ ಕಾದಂಬರಿಯಾಗಿದ್ದ್ ಓದ್‌ಗರ ಮನದಲ್ಲಿ ತಲ್ಲಣ ಮೂಡ್ಸಿದೆ ಲೇಖಕರ್ ವಿಧವ ವಿವಾಹಕ್ಕೆ ಒತ್ತ್ ಕೊಟ್ಟ್ ಕಾದಂಬರಿನ ಆಕ್ರಿಗೆ ಸುಖಮಯ ಅಂತ್ಯ ಕಾಣ್ಸಿಯೊಳೊ.

ಕಾದಂಬರಿ ಬರ್ದ ಶ್ರೀಮತಿ ಕಟ್ರತನ ಲಲಿತಾ ಅಯ್ಯಣ್ಣ ಇವ್ಕ ಪುಸ್ತಕ ಸಮಿತಿಯವ್ಕ ಅಕಾಡೆಮಿ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆನ ಸಲ್ಲಿಸ್ತಾವೊಳೆ.

**ಕೊಲ್ಯದ ಗಿರೀಶ್**
ಅಧ್ಯಕ್ಷರ್

# ಮುನ್ನುಡಿ

ಸಾಹಿತ್ಯದ ಎಲ್ಲಾ ಪ್ರಕಾರಗಳಂದಸ ಕಾದಂಬರಿ ವಿಶಿಷ್ಟವಾದ ಜಾಗೆನ ಪಡಕಂಡದೆ. ಯಾಕೆಂತ ಹೇಳ್ರೆ ಕಾದಂಬರಿ ಅತ್ಯಂತ ದೀರ್ಘ ಬರಹ ಆಗಿರುದ್ರಂದ ಬರಹಗಾರರ ಅವಲೋಕಿಸುವ ಗುಣ ಇಲ್ಲಿ ಮಹತ್ವದ್ದ್. 'ಮತ್ತೆ ಸಿಕ್ಕಿತ್ ಕುಂಕುಮ' ಎಂಬ ಈ ಕಾದಂಬರಿ ಸಂಪೂರ್ಣ ಕೌಟುಂಬಿಕ ಕಾದಂಬರಿಯಾಗಿದ್ದ್ ಕುಟುಂಬದ ಸಂತಸ, ಸಂಕಟ ಹತಾಶೆ, ಎಲ್ಲನಸ ಕೂಲಂಕುಷವಾಗಿ ಬರ್ದ ಇದ್ರಲ್ಲಿ ಪರಿಪೂರ್ಣತೆ ಉಟ್ಟು. ಕಾದಂಬರಿ ಪ್ರಕಾರ ಬೇರೆ ದೇಶಂದ ಬಾಕನ ಒಂದು ತನ್ನ ಅತ್ತಿಗೆಗೆ ಮತ್ತೊಂದು ತನ್ನ ಭಾಗ್ಯಂಗೆ ಅಂತ ತಂದ ಎರಡು ಬೇರೆ ಬೇರೆ ಉಡುಗೊರೆಗ, ಇಲ್ಲಿ ಬಾಕನ ಅದೆರಡು ಉಡುಗೊರೆಗೆ ಒಬ್ಬರೇ ಜನ ಅಂತ ಗೊತ್ತಾದ ವಿಲಕ್ಷಣ ವಿಚಾರ ಮಾರ್ಮಿಕವಾಗಿದ್ದ್ ಲೇಖಕಿಯ ಹೊಸತನನ ಹೇಳ್ದೆ. ಕೌಟುಂಬಿಕ ವೈರುದ್ಯಗ ಹೊಂದಾಣಿಕೆ ಮಾಡಿಕಂಡರೆ ಯಾವ ರೀತಿಲಿ ಸರಿ ಆದೆ ಎಂಬ ಸ್ಥೂಲ ಚಿತ್ರಣ ಈ ಕಾದಂಬರಿಲಿ ಉಟ್ಟು. ಪ್ರಸುತ್ತ ಸಂದರ್ಭಲಿ ಕೌಟುಂಬಿಕ ಪರಿಸರದ ಹಿನ್ನಲೆ ಚೆಲ್ಲಪಿಲ್ಲಿಯಾಗಿರುವ ಸಂದರ್ಭನೆ ಹೆಚ್ಚಿರಿಕಾನ ಇಲ್ಲಿನ ಕಾದಂಬರಿನ ಕುಟುಂಬ ಕಲ್ಪನೆ ಪರಿಣಾಮಕಾರಿಯಾಗಿಟ್ಟು ಎಂಬ ಭಾವನೆ ಬಂದದೆ. ಅರೆಭಾಷೆನ ಜೀವಂತಿಕೆ ಇಂತ ದೀರ್ಘ ಬರಹದ ಮೂಲಕ ಇನ್ನೂ ಗಟ್ಟಿಯಾಗಲಿ ಎಂಬ ಆಶಯ ನಮ್ಮದು.

– ಸಂಗೀತ ರವಿರಾಜ್
ಹೊಸೂರು, ಚೆಂಬು

# ನನ್ನ ಮಾತ್

"ಮತ್ತೆ ಸಿಕ್ಕಿತ್ ಕುಂಕುಮ", ಇದ್ ನನ್ನ ಮೊದಲನೆ ಪ್ರಕಟಿತ ಕೃತಿ. ನನ್ನ ಹಲವು ಕತೆ, ಕವನ, ಮತ್ತಿತರ ಲೇಖನಗ ಪತ್ರಿಕೆಗಳಲ್ಲಿ ಪ್ರಕಟ ಆಗುಟ್ಟು. ಈ ನನ್ನ ಕೃತಿನ ಪ್ರಕಟಿಸ್ತಾ ಇರ್‍ವ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿಗೆ ನಾನು ಆಭಾರಿಯಾಗೊಳೆ.

"ಮತ್ತೆ ಸಿಕ್ಕಿತ್ ಕುಂಕುಮ" ನಿಜವಾದ ಪ್ರೀತಿಗೆ ಸೋಲಿಲ್ಲೆತೇಳುವದಕ್ಕೆ ಸಾಕ್ಷಿ. ಎಳೆ ವಯಸ್‌ಲಿ ಶುರು ಆದ ಪ್ರೀತಿಗೆ ನಡುಲಿ ವಿಧಿಲೀಲೆಂದ ಆದ ಅಗಲಿಕೆ, ಕಥಾನಾಯಕ ಫಾರಿನ್‌ಗೆ ಓದಿಕೆ ಹೋದ ಮ್ಯಾಲೆ ನಾಯಕಿಗೆ ಮನೆಯವರ ಒತ್ತಾಯಕ್ಕೆ ಬೇರೆಯವ ನೊಟ್ಟಿಗೆ ಮದುವೆ, ನಾಯಕ ತನ್ನ ಅಣ್ಣನ ಮದ್ವೆಗೆ ಬಾಕೆ ಆಗದೆ ಅತ್ತಿಗೆನ ಕಾಂಬಕೆ ಕಾತರಂದ ಬಾಕನ ತಾನ್ ಪ್ರೀತಿಸಿದವಳೇ ತನ್ನ ಅತ್ತಿಗೆತ ತಿಳ್ದ್ ಆದ ಆಘಾತ, ನಿರಾಶೆ ಮತ್ತೆ ಆಕ್ಸಿಡೆಂಟ್‌ಲಿ ಅಣ್ಣನ ಸಾವು ತನ್ನ ಪ್ರೇಮಿಯಾಗಿದ್ದ ಅತ್ತಿಗೆ ಕಣ್ಣ್ ಮುಂದೆ ವಿಧವೆ ಯಾಕನ ಅವನ ಮನ ಸ್ಥಿತಿ....... ಮುಂದೆ ಓದಿ. ನನ್ನ ಬಗವಣಿಗೆಗೆ ಸಂಬಂಧಪಟ್ಟಂಗೆ ಸಲಹೆ, ಸೂಚನೆ, ಪ್ರೋತ್ಸಾಹ ನೀಡಿ, ಹರಸಿ.

– ಕಟ್ರತನ ಲಲಿತಾ ಅಯ್ಯಣ್ಣ
ಗೌಳಿ ಬೀದಿ, ಮಡಿಕೇರಿ

ಶಾರದಾ..... ಶಾರದಾ" ರಾಮಯ್ಯನವು ಒಂದೇ ಸಮನೆ ಕರ್ಯಕೆ ಶುರು ಮಾಡ್ದೊ. "ಎಂತಾತ್, ಎಂತಕೆ ಹಂಗೆ ಕಿರ್ಚಿಕಂಬದು". ತೇಳಿ ಸೆರ್ಗಿಗೆ ಕೈನ ವರ್ಸಿಕಂಡ್ ಹೊರಗೆ ಬಂದೊ ಶಾರದ.

"ನೋಡ್ ಕೂಸ್ ಭಾಗ್ಯಂದ್ ಫೋನ್ ಬಂದಿತ್ತ್. ಇಂದಿಗೆ ಅವಳ ಪರೀಕ್ಷೆ ಮುಗ್ದದೆಂತ ಹೇಳ್ತ್ ನಾಳೆನೇ ಬಂದದೆ ಅಂತೆ. ಅವ್ಳು ಒಬ್ಬಳೇ ಬಾದು ಅದ್ಕೆ ಬಸ್ ಸ್ಟಾಂಡಿಗೆ ಬಾಕೆ ಹೇಳಿಟ್ಟು. ಪ್ರಶಾಂತ, ಶಾಲಿನಿ, ರೇಷ್ಮಾ ಮದುವೆಗೆ ಒಂದು ವಾರಕ್ಕೆ ಮುಂದೆ ಬಂದವೆ ಅಂತೆ ಸಾಕಾ ಇನ್ನೂ ಬೇಕಾ".

"ಸಾಕಪ್ಪಾ ಸಾಕ್, ಅಲ್ಲಾ ಕೂಸು ಇಷ್ಟ್‌ದಿನ ಏನೇನ್ ಅನುಭವಿಸಿ ಉಟ್ಟೊ ಕಾಂಬಲೆ. ಪಾಪ ಪ್ರಶಾಂತು ಬಡ್ಕಂಡದೆ ಆದ್ರೆ ಹೆಣ್ಣ್‌ನ ಮಾತ್ ಕೇಳದೆ ಇರ್ಕೆ ಆದೆನಾ, ಬಡಪಾಯಿ".

"ಅಯ್ಯೋ ಬುಡ್ ನಾನ್ ನಿನ್ನ ಮಾತ್ನ ಕೇಳ್ದುಲೆನಾ ಹಂಗೆ, ನೀನೇ ಹುಡ್ಕಿ ಹುಡ್ಕಿ ದೊಡ್ಡವರ ಮನೆಂದ ಸೊಸೆನ ತಂದದ್..... ಅದ್ಸರಿ ............ಜಯ ಎಲ್ಲಿ ಕಾಂಬಲೆ"

"ಒಳಗೆ ತಿಂಡಿ ಮಾಡ್ತಾ ಉಟ್ಟು, ನೀವ್ ಕರಿಬ್ಯಾಡಿ. ನಾನೇ ಹೋಗಿ ಕಳ್ಸಿನೆ"

"ಹಂಗೇ ಮಾಡ್ ಮಾರಾಯ್ತಿ"

"ಜಯ ನೋಡ್ ವಡೆ ಕರಿ ಆತ್. ಬೆಂಕಿ ಸ್ವಲ್ಪ ಕಮ್ಮಿ ಮಾಡ್, ಬೇಗ ಬೇಗ ತೆಗ್ದ್ ಹಾಕ್, ಕನ್ಸ್ ಕಾಣ್ತಾ ಕುದ್ದು ಬುಟ್ಟಾ".

"ತೂ ಹೋಗಮ್ಮಾ"

"ನೋಡ್, ನಾಕ್ ವಡೆನು, ಕಾಫಿನು ತಕೊಂಡೋಗಿ ಅಪ್ಪಂಗೆ ಕೊಟ್ಟ್‌ಬಾ ಹಂಗೆ ನಾಳೆ ಭಾಗ್ಯ ಬಂದದೆ ಅಂತೆ ಸ್ವಲ್ಪ ತೆಗ್ದ್ ಡಬ್ಬಿಲಿ ಹಾಕಿ ಮಡ್ಗ್. ಅವ್ಳಿಗೆ ವಡೆ ತೇಳ್ರೆ ಪ್ರಾಣ".

"ಸರೀಮ್ಮಾ".

ಜಯಶ್ರೀ ಕಾಫಿ, ತಿಂಡಿ ತಕಂಡ್ ಬಾಕನ ರಾಮಯ್ಯನವು ಆರಾಮಾಗಿ ಕುರ್ಚಿಲಿ ಕುದ್ದಿದ್ದೊ ಮುಕಲಿ ಗೆಲವು ಇತ್ತ್ ತುಟಿಲಿ ನಗೆ ಇತ್ತ್ ಮುಂದೆಂದ್ಲೂ ಅವ್ಕೆ ಭಾಗ್ಯ ತೇಳ್ರೆ ಬಾಳ ಪ್ರೀತಿ. ಮೈಸೂರ್‌ಲಿ ಅಣ್ಣ, ಅತ್ತಿಗೆ ಒಟ್ಟಿಗೆ ಇದ್ದ್ ಕಂಡ್ ಅವ್ಳು ಕಾಲೇಜಿಗೆ ಹೋಗ್‌ತಿತ್ತ್.

"ಅಪ್ಪಾ" ಜಯ ಕರ್‍ಯಕನೇ ಅವ್ಕೆ ಎಚ್ಚರ ಆದ್.

ಓ, ಜಯಾ, ಬಾವ್ವಾ ತಿಂಡಿ ತಂದಾ, ಇಲ್ಲಿ ಮಡ್ಗವ್ವ ಹಂಗೇ ನಾಳೆ ಭಾಗ್ಯ ಬಂದದೆ ಅಂತೆ ನಿನ್ನ ಗೋಳು ಹೋಯ್ಕುಂಬಕೆ.

"ಅಮ್ಮ ಹೇಳ್ದೊಪ್ಪ"

"ಸರಿ ನೀನ್ ತಿಂಡಿ ತಿಂದಾ"

"ಇಲ್ಲೆಪ್ಪಾ ನಾನ್ ಅಮ್ಮ ಒಟ್ಟಿಗೆ ತಕಂಡವೆ".

"ಸರಿ ಅವ್ವಾ" ರಾಮಯ್ಯನವು ಕಾಫಿ ಕುಡ್ದ್. ಕಪ್‌ನ ಅವಳ ಕೈಗೆ ಕೊಟ್ಟೊ, ಮತ್ತೆ ಅವು ತಮ್ಮ ಕಲ್ಪನಾ ಲೋಕಕ್ಕೆ ಇಳ್ದೊ. ಒಂದು ಕೈ ತನ್ನಷ್ಟಕ್ಕೇ ವಡೆನ ಬಾಯಿಗೆ ರವಾನಿಸ್‌ತಿತ್ತ್.

* * * * *

ರಾಮಯ್ಯನವು ಅಪ್ಪ ಕೃಷ್ಣಪ್ಪನವ್‌ರ ಒಬ್ಬನೇ ಮಂಜ ಆಗಿತ್ತ್. ಅದ್ರ್‌ಂದ ಅಪ್ಪನ ಆಸ್ತಿ ಪಾಲಾಗದೆ ಹಂಗೇ ಅವರ ಕೈಗೆ ಬಂದಿತ್ತ್. ಕಾಫಿ, ಏಲಕ್ಕಿ, ಕಿತ್ತುಳಿಗಳ ನೆಲೆ ಬೀಡಾದ ಕೊಡಗ್‌ನ ಸುಂದರ ರಮ್ಯ ಜಾಗ ಮೂರ್ನಾಡ್‌ಲಿ ದೊಡ್ಡ ಬಂಗ್ಲೆ, ಬಂಗ್ಲೆಯ ಸುತ್ತ ಮುತ್ತ ಕಾಫಿ, ಕಿತ್ತುಳಿ ಗಿಡಗ, ಮನೆಯ ಮುಂದ್‌ಗಡೆ ಕಾಫಿನ ಒಣಗಿಸಿಕೆ ಸಿಮೆಂಟ್‌ನ ಕಣ ಮನೆ ಮಾಡಿ ಮ್ಯಾಲೆ ನಿತ್ತ್ ನೋಡಿರೆ, ದೂರಲಿ ಮಂಜಿ ಮುಚ್ಚಿದ ಗುಡ್ಡ-ಬೆಟ್ಟಗಳ ನಾಡ್ ಕೊಡಗ್‌ನ ಸೂಕ್ಷ್ಮ ಪರಿಚಯ ಸಿಕ್ತಿತ್ತ್. ಎತ್ತ ನೋಡ್‌ರೂ ಹಸಿರೇ, ಹಸಿರಾಗಿ ಮೈತಾಳಿತ್ತ್. ಹಸಿರ್‌ನ ಕಡೇಲಿ ಒಂದ್‌ಕಡೆ ನೀಲಿ ಆಕಾಶಕ್ಕೆ ಮುತ್ತ್ ಕೊಡ್‌ತಿರ್‍ವ ಗುಡ್ಡ ಬೆಟ್ಟಗಳಸಾಲ್. ಇನ್ನೊಂದ್ ಕಡೆ ಕಾವೇರಿ ಹೊಳೆ, ಹರೆಯದ ಹೆಣ್ಮಕ್ಕ ಸೊಂಟ ಬಳ್‌ಕಿಸಿ ನಡ್ದಂಗೆ ಜುಳು ಜುಳು ಹರಿವ ನೀರ್‌ನ ಸದ್ದ್.

ಆ ಮನೆಗೆ ಶಾರದ ಯಜ್‌ಮಾನಿಯಾಗಿ ಕಾಲಿಟ್ಟಮ್ಯಾಲೆ ಮನೆಲಿ ಸಿರಿಸಂಪತ್ತ್ ಎರಡರಷ್ಟಾಗಿತ್ತ್. ತುಂಬಿದ ಸಂಸಾರಂದ ಬಂದಿದ್ದ ಶಾರದನವು ಅತ್ತೆ ಮಾವಂದ್ರ ಪ್ರೀತಿಯ ಗೊಂಬೆಯಾಗಿ, ಗಂಡನ ಮನಸ್‌ನ ಮೆಚ್ಚಿದ ಹೆಣ್ಣಾಗಿ ಮನೆನ ಬೆಳಗಿಸಿದ್ದೊ. ಅತ್ತೆ ಮಾವಂಗೆ ಹೆಣ್ಣ್ ಮಕ್ಕ ಇಲ್ಲದ ಕೊರತೆನ ಅವು ನೀಗಿಸಿದ್ದೊ ಅತ್ತೆಯಂತೂ ಮಗಳಿಗಿಂತ

ಹೆಚ್ಚಾಗಿ ಅವಳ್ನ ಪ್ರೀತಿ ಮಾಡ್ತಿದ್ದೊ.

ಮದುವೆಯಾಗಿ ಮಾರ್ನೆ ವರ್ಷನೇ ಮುದ್ದು ಪ್ರಶಾಂತ ಆ ಮನೆಗೆ ಸದಸ್ಯನಾಗಿ ಸೇರ್ತ್.... ತುಂಬಾ ಮುದ್ದ್ ಕೂಸು. ಎಲ್ಲವ್ಕೂ ಎಷ್ಟ್ ನೋಡ್ರೂ ಆಡ್ಸಿರೂ ತೃಪ್ತಿ ಇತ್ತ್‌ಲೆ. ಅವನ ಬಾಲ್ಯ ಲೀಲೆಗಳ್‌ಲಿ ಎಲ್ಲವ್ಕೂ ಹೊತ್ತ್ ಹೋದೇ ಗೊತ್ತಾಗ್‌ತಿತ್ತ್‌ಲೆ.

ಮೂರು ವರ್ಷ ತುಂಬಿಕೆ ಮುಟ್ಟ ಅವನ ನೆಲಕ್ಕೆ ಇಳ್‌ಸ್‌ತಿತ್‌ಲೆ. ಒಬ್ಬನ ಕೈಯಿಂದ ಮತ್ತೊಬ್ಬನ ಕೈಗೆ ಹಾರಾಡಿಕಂಡೊ ಮೂರು ವರ್ಷ ಕಳ್ದೋತ್. ಅವನ ಕಾಲ್‌ಲಿ ಇದ್ದ ಬೆಳ್ಳಿಗೆಜ್ಜೆನ ಸದ್ದ್ ಮಾಡಿಕಂಡ್ ಮನೆಯಿಡೀ ಓಡಾಡ್‌ತಿತ್ತ್.

ಪ್ರಶಾಂತ ತೇಳ್ವ ಕೂಗ್‌ನೊಟ್ಟಿಗೆ ಮನೆಲಿ ಬೆಳ್‌ಗಾಗ್‌ತಿತ್ತ್. ಹಂಗೆ ಕತ್ತಲೆ ಕಳ್ದ್ ಬೆಳಕ್ ಕಣ್ಣ್ ತೆರೆಸ್‌ತಿತ್ತ್.

ಕಂಡ ಕಂಡ ಗಿಡಗಳಿಗೆ ಕೈ ಹಾಕಿ ಕೀಳುದು ಬ್ಯಾನೆ ಆಕನ ಮರ್‍ದುದು ಹಿಂಗೇ ಸಾಗ್‌ತ್ತಿತ್ತ್. ಒಮ್ಮೆ ಗುಲಾಬಿ ಗಿಡಕ್ಕೆ ಕೈ ಹಾಕ್‌ಕನ ಮುಳ್ಳು ತಾಗಿ ಕೈಯಿಂದ ರಕ್ತ ಬಂದಿತ್ತ್. ಜೋರ್ ಮರ್ದ್‌ಕನ ಹೋಗಿ ನೋಡ್ರೆ "ಗಿಡ ಕಚ್ಚಿ ಬುಡ್ತ್" ತ ಗುಲಾಬಿ ಗಿಡನ ತೋರ್ಸಿ ಹೇಳ್ತ್.

ಪ್ರಶಾಂತಗೆ ಐದು ವರ್ಷ ಆಕನ ಜಯಶ್ರೀ ಮತ್ತೆರಡ್ ವರ್ಷಲಿ ಭಾಗ್ಯಶ್ರೀ ಅವರ ಮನೆನ ತುಂಬಿದ್ದೊ. ಅವರ ಮನೆ ನಂದ ಗೋಕುಲ ಆಗಿತ್ತ್.

ಪ್ರಶಾಂತಂಗೆ ಈಗ ಹತ್ತ್ ವರ್ಷ ಆಗಿತ್ತ್. ಅಂವ ಮಡಿಕೇರಿ ಸ್ಕೂಲ್‌ಗೆ ಹೋಗ್ತಿತ್ತ್. ಅವನ ಕಾಲೇಜ್‌ವರೆಗಿನ ವಿದ್ಯಾಭ್ಯಾಸ ಮಡಿಕೇರಿಲೇ ಆತ್ತ್. ಮತ್ತೆ ಎಂ.ಎಸ್.ಸಿ. ಮಾಡಿಕೆ ಮೈಸೂರಿಗೆ ಹೋತ್.

ಇತ್ತ ಜಯಶ್ರೀ ಭಾಗ್ಯಶ್ರೀ ಇವುಸ ತಮ್ಮ ವಿದ್ಯಾಭ್ಯಾಸನ ಮಡಿಕೇರಿಲೇ ಮಾಡ್ದೊ.

* * * * *

ದಿನಗ ಕ್ಷಣಗಳಂಗೆ ಕಳ್ದೇ ಹೋದೋ. ಈ ನಡುಲಿ ಇಪ್ಪತ್ತು ವರ್ಷಲಿ ಪ್ರಶಾಂತ ಮೈಸೂರ್‌ಲೇ ಕಾಲೇಜ್‌ಲಿ ಲೆಕ್ಚರರ್ ಆಗಿತ್ತ್. ಜಯಶ್ರೀ ಮಡಿಕೇರಿಲೇ ಕಾಲೀಜಿಗೆ ಸೇರ್ತ್. ಆದರೆ, ಭಾಗ್ಯ ಜಯನಂಗೆ ಅಲ್ಲ. ಅವ್ಳಿಗೆ ಕೊಡಗ್‌ನ ಕಾಲೇಜ್‌ತೇಳ್ರೆ ಅಷ್ಟಕಷ್ಟೆ. ಅವ್ಳು ಎಸ್ಸೆಲ್ಸಿ ಮುಗ್ಸಿತ್ತ್. ನಾನ್ ಮೈಸೂರ್ ಕಾಲೇಜ್ ಸೇರ್‌ನೆತ ಹಟ ಮಾಡ್ತ್. ದೂರದ ಬೆಟ್ಟ ನುಣ್ಣಗೆ ತೇಳ್ವೆ ಅಲ್ಲ ಹಂಗೆ.

ಪ್ರಶಾಂತನೂ ಮೈಸೂರ್‌ಲೇ ಇತ್ತಲ್ಲ. ಅವನೂ ಅವ್ಳಿಗೆ ಸಪ್ಪೋರ್ಟ್ ಮಾಡ್ತ್. ಇನ್ನು ಕೇಳೊಕಾ.

ಆದ್ರೆ ಶಾರದ ಮಾತ್ರ ಇದ್ಕೆ ಒಪ್ಪಿತ್‌ಲೆ. ಪ್ರಶಾಂತಂಗೆ ಮದ್ವೆ ಆದ ಮೇಲೆ ಆದ್ರೆ ಪರ್ವಾಗಿಲ್ಲೆ ಈಗ ಅವಂಗೆ ಕಷ್ಟ ಆದೆತ ಹೇಳ್ದೊ.

ಅಂದ್ ಪ್ರಶಾಂತ್ ರಜೆಲಿ ಬಂದಿತ್ತ್. ಮಂಜ ಬಂದಿರ್ದು ಅಪ್ಪ ಅಮ್ಮಂಗೆ ಬಾಳ ಕುಸಿ ಆಗಿತ್ತ್.

ಬೆಳಿಗ್ಗೆ ರೊಟ್ಟಿ, ಹಲಸಿನಕ್ಕಿ ಪಜ್ಜಿ ಮಾಡಿ ಅವಂಗೆ ಕೊಟ್ಟಿದ್ದೊ. ಯಾಕೆಂತೇಳ್ರೆ ಅವಂಗೆ ಅದ್ ಬಾಳ ಇಷ್ಟ ಇತ್ತ್. ರೊಟ್ಟಿ ತಿಂದ್ ಬಾಡೆಲಿ ಪೇಪರ್ ಓದ್‌ತಾ ಕುದ್ದಿದವನ ಹತ್ರ ಬಂದ ಶಾರದ "ಪ್ರಶಾಂತು ಯಾಕಪ್ಪ ಇಷ್ಟ್ ಲಾಚಾರ್ ಆಗೊಳ, ಊಟ ಸರಿಯಾಗಿ ಮಾಡಿಯಾ ಹೆಂಗೆ"

"ಅಯ್ಯೋ ನಂಗೇನಾಗುಟ್ಟು ಅಮ್ಮ, ನಾನ್ ಇದ್ದಂಗೇವಳೆ. ನೀನ್ ನನ್ನ ನೋಡದೆ ಸುಮಾರ್ ದಿನ ಆತಲ್ಲ, ಅದ್ಕೆ ನಿಂಗೆ ಹಂಗೆ ಆಗಿರ್ದು"

"ಇಲ್ಲಪ್ಪ ನಿಜ್ವಾಗಿ ಇಳ್ದೋಗೊಳ, ಕಳ್ದ ಸಾರಿ ಬಾಕನ ಒಳ್ಳೆ ರಾಜಕುಮಾರನಂಗೆ ಇದ್ದ. ಎಲ್ಲಾ ಹಾಳ್ ಮೂಳ್ ಹೋಟೆಲ್ ಊಟಂದ. ನಂಗೆ ಗೊತ್ತುಟ್ಟು"

"ಅದಕ್ಕೆ ಎಂತ ಮಾಡಕುತ ಹೇಳಿಯ, ಕೆಲ್ಸ ಬುಟ್ಟ್ ಮನೇಲಿ ನೀನ್ ಮಾಡಿ ಹಾಕಿದ ರುಚಿ ರುಚಿ ಊಟ ಮಾಡಿಕಂಡ್ ಇಲ್ಲೆ ಇದ್ದ್ ಬುಡ್ಲ"

"ಹಂಗೆ ಅಲ್ಲಪ್ಪ..."

"ಮತ್ತೆ ಎಂತಮ್ಮಾ ನೀನ್ ಹೇಳ್ದು"

"ಅದೇ ಮಂಜ, ಬೇಗ ಒಂದ್ ಮದ್ವೆ ಮಾಡ್ಕ"

ಪ್ರಶಾಂತ ನಗಾಡಿ, "ನಂಗೇನಮ್ಮ ಅವ್ಸರ, ಜಯಂದ್, ಭಾಗ್ಯಂದ್ ಆಗಲಿ"

"ಅಷ್ಟೊತ್ತಿಗೆ ನೀನ್ ಮುದ್ಕ ಆದಿಯಾ, ಮತ್ತೆ ಯಾರ್ ನಿಂಗೆ ಗೂಡೆ ಕೊಡ್ಕಿಲೆ ಹೈದಂಗೆ ವಯ್ಸ್ ಆಗುಟ್ಟುತ"

"ಹೋಗಲಿ ಬುಡಮ್ಮ ಎಲ್ಲಾರ ಗೂಡೆನ ನೋಡ್ಕ್ಯೊಳಾ"

"ನೀನ್ ಯಾರ್ನೂ ನೋಡ್ತಿಲ್ಯಾ" ಅವಂಗೆ ತಿರ್‍ಗಿಸಿ ಕೇಳ್ತ್ ಶಾರದ ಬ್ಯಾರೆ ಹೈದಗಳಂಗೆ ಮಂಜ ಏನಾರ ಲವ್ ಗಿವ್‌ತ ಬಿದ್ದಿರ್‍ದಾ ತಿಳಿಯಕೆ

"ನೋಡ್ಯೊಳೆ ಅಮ್ಮ, ದಿನಾ ನೂರಾರ್ ಗೂಡೆಗಳ್ನ ನೋಡ್ನೆ ಕಾಲೇಜ್‌ಲಿ"

"......... ನಿನ್ನ ತಮಾಸೆ ಸಾಕ್ ನಿಜಾ ಹೇಳ್"

"ಖಂಡಿತ ಇಲ್ಲಮ್ಮಾ ನಿನ್ನ ಮಂಜ ಹೆಂಗೆಂತ ನಿಂಗೆ ಗೊತ್ತುಲೆನಾ" ಇಷ್ಟ್ ಹೇಳಿ ಅಂವ ಅಭಿಮಾನಂದ ಅಮ್ಮನ ಮುಕ ನೋಡ್ತ್.

ಶಾರದಂಗೆ ಅವನ ಮಾತ್ ಕೇಳಿ ಬಾಳಾ ಕುಶಿ ಆತ್. ಹಂಗೆ ಹೆಮ್ಮೆ ಅನ್ಸಿತ್

"ಹಂಗಾದ್ರೆ ಆ ಮದುವೆ ಬ್ರೋಕರ್ ಸೋಮಣ್ಣಂಗೆ ಹೇಳ್ನೆ, ಒಳ್ಳೆ ಗೂಡೆ ಇದ್ರೆ ಜಾತಕ ತಕಂಡ್ ಬಾತ್ತಾ"

"ನಿನ್ನ ಇಷ್ಟ ಅಮ್ಮ, ನೀನ್ ಯಾರ್ನ ತೋರ್ಸಿರೂ ಸರಿ"

ಮಂಜ ಇಷ್ಟು ಸುಲ್ಬಲಿ ಮದುವೆಗೆ ಒಪ್ಪಿಕಂಡದ್ ಶಾರದಂಗೆ ಯುದ್ದಲಿ ಗೆದ್ದಷ್ಟು ಸಂತೋಷ ಆತ್. ಎರಡ್ ವರ್ಷಂದ ಕಾಡಿ ಬೇಡಿ ಈಗ ಅಂವ ಒಪ್ಪಿತ್ತ್.

ಶಾರದ ಅಂದ್ ಇಡೀದಿನ ತಾವ್‌ಗೆ ತಿಳ್ದ ಮನೆಹೆಸ್ರ್‌ಲಿ ಇವರ ಗೂಡೆಗಳನ್ನೆಲ್ಲಾ ಗ್ಯಾನ ಮಾಡಿಕಂಡೇ ಇತ್ತ್.

ಮಧ್ಯಾಹ್ನ ರಾಮಯ್ಯನವು ಉಂಡ್ ಆದ ಮ್ಯಾಲೆ ಆರಾಮಾಗಿ ಕುರ್ಚಿಲಿ ಕುದ್ದ್ ಎಲೆ ಅಡಿಕೆ ಹಾಕಂಡಿದ್ದೊ. ಆಗ ಅಲ್ಲಿಗೆ ಬಂದ ಶಾರದ ತಾನೂ ಒಂದ್ ಕುರ್ಚಿ ಎಳ್ದ್ ಕುದ್ದು ಕಣ್ತ್ .

"ನೋಡಿ , ನಮ್ಮ ಪ್ರಶಾಂತು ಮದ್ವೆಗೆ ಒಪ್ಪಿ ಕಣ್ತ್ .. ಇಂದೇ ಆಕರೆ ಸೋಮ್ಮಣ್ಣನ ಕರ್ಸಿ, ಅಂವ ಸುಮಾರ್ ಗೂಡೆ ಹೈದ ಮಾಡ್ದೆ "

"ಆತಪ್ಪಾ , ನೀನ್ ಹೇಳ್ದ ಮ್ಯಾಲೆ ಉಟ್ಟಾ "

"ತಮಾಷೆ " ಸಾಕ್, ಅಂವ ಒಪ್ಪಿಕಂಡದೇ ಪುಣ್ಯ, ಅಲ್ಲಾ ನಮ್ಮ ದೂರದ ನೆಂಟತಿ ಜಾನಕಿನ ಮಗಳ್ ಮದ್ವೆ ಆತಾ ಒಳ್ಳೆ ಲಾಯ್ಕ ಇತ್ತ್ ಗೂಡೆ, ಯಾಗಳೋ ಒಮ್ಮೆ ಕಂಡ ಗ್ಯಾನ "

"ಅಯ್ಯಯ್ಯೋ ಮಾರಾಯ್ತಿ ಆಗೂಡೆ ಮಾತ್ರ ಬ್ಯಾಡ. ಆ ಜಾನಕಿನ ಬಾಡಿ ಕನ್ನಂಬಾಡಿ ಇನ್ನು ಅವ್ಳ ಮಗ್ಳು ಹಂಗೆ ಆಗಿಬುಟ್ರೆ ಕತೆ ಮುಗ್ತ್, ನಮ್ಮ ಬಾಗ್ಲ್‌ನ ಎಲ್ಲಾ ಹೊಸದ್ ಮಾಡ್ಸಕೇನೊ."

"ಅಲ್ಲಾ ನಮ್ಮ ಜಯನ ಫ್ರೆಂಡ್ ಮೀರ ಲಾಯ್ಕ ಇಲ್ಯ "

"ಆ ಗೂಡೆನ ಅಪ್ಪ ಬರೀ ಕುಡ್ಕ, ನಮ್ಮ ಮನೆಗೆ ಸರಿಯಾದ

ನೆಂಟಸ್ತಾನ ಅಲ್ಲ . ಅಲ್ಲದೆ ಅವ್ಳ ಅವ್ವನ ಸ್ವಭಾವನು ಸರಿ ಇಲ್ಲೇತ ಕೇಳಿಯೊಳೆ"

"ಹಂಗಾದ್ರೆ, ನಮ್ಮ ಸೋಮ್ಮಣ್ಣನೇ ಗತಿ ಕಂಡದೆ"

"ಸರಿ, ಸಾಯಂಕಾಲ ನಾನೇ ಹೋಗಿ ಅವ್ನ ಕಂಡ್ ಹೇಳಿಬನ್ನೆ ಆತಾ"

ಆತ್, ನಂಗೆ ವಳಗೆ ಸ್ವಲ್ಪ ಕೆಲ್ಸ ಉಟ್ಟು, ನೀನ್ ಸ್ವಲ್ಪ ಮಲ್ಗಿ"

ಶಾರದ ಒಳಗೆ ಹೋತ್, ರಾಮಯ್ಯನವು ಆರಾಮ ಕುರ್ಚಿಲೇ

ಹಂಗೆ ಕಣ್ಣು ಮುಚ್ಚಿ ಮಲ್ಗಿದೊ"

"ನಮಸ್ತೆ ಸ್ವಾಮಿ"

ಒಮ್ಮೆಗೆ ರಾಮಯ್ಯನವು ಕಣ್ಣ್ ತೆರ್‌ದ್ ನೋಡ್ರೆ ಎದ್ರುಗೆ ಸೋಮಣ್ಣ

ನಗಾಡಿಕಂಡ್ ನಿತ್ತಿತ್ .

"ಸೋಮಣ್ಣ ಬಾ, ನಿಂಗೆ ನೂರ್ ವರ್ಷ ಆಯ್ಸ್, ನಿನ್ನ ವಿಷ್ಯನೇ ಮಾತಾಡ್ತಾ ಇದ್ದೊ, ನಾನೇ ಸಾಯಂಕಾಲ ನಿನ್ನ ಮನೆಗೆ ಬರೋಕುತ ಇದ್ದೆ, ನೀನೇ ಬಂದದ್

ಒಳ್ಳೆದಾತ್, "ಏನ್ ಬಾಳ ಅಪರೂಪ ಆಗಿಬುಟ್ಟ"

" ಅಪರೂಪ ಎಂತಹೇಳಿ ನನ್ನ ಕೆಲ್ಸ ಗೊತ್ತುಟ್ಟಲ್ಲ ಮನೆ, ತೋಟ, ಗದ್ದೆ,ಕೆಲ್ಸ ಅದ್ರೊಟ್ಟಿಗೆ ಏನೋ ಸ್ವಲ್ಪ ಸಮಾಜ ಸೇವೆ ಇರ್ಲಿತ ಗೂಡೆ ಹೈದ ಜೋಡ್ಸೊ ಕೆಲ್ಸ ಉಟ್ಟಲ್ಲ, ಏನೋ ನನ್ನಿಂದ ಯಾರಿಗಾರ ಉಪಕಾರ ಆದ್ರೆ ಸಾಕ್ "

"ಪುಣ್ಯದ ಕೆಲ್ಸ ಬುಡ್"

"ಎಲ್ಲಿ ಶಾರದಮ್ಮನವು ಕಾಂಬಲೆ, ಮನೆಲಿ ಇಲ್ಲೆಯಾ?"

"ಉಟ್ಟು ಕರ್ದನೆ ಇರ್ .........ಶಾರದ ....ಶಾರದ ನೋಡ್ ..ಬಾ ಯಾರು ಬಂದೊಳೊತ"

"ಓ ಬಂದೆ .................ಓ ಸೋಮಣ್ಣ ನಿನ್ನನೇ ಗ್ಯಾನ ಮಾಡ್ತಿದ್ದೊ

"ನೀನೇ ಬಂದದ್ ಒಳ್ಳೆದಾತ್ ಬುಡ್"

"ಅದೆಂತಮ್ಮ ನನ್ನ ಗ್ಯಾನ ಮಾಡ್ದವಿಷ್ಯ"

"ಅದೇ, ಸೋಮಣ್ಣ ನಮ್ಮ ಮಂಜ ಮದ್ವೆನೇ ಬ್ಯಾಡತೇಳ್ತ ಇದ್ದಂವ

ಈಗ ಮದ್ವೆಗೆ ಒಪ್ಪಿಕಂಡುಟ್ಟು, ನಮ್ಗೆ ಗೊತ್ತಿದ್ದ ಗೂಡೆಗ ಎಲ್ಲಾ ನಮ್ಗೆ ಸರಿ ಆತ್‌ಲೆ. ಅದ್ಕೆ ನಿಂಗೆ ಹೇಳೊನೊತ, ಒಳ್ಳೆ ಗೂಡೆ ಹಂಗೆ ನಮ್ಮ ಮನೆಸ್ತಾನಕ್ಕೆ ಸರಿಯಾಗವ್ಳು ಇದ್ರೆ ಹೇಳಪ್ಪ ಆದಷ್ಟ್ ಬ್ಯಾಗ

ಈ ರಜೆಲೇ ಆಕು, ಅವನ ಕಾಲೇಜ್ ಶುರು ಆಗದ್ರೊಳ್ಗೆ, ಆದ್ರೆ ವಳ್ಳದ್."

"ಅದ್ಕೇನ್, ನಾನೀಗ ಹೆಚ್ಚ್‌ಕಮ್ಮಿ ಅದೇ ವಿಷ್ಯಕ್ಕೆ ಬಂದದ್, ನಾನೇ ಹೆಂಗೆ ಹೇಳ್ದಪ್ಪಾತ ಇದ್ದೆ, ನೀವೇ ಕೇಳ್ದ್ ವಳ್ಳದೇ ಆತ್ ಇನ್ನ್ ಮದ್ವೆ ಅದಂಗೆತ ತಿಳ್ಕಣಿ,"

"ಅಂದ್ರೆ, ನೀನ್ ಯಾವ್ದೋಗೂಡೆ ವಿಷ್ಯ ಹೇಳಿಕೆ ಬಂದದ್‌ತ ಆತ್"

"ಹೌದಮ್ಮ, ಅದೇ ಆರಾಣೆ ಗ್ರಾಮಲಿ ಕಿತ್ತೂರ್ ಮಾಚಯ್ಯ ವಳೊಲ್ಲ ಅವಳ ಮಗಳ್ ಶಾಲಿನಿತ ಬಾಳ ಪೋರ್ಲು ಉಟ್ಟ್, ಡಿಗ್ರಿ ಓದಿಟ್ಟು, ಬಾಳ ವಳ್ಳ ಗುಣ, ಹಂಗೆ ಅನುಕೂಲಸ್ತರ್ ವಳ್ಳ ಮನಸ್ತಾನ, ನಿಮ್ಮ ಮನೆಗೆ ಸರಿಯಾದ ಗೂಡೆ."

"ಆದ್ರೆ ಗಣಕೂಟ ಎಲ್ಲಾ ಸರಿ ಬರಕು ಅಲ್ಲ"

"ನಿಮ್ಮ ಮಂಜನ ಜಾತಕ ನಕ್ಷತ್ರ ಅಂದ್ ಕೊಟ್ಟಿದ್ರಲ್ಲ ಹಂಗೆ

ಗೂಡೆನ ಜಾತಕ ಸಹ ನಕ್ಷತ್ರ ಉಟ್ಟು ಎರಡೂ ಬಾರಿ ಲಾಯ್ಕ

ಹೊಂದಿದೆ. ಅದ್ಕೇ ನಾನ್ ಬಂದದ್, ನೀವ್ ಹೂಂ ತೇಳ್ರೆ ಸಾಕ್ ಬ್ಯಾರೆ ಏರ್ಪಾಡ್ ನಾನೇ ಮಾಡ್ತಿನೆ "

"ಮಾಚಯ್ಯ, ಹೆಸ್ರ್ ಕೇಳಿ ಪರ್ಚಯ ಉಟ್ಟ್, ನೀನ್ ಹೇಳ್ದ ಮಾಲೆ ಬುಡ್ ಸೋಮಣ್ಣ, ಇನ್ನು ಪ್ರಶಾಂತು ಒಮ್ಮೆ ನೋಡಕು, ಹೈದ ಗೂಡೆ ಒಪ್ಪಿಕಂಡ್ರೆ ನಮ್ಮದ್ ಎಂತ ಇಲ್ಲೆ. ಈಗಿನ ಮಕ್ಕ ನೋಡಿ, ಅವ್ರ ಒಪ್ಪಿಗೆ ಮುಖ್ಯ"

"ಸರಿ, ಅಂದರೆ ಬರ್ವ ಐತ್ವಾರ ನೀವ್ ಅವ್ರ ಮನೆಗೆ ಬನ್ನಿ"

"ಮನೆಗೆಲ್ಲಾ ಬ್ಯಾಡ ಸೋಮಣ್ಣ, ಮನೆಗೆ ಹೋಗಿ ತಿಂಬದು, ಮತ್ತೆ ಕುಶಿಯಾಗದಿದ್ರೆ ಬ್ಯಾಡತೇಳ್ದು, ಅವ್ಕೆ ಯಾಕೆ ಬೇಜಾರ್‌ಮಾಡ್ದು"

"ಅದ್ ಸರಿ ಹೇಳಿ, ಮುಂದೆಲ್ಲಾ ಎಷ್ಟೋ ಮನೆಗಳಿಗೆ ಗೂಡೆ ನೋಡಿಕೆ ಹೋದು, ಹೋದಲೆಲ್ಲಾ ಕೋಳಿ ತಿಂಬದು, ಕೆಲವು ಜನ 100ಕೋಳಿಗೆ ಹೆಣ್ಣ್ ಆತ್‌ತ ಹೇಳ್ದು ಕೇಳಿವಳೆ, ನಿಮ್ಮದ್ ದೊಡ್ಡ ಮನ್ಸ್"

"ಸೋಮಣ್ಣ ಒಂದ್ ಕೆಲ್ಸ ಮಾಡ್, ನಾಡ್ದ್ ನಾವು ಮಡಿಕೇರಿಗೆ ಹೋದು ಉಟ್ಟು, ಶುಕ್ರವಾರ ವಳ್ಳದಿನ, ಗೂಡೆನ ಕಡೆಯವರ ಮಡಿಕೇರಿಗೆ ಬಾಕೆ ಹೇಳ್, ಅಲ್ಲೆ ಯಾವುದಾದ್ರ್ ಹೋಟೆಲ್‌ಲಿ ಗೂಡೆನ ನೋಡ್ದ ಶಾಸ್ತ್ರ ಮಾಡನ, ಹೈದ ಗೂಡೆ ಒಪ್ಪಿರೆ ಅವ್ರ ಮನೆಗೆ ಹೋದರೆ ಆತ್"

"ಸರಿ ಹಂಗೆ ಮಾಡ್ನೆ, ನಾನಿನ್ ಬನ್ನೆ"

"ಇರ್ ಸೋಮಣ್ಣ ಕಾಫಿ ಕುಡ್ದ್ ಹೋಗ್"

"ಹೊತ್ತಾದೆ ನಾನ್ ಇನ್ನೊಂದ್ ದಿನ ಬನ್ನೆ, ಎಲ್ಲಾ ಒಟ್ಟಿಗೆ ಡಬ್ಬಲ್ ವಸೂಲಿ ಮಾಡ್ನೆ"

"ಇರ್ ತಂದ್‌ಬುಟ್ಟೆ, ಮನೆಗೆ ಬಂದವ್ರ ಹಂಗೆ ಕಳ್ಸಿಕಾದ್"

ಸೋಮಣ್ಣನ ಸಂಧಾನ ಪಲ್ಸಿ ಪ್ರಶಾಂತ-ಶಾಲಿನಿಯರ ಮದ್ವೆ

ಗೌಜಿಲಿ ನಡ್ತ್. ಮಡಿಕೇರಿ ಗೌಡ ಸಮಾಜಲಿ ಒಳ್ಳೆ ಮೂರ್ತಲಿ

ಪ್ರಶಾಂತಂಗೆ ಶಾಲಿನಿನ ಮಾಚಯ್ಯ ಮತ್ತೆ ಗೌರಮ್ಮ ಧಾರೆ ಎರ್ದು ಕೊಟ್ಟೊ ಪ್ರಶಾಂತ ಶಾಲಿನಿಗೆ ತಾಳಿ ಕಟ್ಟಿ ಅವಳ್ನ ತನ್ನ ಬಾಳಸಂಗಾತಿಯಾಗಿ ಮಾಡಿಕಣ್ತ್.

ಶಾರದಂಗೆ ಮಂಜ ಸೊಸೆನ ಎಷ್ಟ್ ನೋಡ್ದರೂ ಸಾಲ್ದ್. ಅಷ್ಟ್ ಪೊರ್ಲುರ್ ಇತ್ತ್ ಆ ಜೋಡಿ. ಸೊಸೆನ ಆರತಿ ಎತ್ತಿ ಮನೆ ಹತ್ತಿಸಿದ್ದ್ ಆತ್. ಮತ್ನೆ ನೀರ್ ಮದುವೆ, ಮನೆಂದ ಸ್ವಲ್ಪ ದೂರ ಇದ್ದ ಹಟ್ಟಿಂದ ಗೊಬ್ಬರನ ಕುಕ್ಕೆಲಿ ತುಂಬಿಸಿ ಇಟ್ಟಿದ್ದೊ. ಜಯಶ್ರೀ ಭಾಗ್ಯಶ್ರೀ ಅವಳ್ನ ತಮಾಸೆ ಮಾಡಿ ಗೋಳು ಹೊಯ್ಕಂಣ್ ತಿದ್ದೋ ಗೊಬ್ಬರ ಕುಕ್ಕೆಲಿ ಕಲ್ಲ್ ಹಾಕಿ ಮಡ್ಗಿದ್ದೊ ಶಾಲಿನಿಗೆ" ಅತ್ತಿಗೆ ಅಣ್ಣಂಗೆ ಹೊರ್ಲಿತ ಹೇಳಿ ಬೇಗ "ಶಾಲಿನಿ ನಾಚಿಕೆಲೇ" ಗೊಬ್ಬರ ಹೊರ್ಲಿತ" ಹೇಳ್ತ್

ಪ್ರಶಾಂತ್ ಕುಕ್ಕೆನ ಎತ್ತಿಕೆ ಹೋಕನ ಬಾಳಾ ಭಾರ ಇದ್ದಂಗೆ ಆನ್ಸಿ ಕೈ ಹಾಕಿ ನೋಡ್ತ್ ಎರಡು ಕಲ್ಲ್ ಹಾಕಿ ಮಡ್ಗಿದ್ದೊ. ಪ್ರಶಾಂತ್ ಕಲ್ಲ್ ತೆಗ್ದ್ ಬಿಸಾಕಿತ್ . ಅಷ್ಟೊತ್ತಿಗೆ ಭಾಗ್ಯ" ಇದ್ ಬಾಳಾಮೋಸ, ಅಣ್ಣ ಈಗಲೇ ಅತ್ತಿಗೆ ಪರ ಸೇರಿ ಬುಡ್ತ್‌ತ" ಗಲಾಟೆ ಮಾಡ್ತ್.

ಪ್ರಶಾಂತ್ ಹೊರ್ಸಿದ ಗೊಬ್ಬರ ಕುಕ್ಕೆನ ತಕೊಂಡೋಗಿ ಹತ್ತ್ರಲೇ ಇದ್ದ ಗದ್ದೆಗೆ ಹಾಕಿತ್. ಪ್ರಶಾಂತ್ ಅದರ ಮೇಲೆ ಒಂದು ಹಲ್ಸಿನ ಕೊಂಬೆನ ನೆಟ್ಟತ್.

ಭಾಗ್ಯ" ವಾಲಗ ....ವಾಲಗ .....ಬೇಗ ಬನ್ನೀತ" ವಾಲಗದವರ್ನ ಕರ್ದ್ತ್. ಮತ್ತೆ ಮನೆಂದ ಕೊಟ್ಟಿದ್ದ ಬಿಂದಿಗೇಲಿ ಬಾವಿಂದ ನೀರ್ ತೆಗೆಯಕ್ಕೆ ಹೇಳ್ದೊ ಕಂತರೆಗೆ ಗಂಗೆ ಪೂಜೆ ಮಾಡಿ ಬಿಂದಿಗೆಂದ ನೀರ್ ಸೇದಿ ಪ್ರಶಾಂತ್‌ಗೆ ಹೊರ್ಸಿಕೆ ಹೇಳ್ತ್. ಪ್ರಶಾಂತ್ ಹೊರ್ಸಿದ ಬಿಂದಿಗೆನ ತಲೆಲಿ ಇಟ್ಟ್‌ಕಂಡ್ ಹೊರ್ಡ್‌ಕನ ಹೈದಗ ಗೂಡೆಗ ಎಲ್ಲಾ ಕುಣಿಯಕೆ ಸುರುಮಾಡ್ದೊ.

ಸುಮಾರ್ ಒಂದು ಗಂಟೆ ಕೊಣ್ದ ಮೇಲೆ ಹೆಂಗೊ ದಾರಿ ಮಾಡಿಕಂಡ್ ಮನೆ ಸೇರ್ದ್ತ್. ಮನೆ ಬಾಗ್ಲ್‌ಲಿ ಎಲ್ಲವೂ ಗುಡ್ಡೆ ಸೇರಿಕಂಡ್ ಗಂಡನ ಹೆಸರ್ ಹೇಳ್‌ತ ಗಲಾಟೆ ಮಾಡ್ದೊ ಹಂಗೆ  ಹಾಡ್ ಹೇಳಿತ ಎಲ್ಲವೂ ಕಿರ್ಚಿಕೆ ಶುರು ಮಾಡ್ದೊ. ಶಾಲಿನಿ ಯಾವುದೋ ಒಂದು ಹಾಡ್ ಹೇಳಿ ಪ್ರಶಾಂತ್‌ನ ಹೆಸ್ರ್ ಹೇಳಿ ಒಳಗೆ ಹೋತ್. ಬಿಂದಿಗೆನ ನೆಲ್ಲಕ್ಕಿ ಹತ್ರ ಇಳ್ಸಿ ದೇವ್ರಿಗೆ ಅಕ್ಕಿ ಹಾಕಿ ಅಟ್ಟಕ್ಕೆ ಅಕ್ಕಿ ಹಾಕಿ ಕೈ ಮುಗ್ದ್ ಎಲ್ಲ ಹಿರಿಯರ ಕಾಲ್‌ಮುಟ್ಟಿ ಇಬ್ಬರೂ ನಮಸ್ಕಾರ ಮಾಡ್ದೊ. ಮತ್ತೆ ತಂದ ನೀರ್‌ಲಿ ಮಡಿಲಕ್ಕಿಲಿ ತವ್‌ರ್‌ಂದ ತಂದ ಅಕ್ಕಿ ಬೆಲ್ಲ ಹಾಕಿ ಪಾಯ್ಸ ಮಾಡಿ ಶಾಲಿನಿ ಎಲ್ಲವ್ಕೂ ಇಕ್ಕಿತ್ ಎಲ್ಲವೂ ಕೂಡಿ ಊಟ ಮಾಡ್ದ ಮ್ಯಾಲೆ ಮದ್ವೆ ಕಾರ್ಯ ಸುಮಾರಿಗೆ ಮುಗ್ದಂಗೆ ಆತ್.

ಪ್ರಶಾಂತ್‌ನ ರಜೆ ಮುಗ್ಯೊವರ್ಗೂ ಶಾಲಿನಿ ಯೊಟ್ಟಿಗೆ ತಲಕಾವೇರಿ, ರಾಜಾಸೀಟ್, ಅಬ್ಬಿಫಾಲ್ಸ್ ಮತ್ತೆ ಧರ್ಮಸ್ಥಳ, ಮೈಸೂರು, ಬೆಂಗ್ಳೂರ್ ಹಿಂಗೆ ಎಲ್ಲಾ ಕಡೆ ಸುತ್ತಾಡ್ದೊ. ಅವು ಇಬ್ಬರೂ ಜಯಶ್ರೀ–ಭಾಗ್ಯಶ್ರೀಯರ್ನ ಒಟ್ಟಿಗೆ ಕರ್ದರೆ ಅವಿಬ್ಬರೂ "ನಿಮ್ಮ ಮಧ್ಯೆ ನಾವ್ ಕರಡಿ ಯಾದುಲೆಪ್ಪಾ" ತೇಳಿ ತಪ್ಪಿಸಿ ಕಂಡೊ.

ಪ್ರಶಾಂತ್‌ನ ರಜ ಮುಗ್ದೇ ಹೋತ್. ಅಂವ ಅಂದ್ ಅಪ್ಪಅಮ್ಮನೊಟ್ಟಿಗೆ

"ಭಾಗ್ಯನ ಮೈಸೂರ್‌ಲಿ ಕಾಲೇಜಿಗೆ ಸೇರ್ಸೊನಪ್ಪಾ ಹೆಂಗೂ ನಾವಿಬ್ಬರೂ  ವಳೊಲ್ಲಾ ನಮ್ಮ ಮನೆಂದ ಕಾಲೇಜಿಗೆ ಹೋಗಲಿ"

"ಹೌದು ಮಾವ ಭಾಗ್ಯ ನಮ್ಮನೆಲಿ ಇರ್ಲಿ ನಂಗೂ ಕಂಪೆನಿ ಆದೆ" ಶಾಲಿನಿ ಹೇಳ್ತ್.

"ಅಯ್ಯೋ ಈಗ್ತಾನೆ ಮದ್ವೆ ಆಗೊಳ್ರಿ. ನಿಮ್ಮ ಮದ್ಯೆ ಅವ್ಳು ಯಾಕೆ"

ಶಾರದ ಹೇಳ್ದೊ.

"ಅಯ್ಯೋ ಬಿಡಮ್ಮ, ಏನ್ ಭಾಗ್ಯ ಏನ್ ಮಾಡಿಯಾ?" ಭಾಗ್ಯ ಅಪ್ಪ ಅಮ್ಮಗ ಮೊಕ ನೋಡ್ತ್.

ಶಾರದ ಸ್ವಲ್ಪ ಗ್ಯಾನ ಮಾಡಿ, "ಅಲ್ಲಪ್ಪಾ, ಅತ್ತಿಗೆ ನಾದಿನಿ ಜೊತೆಲಿ ಇದ್ರೆ ಸರಿ ಬಾಕಿಲೆ"

ಪ್ರಶಾಂತ್ ಅದ್ಕೆ ನಗಾಡಿ" ಅಯ್ಯೋ ಅಮ್ಮ ನಾನೊಳೆ ಅಲ್ಲಾ, ನಾನ್ ಭಾಗ್ಯನ ಕರ್ಕಂಡೇ ಹೊರ್ಡುದು"

ಭಾಗ್ಯ ಕಡೇಕುಟ್ಟಿ ಆದ್ರಂದ ಎಲ್ಲವ್ಕೂ ಅವ್ಳು ತೇಳ್ರೆ ಬಾಳಾ ಪ್ರೀತಿ ಪ್ರಶಾಂತ್ ಅಂತು ಸಣ್ಣ ಕೂಸ್ ಇರ್ಕನ ಎತ್ತಿಕಂಡೇ ಇರ್‍ತಿತ್ತ್.

ಭಾಗ್ಯಂಗೆ ಮೈಸೂರಿಗೆ ಹೊರ್ಡುತೇಳಿ ಬಾಳಾ ಕುಶಿ ಆತ್, ನಾಳೆಯೇ ಹೊರ್ಡುದು ಹೇಳ್ಕನ ಅಪ್ಪ ಅಮ್ಮನ ಬುಟ್ಟು ಹೋದುತ ದುಕ್ಕನೂ ಆತ್.

ಆದರೆ ಹೊಸ ಕಾಲೇಜ್, ಹೊಸ ಫ್ರೆಂಡ್‌ಗ ತೇಳಿ ಕುಶಿಆತ್. ತನ್ನ ಬಟ್ಟೆಬರ ಮತ್ತೆ ತನಿಗೆ ಬೇಕಾದನೆಲ್ಲಾ ಪ್ಯಾಕ್ ಮಾಡಿ ಕಣ್ತ್.

ಮಾರ್‍ನೆದಿನ ಎಲ್ಲವೂ ಬ್ಯಾಗ ಎದ್ದ್ ಹೊರ್ಡಿಕೆ ತಯಾರಿ ಮಾಡ್ದೊ, ಪ್ರಶಾಂತ್ ಹಿಂದಿನ ದಿನಾನೇ ಬಸ್ ಟಿಕೆಟ್ ರಿಸರ್ವ್ ಮಾಡಿಸಿತ್ತ್ .

ಶಾರದ, ಜಯಶ್ರೀ ಸೇರಿಕಂಡ್ ಕರ್ಜಿಕಾಯಿ, ರವೆ ಉಂಡೆ, ಚಕ್ಕಲಿ ಮಾಡಿ ಡಬ್ಬಿಲಿ ತುಂಬಿಸಿಟ್ಟಿದ್ದೊ.

ಹೊರಡಿಕೆ ಮುಂದೆ ಕಾಲ್ ಹಿಡ್ಡ ಸೊಸೆನ ಎತ್ತಿ ಶಾರದ "ಬರುವ ವರ್ಷ ಗಂಡ್ ಕೂಸ್‌ನ ಎತ್ತಿಕಂಡ್ ಬಾಮ್ಮಾ" ತೇಳ್ದೊ.

ಶಾಲಿನಿ ನಾಚಿಕೆಂದ ತಲೆ ತಗ್ಗಿಸಿತ್ ಹಿಂದೆ ನಿಂತಿದ್ದ ಪ್ರಶಾಂತ್ ಮೆಲ್ಲೆ ಅವಳ ಕೈಗೆ ಜಿಂಟಿತ್.

ಪ್ರಶಾಂತ್ ಕಾಲ್‌ಹಿಡ್ಯಕನ ಶಾರದ, "ಅವ್ಳ ಲಾಯ್ಕ ನೋಡಿಕಪ್ಪಾ,

ಹಂಗೇ ಭಾಗ್ಯನ ಕಡೆ ಗಮನ ಇರ್‍ಲಿ" ತೇಳ್ದೊ.

"ನಂಗೂ ಗಂಡು ಕೂಸ್‌ನ ಅಪ್ಪ ಆಗುತ ಆಶೀರ್ವಾದ ಮಾಡ್ದುಲೇನಾ ಅಮ್ಮ" ಎಲ್ಲವೂ ಜೋರ್ ನಗಾಡ್ದೊ. ಶಾಲಿನಿ ಸೆರ್‍ಗ್‌ಂದ ಬಾಯಿ ಮುಚ್ಚಿ ನಗೆನ ತಡ್ಡಿತ್ತ್. ಎಲ್ಲವೂ ರಾಮಯ್ಯನವುರ ಕಾಲ್ ಹಿಡ್ದ್, ಜಯಂಗೆ ಟಾಟಾ ಮಾಡಿ ಮನೆ ಮೆಟ್ಲ್...... ಇಳ್ದ್ ಕಾರ್ ಹತ್ತಿದೊ. ರಾಮಯ್ಯನವೇ ಡ್ರೈವ್ ಮಾಡಿಕಂಡ್ ಹೊರ್‍ಟೊ. ಒಟ್ಟಿಗೆ ಜಯಶ್ರೀನೂ ಹೊರ್‍ಟತ್. ಪ್ರಶಾಂತ್, ಶಾಲಿನಿ, ಭಾಗ್ಯನ ಮಡಿಕೇರಿಲಿ ಬಸ್ ಹತ್ತಿಸಿ ರಾಮಯ್ಯ ಮತ್ತೆ ಜಯಶ್ರೀ ಮನೆಗೆ ಹೊರ್‍ಟೊ. ಮನೆಲಿ ಶಾರದ ಮುಕ ಬಾಡ್ಸಿಕಂಡ್ ಕುದ್ದಿದ್ದೊ. ಇಷ್ಟ್ ದಿನ ಮನೆ ತುಂಬಿದಂಗೆ ಇತ್ತ್.

* * * * *

ಭಾಗ್ಯನ ಮೊದ್ಲ ವರ್ಷದ ಪಿಯುಸಿ ಓದ್ ಆರಾಮಾಗಿ ಕಳೀತಾ ಇತ್ತ್. ಆಗೊಮ್ಮೆ ಈಗೊಮ್ಮೆ ಅತ್ತಿಗೆನ ಕಿರಿಕಿರಿ ಬುಟ್ರೆ ಮತ್ತೆಲ್ಲಾ ಮಾಮೂಲಾಗಿ ನಡ್‌ಕಂಡ್ ಹೋಗ್‌ತಿತ್ತ್.

ಕೆಲ್ಸ ಮಾಡಿ ಗೊತ್ತಿಲ್ಲದ ಭಾಗ್ಯನ ಕಂಡರೆ ಶಾಲಿನಿಗೆ ಸಿಟ್ಟ್ ಬಾತಿತ್ತ್.

ಆಗ್ಗಾಗ ಅವ್ಳು "ಭಾಗ್ಯ, ನೀನ್ ಯಾಗೋಳು ಮಾಡಿಕೊಟ್ಟದ್ನ ತಿಂದ್‌ಕಂಡ್ ಕಾಲೇಜ್ ಅದ್ ಇದ್‌ತ ತಿರ್ಗಿಕಂಡ್ ಇದ್ರೆ, ನಾನೊಬ್ಬಳೇ ಎಷ್ಟೂಂತ ಮಾಡ್ತು, ನೀನ್ ನಂಗೆ ಸ್ವಲ್ಪ ಸಹಾಯ ಮಾಡ್ ಬಾ" ತ ಕರೀತಿತ್ತ್ .

ಆಗೆಲ್ಲಾ ಭಾಗ್ಯ "ಅತ್ತಿಗೆ, ನಂಗೆ ಓದಿಕೆ ಉಟ್ಟು, ಟೆಸ್ಟ್ ಉಟ್ಟು" ತ ಹೇಳ್ತಿತ್ತ್

"ಹೂಂ, ನಿಂಗೆ ಯಾಗೋಳು ಓದು ಓದು ನಾನೊಬ್ಬಳೇ ಎಷ್ಟೂತ ದುಡ್ದ್ ಸಾಯೋದು"

"ಸಾರಿ ಅತ್ತಿಗೆ, ನಂಗೆ ಕೆಲ್ಸ ಮಾಡಿ ಅಭ್ಯಾಸ ಇಲ್ಲೆ, ಇನ್ನ್ ಕಲ್ತ್ ಕಣೆ"

ಆದರೆ, ಶಾಲಿನಿನ ಅರ್‌ಚಾಟ ಎಲ್ಲಾ ಪ್ರಶಾಂತ್ ಮನೇಲಿ ಇಲ್ಲದಿರ್ಕನ ಮಾತ್ರ ಮನೇಲಿದ್ರೆ ಅವನ ಕಣ್ಣ್ ನೋಡಿರೇ ಶಾಲಿನಿ ತಣ್ಣಗೆ ಆಗಿ ಬುಡ್ತಿತ್ತ್. ಭಾಗ್ಯಂಗೆ ಅಣ್ಣನ ಪ್ರೀತಿ ಮುಂದೆ ಅತ್ತಿಗೆನ ಮಾತೆಲ್ಲಾ ಮರ್ತ್ ಹೋಗ್ತಿತ್ತ್. ರಜಾ ಬಾಕನೆಲ್ಲಾ ಭಾಗ್ಯ ತಪ್ಪದೇ ಮೂರ್ನಾಡಿಗೆ ಹೋಗ್‌ತಿತ್ತ್. ಒಮ್ಮೊಮ್ಮೆ ಪ್ರಶಾಂತ_ಶಾಲಿನಿನೂ ಜೊತೆಗೆ ಹೋಗ್‌ತಿದ್ದೊ. ಒಬ್ಬಳೇ ಹೋಕನ ಪ್ರಶಾಂತ್ ಬಸ್ ಹತ್ತಿಸಿ ಬರ್ತಿತ್.

ಮನೆಗೆ ಹೋಗಿ ವಾಪಾಸು ಬಾಕನ ಭಾಗ್ಯ ಹಿಂದಿನದೆಲ್ಲಾ ಮಕ್ತ ಓದಿಕೆ ಶುರು ಮಾಡ್ತಿತ್.

ಆದ್ರೆ ಅವ್ಳಿಗೆ ಕಷ್ಟ ಆಗ್‌ತಿದ್ದದ್ ಅತ್ತಿಗೆನ ಮನೆಯವು ಬಾಕನ ಅವೆಲ್ಲಾ ಎಂತ ಹೇಳಿ ಕೊಡ್ತಿದ್ದೊನೊಏನೋ. ಅವೆಲ್ಲಾ ಬಂದ್ ಹೋದ ಮ್ಯಾಲೆ ಶಾಲಿನಿ ಬಯ್ಯದು ಜಾಸ್ತಿ ಆಗ್‌ತಿತ್ತ್.

ಕಳ್ದ ಸಲ ಮನೆಗೆ ಹೋಗಿರ್ಕನ ಶಾರದ ಪ್ರೀತಿಯಿಂದ ಅವಳ ತಲೆ ನೇವರ್ಸಿ "ಯಾಕಮ್ಮ, ಬಾಳ ಲಾಚಾರ್ ಆಗೊಳ, ಅಲ್ಲಿ ಎಲ್ಲಾ ಸರಿ ಯಾಗುಟ್ಟ"ತ ಕೇಳ್‌ದೊ."

ಅದ್ಕೆ ಭಾಗ್ಯ ತಲೆ ಆಡ್ಸಿ ಮೆಲ್ಲೆ, ನಗಾಡ್ತ್

"ಎಲ್ಲಾ ಲಾಯ್ಕಲಿ ನೋಡಿಕೊಂಡವೆಮ್ಮ, ಸ್ವಲ್ಪ ಓದಿಕೆ ಜಾಸ್ತಿ ಇದ್ದದೆ ಅಷ್ಟೆ"

ಭಾಗ್ಯಂಗೆ ಕಾಲೇಜ್‌ಲಿ ಜಾಸ್ತಿ ಫ್ರೆಂಡ್ಸ್ ಇತ್ತ್‌ಲೆ. ಅವ್ಳ ಮೆಚ್ಚಿನ ಗೆಳತಿಯರ್ ತೇಳ್ರೆ ವಾಣಿ ಮತ್ತೆ ಪ್ರೇಮ.

ಭಾಗ್ಯಳ ಕಾಲೇಜ್‌ಲಿ ಕೋ-ಎಜುಕೇಶನ್ ಇದ್ರಂದ್ದ ಅವ್ಳಿಗೆ ಹುಡುಗ ರೊಟ್ಟಿಗೆ ಇದ್ದ ಸಂಕೋಚ ಸ್ವಲ್ಪ ಕಮ್ಮಿಯಾಗಿತ್ತ್. ಆದ್ರೂ ಅವ್ಳು ಯಾರೊಟ್ಟಿಗೆ

ಜಾಸ್ತಿ ಮಾತಾಡ್‌ತಿತ್ತ್‌ಲೆ.

ಅದ್ರೂ ಆಟ ಪಾಠಲಿ ಯಾಗೊಳೊ ಎಲ್ಲರ್‌ಕ್ಕಿಂತ ಮುಂದೆ ಇರ್ವ ಸೂರ್ಯ ತೇಳ್ರೆ ಅವ್ಳಿಗೇನೊ ಒಂದ್ ತರ ಅಚ್ಚ ಮೆಚ್ಚ್ ಅವಳ ಸೌಮ್ಯ ಮತ್ತೆ ಗಂಭೀರ ಮುಕ, ಅವನ ತಮಾಸೆ ಮಾತ್ ಕಾರಣ.

ಸೂರ್ಯ ಕಾಲೇಜ್ ಲೀಡರ್ ಆಗಿತ್ತ್. ಭಾಗ್ಯಳಿಗಿಂತ ಒಂದ್ ಕ್ಲಾಸ್ ಮುಂದೆ ಇತ್ತ್. ಕಾಲೇಜ್ ಲೀಡರ್ ತೇಳ್ವ ಅಹಂಕಾರ ಅವಂಗೆ ಇತ್ತ್‌ಲೆ. ಅವನ ಫ್ರೆಂಡ್‌ಶಿಫ್‌ಗಾಗಿ ಪ್ರಯತ್ನ ಪಟ್ಟವೆಲ್ಲಾ ನಿರಾಶೆಂದ ಸುಮ್ಮನಾಗಿದ್ದೊ.

ಕಾಲೇಜ್ ಬ್ಯೂಟಿತ ಹೆಸರ್ ಪಡ್ಡಿದ್ದ ವನಿತಾ ಕಾಲೇಜ್ ಲೈಬ್ರರಿಲಿ

ಯಾವುದೋ ಪುಸ್ತಕ ಓದಿಕಂಡ್ ಕುದ್ದಿತ್. ಅವ್ಳ ಅಹಂಕಾರಂದಾಗಿ ಯಾರೂ ಅವ್ಳೊಟ್ಟಿಗೆ ಸೇರ್‌ತಿತ್‌ಲೆ. ಅವ್ಳ ಅಹಂಕಾರಕ್ಕೆ ಅವ್ಳ ಶ್ರೀಮಂತಿಕೆ ಹಂಗೆ, ಅವ್ಳು ಬಾಳಾ ಪೊರ್ಲು ಇದ್ದದ್ ಕಾರಣ ಆಗಿತ್ತ್. ದೇವ್ರು ಅವ್ಳಿಗೆ ಶ್ರೀಮಂತಿಕೆ, ಪೊರ್ಲು ಹಂಗೆ ಅಹಂಕಾರನೂ ಬಾಚಿ ಕೊಟ್ಟಿತ್ತ್. ಅಲ್ಲದೆ, ಬೇರೆಯವರ್ನ ಹೀಯಾಳಿಸುವ ಕಲೆನೂ ಅವ್ಳಿಗೆ ಇತ್ತ್.

ಅಕಾಸ್ಮತ್ತಾಗಿ ಅಲ್ಲಿಗೆ ಬಂದ ಸೂರ್ಯನ ಕಂಡ್ ಅವ್ಳ ಮೊಕ ಊರಗಲ ಆತ್‌ಹುಡ್ಕ್ತಿದ್ದ ನಿಧಿನೇ ಕಾಲ್‌ಬುಡಕ್ಕೆ ಬಂದಂಗೆ ಆತ್ತ್. ಇಂತ ಒಂದ್ ಅವಕಾಶಕ್ಕಾಗಿ ಸೂರ್ಯನ ಬಲೆಗೆ ಹಾಕಣಿಕೆ ಬಾಳಾದಿನಂದ ಕಾದ್‌ಕಂಡಿತ್ತ್.

ಆದರೆ ವನಿತಾನ ಸಭಾವ ತಿಳ್ದಿದ್ದ ಸೂರ್ಯ ಅವ್ಳ ಕಣ್ಣೆತ್ತಿ ಸಹ ನೋಡತಿತ್ತ್‌ಲೆ ಲೈಬ್ರಲಿ ಅವಳ್ನ ಕಂಡ್ ಅಂವ ಅಲ್ಲಿಂದ ಹೊರ್ಡಿಕೆ ನೋಡ್ತ್.

ಅಷ್ಟೊತ್ತಿಗೆ

"ಹಲೋ ಸೂರ್ಯ" ತೇಳ್ತ್ ವನಿತ.

"ಹಲೋ" ತ ಮಾತ್ರ ಹೇಳಿ ಹೆಂಗೂ ಬಂದದೇ ಉಟ್ಟ್‌ತೇಳಿಕಂಡ್ ತನಿಗೆ ಬೇಕಾದ ಪುಸ್ತಕ ತಕಂಡೇ ಹೋನೆತ ಪುಸ್ತಕ ಹುಡ್ಕಿಕೆ ಶುರ್ ಮಾಡ್ತ್ ಸೂರ್ಯ.

"ಸೂರ್ಯ ನೋಡಿ ಈ ಪುಸ್ತಕ ಓದಿವರ್ಳಿಯಾ" ಬಾಳಾ ಲಾಯ್ಕ ಉಟ್ಟು" ತೇಳಿ ತನ್ನ ಕೈಲಿ ಇದ್ದ ಪುಸ್ತಕನ ತೋರಿಸಿತ್ತ್. ಸೂರ್ಯ ತಲೆ ಎತ್ತಿ ನೋಡಿ, "ಓದಿವಳೆ" ತೇಳಿ ಪುನಃ ಪುಸ್ತಕ ಹುಡ್ಕಿಕೆ ಶುರು ಮಾಡ್ತ್. "ನೀವು ಯಾವ ಪುಸ್ತಕ ಹುಡ್ಕುದುತ ಹೇಳ್ರೆ ನಾನೂ ನಿಮ್‌ಗೆ ಸಹಾಯ ಮಾಡ್ನೆ."

"ನೋ ಥ್ಯಾಂಕ್ಸ್ ಮತ್ತೆ ಬಂದ್ ಹುಡ್ಕಿಕಣೆ" ತೇಳಿ ಅಂವ ಸರಸರಾತ ಹೊರ್ಟು ಹೋತ್.

ವನಿತಂಗೆ ಮುಕಕ್ಕೆ ಹೊಡ್ದಂಗೆ ಆದರೂ, "ಎಂತೆಂತವೊ ನನ್ನ ಪಡಿಯಕೆ ಪೂಜೆ ಮಾಡಿವೆ, ಇನ್ನ್ ಇಂವನೊಬ್ಬ ಎಷ್ಟ್ ದಿನ ಆಡ್ದೆತ ನೋಡಿನೆ" ತೇಳಿಕಂಡರೂ ಸೂರ್ಯ,

ಭಾಗ್ಯ, ವಾಣಿ, ಪ್ರೇಮ ಇವರೊಟ್ಟಿಗೆಲ್ಲಾ ಎಷ್ಟ್ ಲಾಯ್ಕ್ ಮಾತಾಡ್ದೆ ಅದ್ನ ಕಾಂಬಕನ ಇವ್ಳ ಹೊಟ್ಟೆಲಿ ಕಿಚ್ಚ್ ಹೊತ್ತಿ ದಂಗೆ ಆಗ್‌ತಿತ್ತ್. ಆದರೂ ಅವಳ್ ಪ್ರಯತ್ನ ಮಾಡ್ದು ಬುಟ್ಟಿತ್‌ಲೆ.

"ವನಿತಾ ಮನೆಗೆ ಹೋದುಲೆನಾ, ಬೆಲ್‌ಆಗಿ, ಹತ್ತ್ ನಿಮ್ಸ ಆತ್"

ಲೈಬ್ರರಿಲಿ ಮೇಜಿಗೆ ತಲೆವರ್ಗಿಸಿ ಕುದ್ದವಳಿಗೆ ಭಾಗ್ಯನ ಸ್ವರ ಕೇಳಿ

ಬ್ಯಾಗ ಬ್ಯಾಗ ಪುಸ್ತಕಗಳ್ನ ಜೋಡ್ಸಿಕಂಡ್, "ಥ್ಯಾಂಕ್ಸ್ ಭಾಗ್ಯ ಒಳ್ಳೆ ಇಂಟ್ರೆಸ್ಟಿಂಗ್ ಸ್ಟೋರಿ ಇತ್ತ್. ಹೊತ್ತು ಹೋದೇ ಗೊತ್ತಾತ್‌ಲೆ ಹಂಗೇ ಓದಿಕಂಡ್ ಕುದ್ದಿದ್ದೆ" ತ ಹೇಳಿ ಅಲ್ಲಿಂದ ಹೊರ್ಟತ್"

ಅವ್ಳು ಅತ್ತ ಹೋದಂಗೆ ವಾಣಿ.

" ಅಲ್ಲಾ ಯಾವ ರಾಜಕುಮಾರನ ಬಲೆಗೆ ಹಾಕಣಿಕೆ ಪ್ಲಾನ್ ಮಾಡಿಕಂಡಿತ್ತೊ" ತೇಳ್ಕನ ಎಲ್ಲವೂ ಜೋರ್ ನಗಾಡ್ದೊ.

"ಯಾವ ರಾಜಕುಮಾರ ಯಾಕೆ ಆ ಪಾಪದ ಸೂರ್ಯನ ಹೆಂಗೆ ತಿಂಬ ಹಂಗೆ ನೋಡ್ತಿದ್ದದೆ" ತೇಳ್ತ್ ಪ್ರೇಮ.

"ಅಲ್ಲಾ ನೋಡ್ ಅವ್ಳಿಗೆ ತಾನೇ ಬಾಳ ಚೆಲಿವೆತ ಎಷ್ಟೊಂದ್ ಅಹಂಕಾರ, ನಮ್ಮ ಭಾಗ್ಯ ಅವ್ಳಿಗಿಂತ  ಏನ್ ಕಮ್ಮಿ ಇಲ್ಲೆ"

"ಸಾಕ್, ಸುಮ್ಮನಿರಿ ನನ್ನ ಹೊಗ್ಳಿಕೆ ಶುರು ಮಾಡ್ಬೇಡಿ, ನಂಗೆ ಲೇಟಾದೆ, ಬೇಗ ಮನೆಗೆ ಪೋಯಿ, ಇಲ್ಲರೆ ನಂಗೆ ಅತ್ತಿಗೆ ಕೈಯಿಂದ ಮಂಗ್ಳಾರತಿ ಆದೆ"

"ಆಲ್‌ರೈಟ್ ಮ್ಯಾಡಂ, ಭಾಗ್ಯ ಶನಿವಾರದ ಪ್ರೋಗ್ರಾಂ ಗ್ಯಾನ ಉಟ್ಟಲ್ಲಾ ನಮ್ಮ ಅಕ್ಕನ ಕೂಸಿಗೆ ಹೆಸರ್ ಹಾಕುದು. ನೀನೂ ವಾಣಿ ತಪ್ಪಿಸಿಕಾದ್ ಅಂದ್ ಹೆಂಗೂ ಕಾಲೇಜಿಗೆ ರಜಾ ಉಟ್ಟು ಇಬ್ಬರೂ ಬೆಳಿಗ್ಗನೇ ಬಂದ್ ಬುಡಿ ನಾನ್ ಕಾಯ್ತಾ ಇದ್ದನೆ.

"ನಾನ್ ಅಣ್ಣ, ಅತ್ತಿಗೆನ ಪರ್ಮಿಸನ್ ತಗಂಡ ಮ್ಯಾಲೆ ಹೇಳ್‌ನೆ"

"ಆದೆಲ್ಲಾ ಆದುಲೆ ಭಾಗ್ಯ ನೀನ್ ಹೆಂಗಾರೆ ಒಪ್ಸಿ ಬಂದೇ ಬರಕು"

"ನೋಡ್ನೆ, ತಾಯಿ ಟ್ರೈಮಾಡ್ನೆ"

"ಮಾರ್ನೆ ದಿನ ಬೆಳಿಗ್ಗೆ ಪ್ರಶಾಂತ ಪೇಪರ್ ಓದಿಕಂಡ್ ಕುದ್ದಿತ್ತ್"

"ಅಣ್ಣಾ ನಾವ್‌ಗೆ ಈ ಶನಿವಾರ ಕಾಲೇಜಿಗೆ ರಜಾ ಉಟ್ಟ್"

"ಹೌದಲ್ಲಾ ಭಾಗ್ಯ ನಂಗೇ ಮರ್ತೇ ಹೋಗಿತ್ತ್ ನೋಡ್"

"ಮನೆಗೆ ಹೋಕೆ ಗ್ಯಾನಆತಾ "

"ಇಲ್ಲೆ ಅಣ್ಣಾ, ಅದ್ ......................"

"ಹೇಳವ್ವ, ಪರ್ವಾಗಿ ಇಲ್ಲೆ"

"ಅಣ್ಣಾ, ನನ್ನ ಫ್ರೆಂಡ್ ಪ್ರೇಮ ಉಟ್ಟಲ್ಲ ಅವಳ ಮನೆಲಿ ಅವ್ಳ ಅಕ್ಕನ ಕೂಸಿಗೆ

ಹೆಸರ್ ಹಾಕುದ್ ನನ್ನ ತುಂಬಾ ಕರ್ದುಟ್ಟು, ನಾನ್ ಹೋಗಿ ಬರ್ಲಾ"

"ನಿನ್ನ ಅತ್ತಿಗೆನ ಕೇಳ್ದಾ"

"ಇಲ್ಲೆ ಅಣ್ಣ ನಿನ್ನ ಕೇಳ್ದ ಮ್ಯಾಲೆ ಅತ್ತಿಗೆನ ಕೇಳೊನಾತ್ತಿದ್ದೆ"

"ಶಾಲಿನಿ ........... ಶಾಲಿನಿ .........."

"ಎಂತ ಕರ್ದರಿಯಾ, ಬೆಳ್ಗೆ ತಿಂಡಿ ಬೇಯ್ಸಿಕೂ ಬುಡ್ದ್‌ಲೆಪ್ಪಾ"

"ಇರ್ದು ಕಣ್ಣನು ಮೊಣ್ಣನುತ ಮೂರ್ ಜನ, ಮೂರ್ ಜನಕ್ಕೆ ಅಡ್ಗೆ ಮಾಡಿಕೆ ಯಾಕೆ ಹಿಂಗೆ ಆಡಿಯಾ"

"ಈಗ ಎಂತತ ಹೇಳಿ, ನಂಗೆ ಕೆಲ್ಸ ಉಟ್ಟು"

"ಮೊದ್ಲು ಹೇಳ್ದು ಕೇಳ್ ಮತ್ತೆ ತಿಂಡಿ ಮಾಡಿಕೆ ನಾನೂ ಬನ್ನೆ, ಸರಿನಾ"

"ನೀವ್ ಬಂದರೆ ಆತ್, ತಿಂಡಿ ಮಾಡಿ ಮುಗಿಯಕನ ಎಲ್ಲಾ ಖಾಲಿ ಆಗಿದ್ದದೆ"

"ಅಲ್ಲಾ ಕೇಳಿಲ್ಲಿ ನಾಳೆ ಶನಿವಾರ ಭಾಗ್ಯನ ಫ್ರೆಂಡ್ ಮನೆಲಿ ಕೂಸುಗೆ ಹೆಸ್ರ್ ಹಾಕೊ ಜಂಬರ ಉಟ್ಟಂತೆ, ಅವ್ಳು ಹೋಗ್ಲಾತ ಕೇಳ್ತಾ ಉಟ್ಟು, ಎಂತ ಹೇಳಿಯಾ"

"ಹೌದಾ ಭಾಗ್ಯ, ಎಲ್ಲಿ ಅವ್ರ ಮನೆ "

"ಇಲ್ಲೆ ಸ್ವಲ್ಪ ದೂರಲಿ ಅತ್ತಿಗೆ"

"ಬೇಗ ಬಂದ್ ಬುಟ್ಟಿಯಾ ಅಲ್ಲಾ"

"ಬೇಗ ಬಂದ್ ಬುಟ್ನೆ ಅತ್ಗೆ, ಥಾಂಕ್ಸ್ " ತೇಳಿ ವಳಗೆ ಹೋತ್ ಪ್ರೇಮಂಗೆ ಪೋನ್ ಮಾಡಿಕೆ.

"ನೋಡ್ ಕೂಸಿಗೆ ಎಷ್ಟ್ ಕುಶಿ ಆತ್ ನೀನ್ ಯಾಗೊಳು ಅವ್ಳ ಗೋಳು ಹೊಯ್ಕಂಡಿಯಪ್ಪಾ ಅವ್ಳ ಮುಖ ನೋಡಿಕೆ ಆದುಲೆ"

" ನಾನ್ ಎಂತ ಮಾಡ್ದು ಒಮ್ಮೊಮ್ಮೆ ಕೆಲ್ಸ ತುಂಬ ಇರ್ಕನ ಸುಸ್ತಾಗಿದ್ದದೆ. ಅವ್ಳು ಸುಮ್ಮನೆ ಕುದ್ದ್‌ಕಂಡ್ ಟಿವಿನೋಡಿಕಂಡ್ ಇರ್ದು ನೋಡ್ರೆ ಹೇಳಿ ಹೋದೆ"

"ಪಾಪ, ಅದ್ಕೆ, ನಮ್ಮನೇಲಿ ಯಾರಂದ್ಲೂ ಏನೂ ಹೇಳ್ಸಿಕಂಡ್ ಅಭ್ಯಾಸ ಇಲ್ಲೆ"

"ಸರಿ, ಮಾರಾಯ್ರೆ ನೀವ್ ಈಗ ಪೇಪರ್ ಓದಿರ್‍ಯಾ ಅಲ್ಲಾ ತಿಂಡಿ ಮಾಡಿಕೆ ...... ಬನ್ನೆ ತೇಳ್ದರಿ"

"ಅಯ್ಯೋ, ಈಗಷ್ಟೆ ಪೇಪರ್ ಬಂದುಟ್ಟು, ಸ್ವಲ್ಪ ಓದಿಕಣೆ ಪ್ಲೀಸ್"

"ಸರಿ ಸರಿ ಓದಿ, ನಾನ್ ತಮಾಸೆಗೆ ಹೇಳ್ದೆಅಷ್ಟೆ"

"ಅಯ್ಯೋ, ಹಾಲು ಒಲೆಲಿ ಮಡ್ಗಿದ್ದೆ....." ತೇಳಿ..... ಶಾಲಿನಿ ತಿರ್ಗಿದಾಗ, ಶಾಲಿನಿ ಬಂದ್ ಪ್ರಶಾಂತನ ಮೇಲೆ ಬೀತ್, ಅವ್ಳ ಸೆರ್ಗ್ ಅವನ ಕೈಲಿ ಇತ್ತ್, ಹಗುರಾಗಿ ನಿತ್ತಿದ್ದ ಅವ್ಳು ಸೀದಾ ಹತ್ರ ಬಂದಿತ್ತ್.

"ಅಯ್ಯೋ, ಸಾಕ್‌ಬುಡಿ ಹುಡ್‌ಗಾಟ, ಹಾಲು ಉಕ್ಕಿತೇನೊ" ತೇಳ್ದಾಗ ಪ್ರಶಾಂತ ಅವ್ಳ ಕೆನ್ನೆಗೆ ತುಟಿಯೊತ್ತಿತ್ತ್.

"ಇನ್ನು ಮದ್ವೆ ಆಗಿ ವರ್ಷ ಆತ್‌ಲೆ ಹುಡ್‌ಗಾಟ ಆಡದೆ ಇನ್ನ್ ಮುದ್ಕರಾಟ ಆಡ್ಲಾ" ತೇಳ್ತ್.

ಶಾಲಿನಿ ತಪ್ಪಿಸಿ ಕಂಡ್ ವಳಗೆ ಓಡ್ತ್.

******

ನಾಮಕರಣದ ಮನೆ ಗಿಜಿಬಿಜಿ ತೇಳ್ತಿತ್ತ್, ಭಾಗ್ಯ, ವಾಣಿಯರ್ ಬಾಕನ ಪ್ರೇಮ ಗೇಟ್ ಹತ್ರಾನೆ ಕಾದ್ ನಿತ್ತಿತ್ತ್, ಅವ್ರ ಕೈ ಹಿಡ್ಕಂಡೋಗಿ

ಎಲ್ಲವ್ಕೂ ಪರಿಚಯ ಮಾಡ್ಸಿತ್.

"ಅಮ್ಮ ನೋಡ್ ನೀನ್ ಯಾಗೋಳು ಹೇಳ್ತಿದ್ದಲ್ಲಾ ನಿನ್ನ ಫ್ರೆಂಡ್ಸ್‌ನ ನೋಡಕು ಕರ್ಕಂಡ್ ಬಾತ, ನೋಡು ಕರ್ಕಂಡ್ ಬಂದೊಳೆ" ಅವಳ ಅಮ್ಮಂಗೆ ಪರಿಚಯ ಮಾಡ್ಸಿ ಕೊಡ್ಕನ ಇಬ್ಬರೂ ಅವರ ಕಾಲ್ ಮುಟ್ಟಿ ನಮಸ್ಕಾರ ಮಾಡ್ದೊ ಅವುಕ್ಕೆ ಇವರ ನಯವಿನಯ ಕಂಡ್ ಬಾಳಕುಶಿ ಆತ್.

ತುಂಬಾ ಕುಶಿ ಆತ್ ನೀವ್ ಬಂದದ್, ಎಲ್ಲಿ ತಪ್ಪಿಕಂಡ್ರೆತ ಪ್ರೇಮಾ ಪೇಚಾಡಿ ಕಂಡಿತ್ತ್. ಅಂತು ಬಂದ್ರಲ್ಲಾ, ನಿಮ್ಮ ಮನೇಲೆಲ್ಲಾ ಉಸಾರೊಳನಾ" ತೇಳಿ ಬಾಯಿ ತುಂಬಾ ನಗೆಮೊಕಲಿ ಕೇಳ್ಕನ ಅವರ ವಳ್ಳತನ ಕಂಡ್ ಇವುಕೆ ಇಬ್ಬರ್ಗೂ ತುಂಬಾ ಕುಶಿ ಆತ್.

ಪ್ರೇಮ ಹಂಗೆ ಸಂಭ್ರಮಂದ ತನ್ನ ಅಪ್ಪ, ಅಕ್ಕ, ಅಣ್ಣ, ಭಾವ ಎಲ್ಲವ್ಕೂ ಪರಿಚಯ ಮಾಡ್ಸಿ ಕೊಟ್ಟತ್.

"ಇವು ನಮ್ಮ ಭಾವನ ದೊಡ್ಡಪ್ಪನ ಮಂಜ" ಅವರ ಕಡೆಂದ ಬಂದೊಳೊ" ತೇಳ್ಕನ ಭಾಗ್ಯ, ವಾಣಿ, ತಿರ್‍ಗಿ ನೋಡ್ದೊ.

"ಓ.........ಸೂರ್ಯ ....ಹಲೋ"

"ಹಲೋ ಹಲೋ ಏನ್ ಕಾಲೇಜ್ ಗೂಡೆಗಳೆಲ್ಲಾ ಇಲ್ಲಿ ಲೂಟಿ ಮಾಡಿಕೆ ಬಂದಂಗೆ ಕಂಡದೆ" ತೇಳಿ ನಗಾಡ್ತ್.

"ಸದ್ಯ ಇಲ್ಲಿ ನಾವು ಇಬ್ಬರೇ ಇರ್ದು, ಪ್ರೇಮ ಈ ಮನೆಯವ್‌ಳೆ ತಾನೆ"

"ಭಾಗ್ಯ ಇವು ನಮ್ಮ ಭಾವನ ಕಡೆಯವುತ ನಂಗೆ ಇಂದೇ ಗೊತ್ತಾದ್ ಕಾಲೇಜ್‌ಲಿ ನೋಡ್ದ್ ಅಷ್ಟೆ, ಅವ್ಕೂ ಗೊತ್ತ್‌ಲೆ"

"ಗೊತ್ತಿದ್ರೆ ಈ ಕಡೆ ಬರೋ ಸಾಹಸಾನೆ ಮಾಡ್‌ತಿತ್ತ್‌ಲೆ"

"ಮನೆಂದ ಪೋನ್ ಮಾಡಿ ನೀನೆ ಹೋಗ್ಬಿಡ್‌ತ ಹೇಳಿದ್ದೊ"

"ಅರೆ, ಬಂದ್ರೆಂತಾತ್ ಒಳ್ಳದೇ ಆತ್, ನಿಮ್ಮ ಪರಿಚಯ ಸರಿಯಾಗಿ ಆತ್"

"ಅದೂ ಒಂದು ಲೆಕ್ಕಲಿ ಸರಿತೇಳಿ" ಭಾಗ್ಯನ ನೋಡಿ ಕಣ್ಣ್ ಮಿಟುಕಿಸಿತ್ ಸೂರ್ಯ.

ಪ್ರೇಮ, ವಾಣಿನ ಕೈನ ಜಿಂಟಿತ್. ಅಷ್ಟೊತ್ತಿಗೆ ಪ್ರೇಮಾನ ಅಮ್ಮ ಕರ್ದಂದ್ರ

"ನೀವಿಬ್ಬರೂ ಇಲ್ಲೇ ಕುದ್ದಿರಿ, ನಾನ್ ಎಂತತ ಕೇಳಿಬನ್ನೆ" ತ ಅವ್ಳು ಒಳಗೆ ಓಡ್ತ್. ತನ್ನ ಪರಿಚಯದವರ್ನ ಕಾಂಬಕನ ವಾಣಿ......ಮಾತಾಡ್ಲಿಕೆ ಅವರ ಹತ್ರ ಹೋತ್ ಈಗ ಅಲ್ಲಿ ಸೂರ್ಯ ಭಾಗ್ಯ ಇಬ್ಬರೇ ಆದೊ.

ಭಾಗ್ಯ ಅಲ್ಲೆ ಟೀಪಾಯಿ ಮೇಲೆ ಇದ್ದ ಪೇಪರ್‌ನ ತಗಂಡ್ ಓದಿಕೆ ನೋಡ್ತ್ ಆದರೆ ಆತ್‌ಲೆ.

ಆ ಮೌನನ ಮುರ್ದ್ ಸೂರ್ಯ ಮಾತಿಗೆ ಶುರುಮಾಡ್ತ್.

"ಬಾಗ್ಯಶ್ರೀ ನೀವ್ ಇದೇ ಊರ್‌ನವಾ"

"ಇಲ್ಲೆ, ನಮ್ಮದ್ ಕೊಡಗ್, ಅಣ್ಣ ಇಲ್ಲೆ ಮೈಸೂರ್‌ಲಿ ಲೆಕ್ಚರರ್ ಆಗುಟ್ಟು ಹಂಗೆ ನಾನ್ ಅವ್ರ ಒಟ್ಟಿಗೆ ಇರ್ದು" ತೇಳ್ತ್.

"ನಿಮ್ಮ ನೋಡ್ರೆ ನಾನೂ ಹಂಗೇ ಗ್ಯಾನ ಮಾಡ್ದೆ"

"ಅದೆಂಗೆ ....."

"ಅರೆ ನಾನೂ ಕೊಡ್ಗಿನವನೇ .....

ನಮ್ಮ ಊರು ಭಾಗಮಂಡಲ ಹತ್ರ ತಾವೂರುತ, ನಮ್ಮ ಕೊಡ್ಗ್‌ನ ಗೂಡೆಗಳ ಪೊರ್ಲು ಆ ಸ್ಟೈಲ್ ನೋಡ್ರೆ ಗೊತ್ತಾಗಿ ಬುಟ್ಟದೆ. ಆದ್ ಯಾರಿಗೂ ಬಾದುಲೆ"

"ಮತ್ತೆ ಇಲ್ಲಿ ......"

"ಇಲ್ಲಿ ಹಾಸ್ಟೇಲ್‌ಲಿ ಹೇಳೋವು ಕೇಳೋವು ಇಲ್ಲದೆ ಕೊಳಿತಾ ವಳೆ"

"ಅಂದ್ರೆ .........."

"ಅಂದರೆ, ಮತ್ತೇನಿಲ್ಲೆ ನಮ್ಮ ಮನೆ ಇರ್ದು ಹಳ್ಳಿ ಪ್ರದೇಶಲಿ, ಅಣ್ಣ ಒಬ್ಬ ಓದಿ ಡಾಕ್ಟರಾಗುಟ್ಟು, ತಾನೂ ತುಂಬಾ ಓದಲೀತ ಇಲ್ಲಿ ನನ್ನ ಬುಟ್ಟೊಳೊ ಅಷ್ಟೆ." ತೇಳಿ ನಗಾಡ್ತ್.

ಆ ನಗೆ ಬಾಳಾ ಲಾಯಕ್ಕಾಗಿ ಕಂಡತ್ ಭಾಗ್ಯಂಗೆ

"ಅಂದರೆ ......ಸೂರ್ಯ......." ತ ಏನೋ ಹೇಳಕು ತೇಳುವ ಹೊತ್ತಿಗೆ

"ಏನೇ ಬಾರೀ ಕುಶೀಲಿ ವಳ .......ಏನಪ್ಪಾ ಸೂರ್ಯ ಈಗ ಅವ್ಳು ನನ್ನ ಕಸ್ಟಡೀಲಿ ಉಟ್ಟು" ತೇಳಿ ಇಬ್ಬರ ಕಡೆ ನೋಡಿ ಕಣ್ಣ್ ಮಿಟುಕಿಸಿತ್ ಪ್ರೇಮ.

"ತೂ ಹೋಗಪ್ಪ........ ಎಂತೆಂತೋ ಹೇಳ್ಬಡ" ಭಾಗ್ಯ ಸೂರ್ಯನ ಮುಖ ನೋಡಿರೆ

ಅಲ್ಲಿ ಆರಾಧನಾ ದೃಷ್ಟಿ ಕಂಡತ್. ಅವ್ಳು ಎದ್ದ್ ಪ್ರೇಮ ನೊಟ್ಟಿಗೆ ವಳಗೆ ಹೋತ್.

ಸಿನಿಮಾ ಪದನ ಹಾಡಿಕಂಡ್ ಒಳಗೆ ಬಂದ ಭಾಗ್ಯನ ಮುಕ ಅರಳಿದ ತಾವರೆನಂಗಿತ್ತ್ ಮನಸ್‌ನ ನವಿಲ್ ಗರಿಕೆದರಿ ನಾಟ್ಯವಾಡ್ತಿತ್ತ್.

ಮನಸ್‌ನ ತುಂಬೆಲ್ಲಾ ಸುಂದರ ಕಲ್ಪನೆಗ.

"ಸೂರ್ಯ ......" ಅವನ ಆ ಸುಂದರ ಮುಖ! ಅವನ ಆರಾಧನಾ ನೋಟ ! ...........ಒಂದು ಸಮಯ ......ಓಹ್ ನಾನೆಷ್ಟ್ ಸುಖಿತ ಗ್ಯಾನ ಮಾಡಿಕಂಡ್ ಕಣ್ಣ್ ಮುಚ್ಚಿತ್.

"ಏನ್ ಭಾಗ್ಯ ನಿನ್ನ ಎಷ್ಟ್ ದಪ ಕರ್ಯದು. ಕರ್ದರೂ ಕೇಳ್ಸಿತ್‌ಲೆ.

ಇಲ್ಲಿ ಬಂದ್ ನೋಡ್ರೆ ಸುಮ್ಮನೆ ಕುದ್ದೊಳ ಏನ್ ಹಗಲ್‌ಲೇ ಕನ್ಸ್

ಕಾಣ್ತಾ ವಳ ಹೆಂಗೆ? ನೇಮಿಂಗ್ ಸೆರೆಮನಿ ಗ್ರ್ಯಾಂಡ್ ಆಗಿತ್ತಾ"

"ಓ ಸಾರಿ ಅತ್ತಿಗೆ ನೀವ್ ಕರ್ದದ್ ಕೇಳ್ಸಿತ್‌ಲೆ ನೇಮಿಂಗ್ ಸೆರೆಮನಿ ಗೌಜಿ ಇತ್ತ್. ನಾನ್ ಹೋದ್ ಅವ್ಕೆ ತುಂಬಾ ಕುಶಿ ಆತ್ ಅತ್ತಿಗೆ"

"ಕೂಸ್‌ಗೆ ಎಂತ ಹೆಸ್ರು ಹಾಕ್ಕೊಳೊ"

"ಕೂಸ್ ಹೆಸ್ರ್ ಅಕಿಲ್ ಎಷ್ಟ್ ಪೊರ್ಲು ಉಟ್ಟು ತೇಳ್ದರೆ, ವಳ್ಳೆ ಟೊಮೆಟೋ ಹಣ್ಣ್‌ನಂಗೆ ಉಟ್ಟು.

"ಸರಿ ಬಾ ಕಾಫಿ ತಿಂಡಿ ತಕಾ" ಅಂತ ಹೇಳಿ ಶಾಲಿನಿ ಒಳಗೆ ನಡ್ತ್ .ಮಾರನೇ ದಿನ ಕಾಲೇಜ್ ಗೇಟ್‌ಲೇ ಸಿಕ್ಕಿದ ಸೂರ್ಯ "ಹಲೋ" ತೇಳ್ತ್.

ಭಾಗ್ಯ "ಹಲೋ" ತೇಳಿ ಕಾಲೇಜ್ ಒಳಗೆ ಹೊರ್ಟ್‌ಹೋತು. ಮತ್ತೆ ಆಗೊಮ್ಮೆ ಈಗೊಮ್ಮೆ ಸೂರ್ಯನ ಭೇಟಿ ಲೈಬ್ರರಿಲೋ, ದಾರಿಲೋ ಆಗ್ತಿತ್ತ್. ಆದರೆ ಜೊತೆಲಿ ಗೆಳತಿಯರ್ ಇರ್ತಿದ್ದರಿಂದ ಮಾತಿಗೆ ಅವಕಾಶ ಇರ್ತಿತ್‌ಲೆ.

*********

ಹೊಸ ವರ್ಷದ ಆಗಮನ ಆಗಿತ್ತ್. ಮೊದ್ಲ್‌ಲೆಲ್ಲಾ ತರತರದ ಸುಂದರ ಗ್ರೀಟಿಂಗ್ ಕಾರ್ಡ್‌ಗಳ್ನ ಕಳ್ಸುದೇ ಒಂದ್ ಸಂಭ್ರಮ. ಆದರೆ ಈಗೆಲ್ಲಾ ಎಸ್‌ಎಂಎಸ್, ಫೇಸ್‌ಬುಕ್, ವಾಟ್ಸ್‌ಅಪ್, ಮೆಸೇಜ್‌ಲಿ ಎಲ್ಲ ಮುಗ್ದ್ ಹೋಗ್ತಾ ಉಟ್ಟ್ ಅಲ್ಲದೆ ಫೋನ್ ಮಾಡಿ ವಿಶ್ ಮಾಡುದ್ ಆಗ್ತಾ ಉಟ್ಟು. ಆಗೆಲ್ಲಾ ಗ್ರೀಟಿಂಗ್ಸ್ ಕಾರ್ಡ್ ತೆಗಿಯಕೆ ಅಂಗಡಿಗೆ ಹೋದು ಕಾರ್ಡ್ ಹುಡ್ಕಿ ಹುಡ್ಕಿ ಸೆಲೆಕ್ಟ್ ಮಾಡಿ, ಸ್ಟ್ಯಾಂಪ್ ಅಂಟ್ಸಿ ಪೋಸ್ಟ್ ಮಾಡ್ದು. ಮತ್ತೆ ಫ್ರೆಂಡ್ಸ್‌ಗಳೆಂದ ನೆಂಟರ್‌ಂದ ಬರುವ ಕಾರ್ಡ್‌ಗಳಿಗೆ ಪಾರ ಕಾಯದೇ ಒಂದೇ ಮಜಾ ಇರ್ತಾ ಇತ್ತ್.

ಈ ವರ್ಷ ಹೊಸ ವರ್ಷ ಕಾಲೇಜಿಗೆ ರಜಾ ಇದ್ರಂದ ಪ್ರಶಾಂತ್ ಶಾಲಿನಿ ಮತ್ತೆ ಭಾಗ್ಯ ಅಂದ್ ಸಿನಿಮಾ ನೋಡಿಕೆ ಹೋದುತ ಪ್ಲಾನ್ ಮಾಡ್ದೊ ಮಾರ್ನಿಂಗ್ ಷೋಗೆ ಹೋಗಿ ಬಾಕನ ನಾಲ್ಕೈದು ಕಾಗದಗಳ್ನ ಪೋಸ್ಟ್‌ಮನ್ ಹಾಕಿ ಹೋಗಿತ್ತ್.

ಆದ್ರಲ್ಲಿ ಎರಡು ಕಾಗದ ಭಾಗ್ಯನ ಹೆಸ್ರಿಗೆ ಇತ್ತ್ ಮತ್ತೆಲ್ಲಾ ಪ್ರಶಾಂತ್‌ಗೆ ಬಂದಿದ್ದೊ ಎರಡೂ ಗ್ರೀಟಿಂಗ್ಸ್ ಒಂದು ಜಯಶ್ರೀದ್, ಅವ್ಳು ಗ್ರೀಟಿಂಗ್ ಕಳ್ಸೊ ಅಭ್ಯಾಸನ ಬಿಟ್ಟಿತ್‌ಲೆ.

ಇನ್ನೊಂದು ಗ್ರೀಟಿಂಗ್ಸ್ ಯಾರ್ದೂತ ಗೊತ್ತಾತ್‌ಲೆ ತೆರ್ದು ನೋಡಿರೂ ಯಾರು ಕಳ್ಸಿದ್‌ತ ಹೆಸ್ರೇ ಇತ್ತ್‌ಲೆ ಗ್ರೀಟಿಂಗ್ ಬಾಳಾ ಲಾಯ್ಕ ಇತ್ತ್ ಪೋರ್ಲಾದ ತಿಳಿ ಕೆಂಪು ಗುಲಾಬಿ ಮೇಲೆ ಕುದ್ದ ದುಂಬಿ ಹಾಯಾಗಿ ಜೇನ್ ಹೀರ್‌ತಿತ್ತ್ . ಬಾಳಾ ಸೂಕ್ಷ್ಮವಾಗಿ ನೋಡ್ಕನ ದುಂಬಿಯ ರೆಕ್ಕೆಯ ಮೇಲೆ ಕಂಡೂ ಕಾಣದಂಗೆ "ಬರ್ದಿತ್ತ್.......ಸೂರ್ಯ".

ಭಾಗ್ಯನ ಎದೆ ಬಡ್ತ ಜಾಸ್ತಿಯಾತ್, ಗ್ರೀಟಿಂಗ್‌ನ ಕವರೊಳಗೆ ಹಾಕಿ ರೂಮಿಗೆ ಹೋಗಿ ಅದ್ನ ತಲೆಮೆತ್ತೆ ಕೆಳಗೆ ಮಡ್ಗಿ ಒಳಗೆ ಹೋತ್.

ಗ್ರೀಟಿಂಗ್ ಪರಿಣಾಮವಾಗಿ ಅವ್ಳ ಮುಖದ ಮೇಲೆ ಗಾಬರಿ, ಸಂತೋಷ ಎರ್ಡೂ ಕಾಂಬತಿತ್ತ್. ಅತ್ತಿಗೆ ನೋಡ್ರೆ ಕಷ್ಟತ ಬಾತ್ ರೂಮಿಗೆ ಹೋಗಿ ಮುಖತೊಳ್ದ್ ಅತ್ತಿಗೆಗೆ ಸಹಾಯ ಮಾಡಿಕೆ ಅಡ್ಗೆ ಮನೆಗೆ ಹೋತ್.

*********

ಭಾಗ್ಯನ ಮೊದ್ಲನೇ ವರ್ಷದ ಓದ್ ಮುಗ್‌ದಿತ್ತ್.

ಮುದ್ದು ಮುದ್ದಾದ ಗೊಂಬೆನಂಗೆ ಇದ್ದ ರೇಷ್ಮಾ ಪ್ರಶಾಂತ ಮತ್ತೆ ಶಾಲಿನಿ ಬಾಳ್‌ನ ಬಳ್ಳಿಲಿ ಹೂವಾಗಿ ಅರಳಿತ್ತ್.

ಭಾಗ್ಯ-ಸೂರ್ಯನ ಪರಿಚಯ ಪ್ರೇಮ ಆಗಿ ಮಾರ್ಪಾಡ್ ಆಗಿತ್ತ್ ಅದ್ಕೆ ಪ್ರೇಮನ ಸಹಕಾರ ಸಹ ಇತ್ತ್. ಕೆಲವೊಮ್ಮೆ ಪ್ರೇಮಾ ಮಧ್ಯವರ್ತಿ ಆಗ್‌ತಿತ್ತ್.

ಮನೇಲಿ, ಅಣ್ಣಂಗೆ ಅತ್ತಿಗೆಗೆ ಗೊತ್ತಾದರೆ ಎಂತ ಮಾಡ್ದುತ ಹೆದ್‌ರಿ ನಡ್ಗಿ ಹೋಗಿತ್ತ್. ಆದರೆ ಸೂರ್ಯ ಯಾಗೊಳು ಕೈಬಿಡ್ಕಿಲೆತ ಭರವಸೆ ಇತ್ತ್.

ಭಾಗ್ಯ ಎರಡನೇ ವರ್ಷದ ಪಿಯುಸಿಗೆ ಬಂದಿತ್ತ್. ಸೂರ್ಯ ಅವಳ ಕಾಲೇಜ್ ಬುಟ್ ಮೈಸೂರ್‌ಲೇ ಇರ್ವ ಇಂಜಿನಿಯರಿಂಗ್ ಕಾಲೇಜಿಗೆ ಸೇರಿತ್ತ್. ಆದ್ರಂದ ದಿನಾ ಅವ್ನ ಕಾಂಬ ಅವ್‌ಕಾಶ ಇತ್ತ್‌ಲೆ. ಆದ್ರೆ ಅವರ ಪ್ರೇಮ ಮೊಬೈಲ್‌ಲೇ ಅರಳ್‌ತಿತ್ತ್,

ಅಂದ್ ಕಾಲೇಜ್‌ಂದ ಹೊರ್ಡೋ ಹೊತ್ತಿಗೆ ಶುರಾದ ಮಳೆ ಬರ್ತಾ ಬರ್ತಾ ಜೋರ್

ಆತ್. ಎಷ್ಟ್ ಕಾದರೂ ಒಂದ್ ಆಟೊ ಸಿಕ್ಕಿತ್‌ಲೆ ಮಳೆ ಸ್ವಲ್ಪ ಕಮ್ಮಿ ಯಾಕನ ಭಾಗ್ಯ, ವಾಣಿ, ಪ್ರೇಮಾ, ಮನೆ ಕಡೆ ಹೆಜ್ಜೆ ಹಾಕಿದೊ ಅರ್ಧದಾರಿಗೆ ಎತ್ತ್‌ಕನ ಮತ್ತೆ ಮಳೆ ಸುರು ಆತ್ .

ಮಳೆಲಿ ನೆಂದ್ ತೊಪ್ಪೆಯಾಗಿ ಮನೆಗೆ ಬಂದ ಭಾಗ್ಯಂಗೆ ಮೊದ್ಲ್ ಕಂಡದ್ ಸೋಫಾಲಿ ಕುದ್ದ ಅಪ್ಪನ!

ಆಶ್ಚರ್ಯಂದ, ಅಪ್ಪಾ ಈಗ ಬಂದ್ರಾ, ಅಮ್ಮ, ಜಯಕ್ಕ ಉಸಾರೊಳನಾ"

ಒಂದೇ ಉಸುರಿಗೆ ಕೇಳ್ತ್.

"ಅವೆಲ್ಲಾ ಉಸಾರೊಳೊ, ಸದ್ಯ ಈಗ ನೀನ್ ಹೋಗ್ ತಲೆ ಮೈಯೆಲ್ಲ ಒರ್‌ಸ್ ಹೋಗು, ಶೀತ ಆದು" ತೇಳ್ದೊ

ಭಾಗ್ಯ ಹಾರಿಕಂಡ್ ವಳಗೆ ಓಡ್ತ್.

ಬಟ್ಟೆ ಬದ್ಲಾಯಿಸಿ ಕಾಫಿ ಮತ್ತೆ ತಿಂಡಿನೊಟ್ಟಿಗೆ ಬಂದ್ ಅಪ್ಪನೊಟ್ಟಿಗೆ ಕುದ್ದತ್ ಭಾಗ್ಯ ಶಾಲಿನಿನೂ ಅಲ್ಲಿಗೆ ಬಾತ್.

ಇವೆಲ್ಲಾ ಮಾತಾಡ್‌ತಿದ್ದಂಗೆ ಕಾಲೇಜ್‌ಂದ ಪ್ರಶಾಂತನೂ ಬಾತ್

ಅಷ್ಟೊತ್ತಿಗೆ ಮಲ್ಗಿದ್ದ ರೇಷ್ಮಾ ಎದ್ದ್ ಮರ್ಡಿಕೆ ಶುರು ಮಾಡ್ತ್.

ಭಾಗ್ಯ ಹೋಗಿ ಎತ್ತಿಕಂಡ್ ಬಾತ್ ರೇಷ್ಮಾ ಶಾಲಿನಿಗಿಂತ ಭಾಗ್ಯ ನ ಜಾಸ್ತಿ ಹೊಂದಿಕೊಂಡಿತ್ತ್ ಒಮ್ಮೊಮ್ಮೆ ಶಾಲಿನಿನೆ ಹೇಳ್ತಿತ್.

"ಭಾಗ್ಯ ನೀನ್ ಜಾಸ್ತಿ ಮುದ್ದ್ ಮಾಡ್ಬೇಡ, ಮತ್ತೇ ನನ್ನ ಹತ್ರಾನೆ ಬಾಕಿಲೆ "

ರೇಷ್ಮಾ ಊಟ ಮಾಡ್ಲಿಕೂ ಭಾಗ್ಯನ ಹತ್ರ ಹೋಕೆ ಹಟ ಮಾಡ್ತಿತ್ತ್.

ಇದ್ರಂದ ಶಾಲಿನಿಗೆ ಭಾಗ್ಯನ ಮೇಲೆ ಹೊಟ್ಟೆಕಿಚ್ಚಾಗ್‌ತ್ತಿತ್ತ್ ಮೊದ್ಲೇ ಸಿಡಿಸಿಡಿ ತೇಳ್‌ತಿದ್ದ ಶಾಲಿನಿ ಈಗ ಮತ್ತಷ್ಟು ಸಹನೆ ಕಳ್ಕಂಡಿತ್.

ರಾತ್ರಿ ಊಟ ಮಾಡಿ ಆದ ಮ್ಯಾಲೆ ರಾಮಯ್ಯನವು ತಾವು ಬಂದ ಕಾರಣ ತಿಳ್ಸಿದೊ.

"ಜಯಶ್ರೀ ನ ನೋಡಿಕೆ ಹೊಸ ನೆಂಟರ್ ಬರ್ತಾವಳೊ" ತೇಳ್ಕನ ಎಲ್ಲವ್ಕೂ ಬಾಳ ಕುಸಿ ಆತ್.

"ಹೈದ ಹೆಂಗುಟಪ್ಪ" ಎಲ್ಲವು ಒಟ್ಟಿಗೆ ಕೇಳ್ದೊ

"ಹೈದ ಲಾಯ್ಕ ಉಟ್ಟು ಡಾಕ್ಟರ್, ವಳ್ಳ ಮನೆಸ್ತಾನ ಮನೆಲಿ ಅನುಕೂಲ ಉಟ್ಟು, ಇಬ್ಬರೇ ಗಂಡು ಮಕ್ಕ, ಅವರಲ್ಲಿ ಇಂವ ಮೊದಲ್ನೆಯವ ಇನ್ನೊಬ್ಬ ಕಾಲೇಜ್‌ಲಿ ಓದ್ತಾ ಉಟ್ಟುಗಡ" ತೇಳಿ ವಿವರವಾಗಿ ಹೇಳ್ದೊ.

"ವಳ್ಳೆ ನೆಂಟಸ್ತಾನ ಕಂಡದೆ ಅಲ್ಲಾ" ಪ್ರಶಾಂತ ಹೇಳ್ತ್.

"ಅದ್ಕೇ ಒಪ್ಪಿಗೆ ಕೊಡಿಕೆ ಮೊದಲು ನಿಮ್ಮೆಲ್ಲರ್‌ನ ಕೇಳಿ ಅಭಿಪ್ರಾಯ ತಿಳ್ಕೊಣೊತ ಬಂದೆ"

"ಅದ್ಕೇನ್ ಜಯಂಗೆ ನೀವ್‌ಗೆ ಒಪ್ಪಿಗೆ ಆದರೆ ಸಂತೋಸಲಿ ಒಪ್ಪಿಗೆ ಕೊಡಿ ಅಪ್ಪಾ" ಪ್ರಶಾಂತ ಹೇಳ್ತ್ ಶಾಲಿನಿ ಭಾಗ್ಯನೂ ಧ್ವನಿಗೂಡಿಸಿದೊ.

"ಈಗ ನೋಡಿ ಹೋಗೊಳೊ ಅಷ್ಟೆ, ಒಪ್ಪಿಗೆ ಆದ್ರೆ ಫೋನ್ ಮಾಡ್‌ವೆತ ಹೇಳಿ ಹೋಗೊಳೊ"

"ಅವು ಒಪ್ಪಿರೆ ಬೇಗ ಮದುವೆ ಮಾಡಿ ಬಿಡ್ನೊ ಅಪ್ಪ" ಪ್ರಶಾಂತ್ ಹೇಳ್ತ್

"ಬೇಗ ತೇಳ್‌ರೆ ಮುಂದಿನ ಏಪ್ರಿಲ್– ಮೇ ಹಿಂಗೆ ಮಾಡಿಕೆ ಆದು ಬೇಕಾದರೆ ಎಂಗೇಜ್‌ಮೆಂಟ್ ಇಲ್ಲರೆ ಲಗ್ನಪತ್ರಿಕೆ ಮಾಡ್ಸಿ ಬಿಡೋನ"

"ಲಗ್ನ ಪತ್ರಿಕೆ ಬೇಡಪ್ಪಾ, ಎಂಗೇಜ್ ಮೇಂಟ್ ಮಾಡನ ನಾವ್ ಗೌಜಿ ಮಾಡಕ್" ಭಾಗ್ಯ ಹೇಳ್ತ್.

"ಸರಿ ಹಂಗೇ ಮಾಡನಾ, ಯಾವುದಕ್ಕೂ ಅವರ್‌ಂದ ಸುದ್ದಿ ಬರ್ಲಿ"

ತಿಳ್ಸಿ ಹೋಗಿದ್ದಂಗೆ ಹೈದನ ಕಡೆಂದ ಫೋನ್ ಮಾಡಿ ಒಪ್ಪಿಗೆ ತಿಳ್ಸಿದೊ ದಸರಾ ರಜೆ ಸಮೇಲಿ ಎಂಗೇಜ್ ಮೆಂಟ್ ಮಾಡಿಕೆ ಎರ್ಡೂ ಕಡೆವು ಸೇರಿ ತೀರ್ಮಾನ ಮಾಡ್ದೊ.

ಎಂಗೇಜ್ ಮೆಂಟಿಗೆ ಭಾಗ್ಯ ಮೂರು ದಿನ ಕಾಲೇಜಿಗೆ ಚಕ್ಕರ್ ಹಾಕಿತ್. ಹೈದನ ಕಡೆಂದ ಅವರ ಹತ್ರದ ನೆಂಟರ್‌ಗ ಮಾತ್ರ

ಬಂದಿದ್ದೊ. ವೀಳ್ಯ ಶಾಸ್ತ್ರ ಮುಗ್ದ ಮೇಲೆ ಉಂಗುರ ಹಾಕುವ ಶಾಸ್ತ್ರ ಆದ ಮೇಲೆ ಎಲ್ಲವೂ ಕಳ್ಳು ಕುಡ್ದ್ ಊಟ ಮಾಡಿ ಅವರವರ ಮನೆಗೆ ಹೊರ್ಟೊ ಹೊರ್ಡಿಕೆ ಮುಂದೆ ಜಯಶ್ರೀನ ಹತ್ರ ಹೋಗಿ ಪೋನ್ ಮಾಡ್ತಾ ಇರ್‌ತ ಹೇಳಿ ಮೋಹನ ಅವಳ ಚಂದನ ಕಣ್ಣ್‌ಲೇ ಹೀರ್‌ತಾ ಕಾರ್ ಸ್ಟಾರ್ಟ್ ಮಾಡ್ತ್.

ಮೂರ್ ದಿನಂದ ಭಾಗನ ಕಾಣದೆ ಫೋನ್ ಇಲ್ಲದೆ ಸೂರ್ಯ ಚಡಪಡಿಸಿತ್ ನಾಲ್ಕನೇ ದಿನ ಭಾಗ್ಯನ ಕಾಂಬಕನ ಬೆಟ್ಟ್ ತೋರ್ಸಿತ್ "ನನ್ನ ಬುಟ್ಟ್ ಎಲ್ಲಿಗೆ ಹೋಗಿದ್ದೆ, ಇರ್ ನಿಂಗೆ ಮಾಡ್ನೆ "ತ ಹೇಳ್ದಂಗೆ ಇತ್ತ್ ಅವನ ಸನ್ನೆ.

ಭಾಗ್ಯನ ಕಾಲೇಜ್, ಸೂರ್ಯನ ಕಾಲೇಜ್ ಹತ್ರ ಇದ್ದದ್‌ರಿಂದ ಅವು ಆಗಾಗ ಭೇಟಿ ಆಗ್‌ತಿದ್ದೊ .

ಭಾಗ್ಯನೊಟ್ಟಿಗೆ ಅವಳ ಫ್ರೆಂಡ್ಸ್ ಇದ್ದದ್ರಂದ ಸಾಯಂಕಾಲ ಸಿಕ್ಕಿನೆತ
ಸನ್ನೆಲೇ ತಿಳ್ಸಿತ್.

ಸಾಯಂಕಾಲ ಆದುದನೇ ಕಾಯ್ತಿದ್ದ ಭಾಗ್ಯ ಫ್ರೆಂಡ್ಸ್‌ಗಳ್ನ ತಪ್ಪಿಸಿ
ಲೈಬ್ರರಿಲಿ ಸೂರ್ಯನ ಕಾಂಬಕೆ ಹೋತ್.

ಲೈಬ್ರರಿಲಿ ಸೂರ್ಯನ ಕಣ್ಣ್‌ಲೇ ಹುಡ್ಕಿತ್ ಎಲ್ಲೂ ಕಂಡತ್‌ಲೆ ಸ್ವಲ್ಪ ಹೊತ್ತು ಯಾವುದೊ ಪುಸ್ತಕನ ಮಗ್‌ಚಿ ಹಾಕಿತ್ ಆದರೆ ಮನ್ಸೆಲ್ಲಾ ಎಲ್ಲೋಇತ್ತ್. ಇನ್ನ್ ಅಂವ ಬಾಕಿಲೆತ ಹೊರಡಿಕೆ ತಿರ್‌ಗ್‌ಕನ ಸೂರ್ಯ ಅವಳ ಹಿಂದೇ ನಿತ್ತಿತ್ತ್. ಸೂರ್ಯನ ನೋಡಿ.

" ಅಬ್ಬ ಹೆದ್ರಿಬುಟ್ಟೆ ಎಷ್ಟೆತ್ತ್‌ಂದ ಹಿಂಗೆ ನಿಂತಿದ್ರಿ, ನಾನ್ ಹೊರ್‌ಡ್ನೊತ ಗ್ಯಾನ ಮಾಡ್ದೆ"

"ನನ್ನ ಮೂರ್ ದಿನ ಬುಟ್ಟ್ ಎಲ್ಲಿ ಓಡಿಹೋಗಿದ್ದ" ಸೂರ್ಯ ಕೇಳ್ತ್

"ನಮ್ಮನೆಲಿ ಎಂಗೇಜ್‌ಮೆಂಟ್ ಇತ್. ಅದ್ಕೆ ಕಾಲೇಜಿಗೆ ಚಕ್ಕರ್ ಹಾಕಿದೆ."

ಭಾಗ್ಯ ಹೇಳ್ಕನ ಸೂರ್ಯನ ಮುಕ ಚಪ್ಪೆ ಆತ್.

" ಯಾರ್‌ದ್ಗ ಎಂಗೇಜ್‌ಮೆಂಟ್ " ಸೂರ್ಯಕೇಳ್ತ್.

"ಸಧ್ಯ ನನ್ನ ಅಕ್ಕಂಗಪ್ಪ"

"ಅಬ್ಬ ಬದ್ಕಿದೆ ನಾನ್ ಎಲ್ಲೊ ನೀನ್ ನಂಗೆ ಕೈಕೊಟ್ಟಿಯಾತ ಗ್ಯಾನಮಾಡ್ದೆ"

"ನನ್ನ ನೋಡ್‌ರೆ ನಿಮಿಗೆ ಹಂಗೆ ಕಂಡದೆಯಾ?

ಹೆಂಗೆ ನಂಬುದು ಗೂಡೆಗಳ ಬಲವಂಥ ಮಾಡ್ದೊ ಒಪ್ಪಿ ಬುಟ್ಟೆತ.

ಹೇಳಿ ಬುಟ್ರೆ ನಂಬಿದವಂಗೆ ಕೈಕೊಟ್ಟ್"

"ಆತ್ ನಿಮಿಗೆ ಹಂಗೇ ಮಾಡ್ನೆ"

"ನೀನ್ ಹಂಗೆ ಮಾಡ್ರೆ ನಾನ್ ಸತ್ತೇ ಹೋನೆ, ನಿನ್ನ ಕೈಯಾರೆ ನನ್ನ ಕೊಂದ ಕೊಲೆಗಾರ್ತಿ ಆದಿಯ ನೀನ್"

"ಸರಿ ಹೊತ್ತಾತ್, ತಡ ಆದರೆ ಮನೇಲಿ ಬೈದವೆ" ತೇಳಿ ಭಾಗ್ಯ ಸೂರ್ಯಂಗೆ ಹೇಳಿ ಹೊರ್ಟತ್ "

ದಿನಗ ಕ್ಷಣಗಳಂಗೆ ಕಳ್ದ್ ಹೋಗಿ ಭಾಗ್ಯನ ಎರ್ಡನೇ ವರ್ಷದ ಓದು ಮುಗ್ದ್ ಪರೀಕ್ಷೆ ಬಂದೇ ಬುಟ್ತ್. ಓದಿಕೆ ಕಾಲೇಜಿಗೆ ರಜಾ ಬುಟ್ಟದ್ರಂದ ಭಾಗ್ಯ ಮೂರ್ನಾಡಿಗೆ ಹೊರ್ಟತ್.

ಭಾಗ್ಯನ ಪರೀಕ್ಷೆ ಕಳ್ದಂಗೆ ಜಯಶ್ರೀಗೆ ಮದುವೆತ ನಿಶ್ಚಯ ಮಾಡಿದ್ದೊ

ಅವ್ಳ ಪರೀಕ್ಷೆ ಮುಗ್ದ್ ಒಂದು ವಾರಲಿ ಮದುವೆ ಇತ್ತ್.

ಮನೆ ತುಂಬ ಮದುವೆ ಕಾಗದದ ಗುಡ್ಡೆ. ಯಾರ್‍ಯಾರಿಗೆ ಕಾಗದ ಕೊಡೊಕುತ ಪಟ್ಟಿ ಮಾಡಿಕೆ ಶುರು ಮಾಡ್ದೊ ಹಳೆ ನೆಂಟರ್‌ಗಳೆಲ್ಲ ಈಗ ಗ್ಯಾನ ಬಂದೊ.

ಭಾಗ್ಯ ಈ ಗಲಾಟೆ ನಡುಲಿ ಓದಿಕಂಡ್ ಜಯಶ್ರೀನ ತಮಾಶೆ ಮಾಡಿಕಂಡ್ ಇರ್ತಿತ್ತ್. ಮೊದಲೇ ಭಾಗ್ಯನಷ್ಟ್ ತಮಾಶೆ ಬುದ್ಧಿ ಇಲ್ಲದ ಜಯಶ್ರೀ ಈಗ ಮದುವೆಯ ನಾಚಿಕೆಲಿ ಮಾತೇ ಕಮ್ಮಿ ಆಗಿಬುಟ್ಟಿತ್ತ್ .

ಭಾಗ್ಯ ಪುಸ್ತಕ ತೆಗ್ದ್ ಓದಿಕೆ ಕುದ್ದರೆ ಅವ್ಳ ಪುಸ್ತಕಲೆಲ್ಲಾ ಸೂರ್ಯನ ಮುಕಾನೇ ಕಾಂಬತ್ತಿತ್ತ್. ಈಗ ರಜೆ ಆದ್ರಂದ ಅವ್ನ ಕಾಂಬಕ್ಕೆ ಆಗ್‌ತಿತ್ತ್‌ಲೆ. ಎಂತ ಇದ್ರು ಮೊಬೈಲ್‌ಲಿ ಇವ್ರ ಮಾತ್ ಕದ್ದ್ ಮುಚ್ಚಿ ನಡಿಯತಿತ್ತ್. ಭಾಗ್ಯ ಪರೀಕ್ಷೆನ ಲಾಯ್ಕ ಮಾಡಿತ್ತ್. ಸೂರ್ಯ ಇಂಜಿನಿಯರಿಂಗ್ ಕಡೇ ಸೆಮಿಸ್ಟರ್ ಅಂವ ಎಂ. ಎಸ್ ಮಾಡಿಕೆ ಫಾರಿನ್‌ಗೆ ಹೋಕುತೇಳಿ ಬಾರಿ ಕಷ್ಟ ಪಟ್ಟ್ ಓದ್ತಿತ್ತ್.

ಜಯಶ್ರೀನ ಮದುವೆ ಮೂರ್ನಾಡ್ ಗೌಡ ಸಮಾಜಲಿ ಗೌಜಿಲಿ ನಡ್ತ್ ಭಾಗ್ಯ ಸಿಕ್ಕಿದೇ ಚಾನ್ಸ್‌ತೇಳಿ ಅಕ್ಕ ಭಾವನ ಗೋಳುಹೊಯ್ಕಂಣ್ತ್. ಗಳಿಗೆಗೊಮ್ಮೆ ಭಾವನತ್ರ ಹೋಗಿ.

"ಡಾಕ್ಟ್ರೆ ನಮ್ಮಕ್ಕಂಗೆ ತಲೆ ಬ್ಯಾನೆ ಅಂತೆ ಸ್ವಲ್ಪ ಬಂದ್ ನೋಡಿ" ತ ಮತ್ತೊಮ್ಮೆ ಬಂದ್

"ಡಾಕ್ಟ್ರೆ, ನಮ್ಮಕ್ಕಂಗೆ ಬಾಳ ಸುಸ್ತಂತೆ" ತೇಳಿ ಅಕ್ಕನ ಕಡೆ ನೋಡ್ತಿತ್.

ಮೋಹನ್ ಜಯನ ಕಡೆ ನೋಡಿ ನಗಾಡಿ ಸುಮ್ಮನಾಗ್‌ತ್ತಿತ್ತ್ ಮಾತ್‌ಆಡುವಂಗೆ ಇತ್ತ್‌ಲೆ. ಮಾತಾಡ್ರೆ ಭಾಗ್ಯನ ಗ್ಯಾಂಗ್ ಗುಲ್ಲೆಬ್ಸ್‌ತ್ತಿದ್ದೊ.

ಎಲ್ಲವೂ ಒಂದಲ್ಲ ಒಂದು ತರಲಿ ಮದುಮಕ್ಕಳ್ನ ತಮಾಸೆ ಮಾಡ್‌ತ್ತಿದ್ದರೆ ಹೈದನ ಕಡೆಂದ ಬಂದಿದ್ದ ಚಿಗ್‌ರ್ ಮೀಸೆ ಹೈದ ಮಾತ್ರ ಭಾಗ್ಯನ್ನ ನೋಡೊದ್ರಲ್ಲೇ ತನ್ಮಯ ಆಗಿ ಬುಟ್ಟಿತ್ತ್.

ಭಾಗ್ಯ ಒಳಗೆ ಹೋದ ಕೂಡಲೇ

"ಮೋಹನ್ ಇದ್ ಯಾರಪ್ಪ ನೋಡಿಕೆ ಎರ್ಡ್ ಕಣ್ಣ್ ಸಾಲ್ದ್, ಎಂತಾ ಪೋರ್ಲು ಉಟ್ಟು."

"ಯಾರೋ ಮಹೇಶ ಅವ್ಳು ತೇಲ್ರೆ"

"ಅದೆರಾ ಮದ್ವೆಮನೆ ಇಡಿ ಬಳ್ಕುತಾ ಓಡಾಡ್ತಾ ಉಟ್ಟಲ್ಲ, ನಿನ್ನ ತಮಾಶೆ ಮಾಡ್ತಿತ್ತಲ್ಲ ಅವ್ಳು, ಪ್ಲೀಸ್ ಪರಿಚಯ ಮಾಡ್ಸ್‌ರಾ"

"ಅಯ್ಯೋ ಅವ್ಳು ಯಾರ್‌ತ ಮಾತ್ರ ಹೇಳ್ನೆ ಆದ್ರೆ ಪರ್ಚಯ ಮಾಡ್ಸಿಕೆ ಆದುಲೆರಾ ನನ್ನ ಗೊಡೆನೆ ಇನ್ನ್ ಸರಿಯಾಗಿ ಪರ್ಚಯ ಆತ್‌ಲೆ "ಅದ್ರೆ ನನ್ನ ಗೂಡೆನ ತಂಗೆತ ಗೊತ್ತುಟ್ಟು ಅಷ್ಟೇ"

"ಹಂಗಾರೆ ವಳ್ಳದೇ ಆತ್"

"ಮಹೇಶ, ಮದ್ವೆ ಕಳ್ದ ಮೂರನೇ ದಿನಕ್ಕೆ ಇಲ್ಲಿಗೆ ತುಪ್ಪ ತಾದು ಉಟ್ಟಲ್ಲ ಆಗ ನಮ್ಮೊಟ್ಟಿಗೆ ಬಾ, ಅವ್ರ ಮನೆಗೆ ಹೋದು ಅಲ್ಲಾ, ಅಲ್ಲಿ ಪರ್ಚಯ ಮಾಡ್ಸಿ ಕೊಟ್ನೆ"

"ಅಯ್ಯೋ ನಂಗೆ ರಜಾ ಇಲ್ಲೆರಾ, ಇನ್ನೊಮ್ಮೆ ಬನ್ನೆ"

ಮದುವೆ ಮುಗ್ದ್ ಹೈದನ ಕಡೆಯವ್ಕೆ ಹೆಣ್ಣು ಗಂಡ್ ವಹಿಸಿ ಕೊಟ್ಟೊ. ಶಾರದ ಒಳಗೆ ಎಲ್ಲಾ ಜೊಟ್ಸಿ ಕಂಡ್ ಹೊರ್ಡಿಕ್ ತಯಾರ್ ಮಾಡ್ತಿದ್ದೊ. ಎಚ್ಚರ ಮಾಡಿಕಣದಿದ್ರೆ ಮದುವೆಲಿ ಉಳ್ದ ಸಾಮಾನ್ನೆಲ್ಲಾ ಯಾರ್‍ಯಾರದೋ ಪಾಲ್ ಆಗಿಬುಟ್ಟದೆ. ಕೆಲವು ಜನ ಆದ್ಕೇತ ಕಾದ್ ಕಂಡಿದ್ದವೆ.

ಹೈದನ ಕಡೆಯವು ಹೊರ್ಟು ನಿತ್ತೊ ಭಾಗ್ಯಅಮ್ಮನ ಕರ್ದ್,

"ಬೇಗ ಬಾಮ್ಮಾ ಬೀಗಗ ಹೊರ್ಟುನಿತ್ತೊಳೊ" ತೇಳ್ಕನ ಎಲ್ಲವು ಬಿದ್ದ್ ಬಿದ್ದ್ ನಗಾಡ್ದೊ ಮಹೇಶ ಮಾತ್ರ ಅವಳ್ನ ಕಣ್ಣ್‌ಲೇ ಸೆರೆ ಹಿಡ್ದ್ ನೋಡ್‌ತಿತ್ತ್. ಭಾಗ್ಯ ಮಾತ್ರ ಅವನ ನೋಡಿ ಮುಕ ತಿರ್‍ಗಿಸಿತ್.

ಅಲ್ಲಿಗೆ ಬಂದ ಪ್ರಶಾಂತ,

"ಎಂತಮ್ಮ ಭಾಗ್ಯ ಬೀಗ ಗೀಗ ತೇಳ್ದ್‌ಲ್ಲ"

"ಮತ್ತೆಂತಣ್ಣ ಇವು ಬಂದ ಮ್ಯಾಲೆ ನಮ್ಮಕ್ಕನ ಬಾಯಿಗೆ ಬೀಗನೇ ಹಾಕಿಬುಟ್ಟೊಳೊ ಎಲ್ಲವು ಹೊರ್ಡುಕನ ಶಾರದ ಕಣ್ಣ್ ವರ್ಸಿಕಂಡೊ, ಜಯಶ್ರೀ ಭಾಗ್ಯ, ಶಾರದ, ಅಪ್ಪ ಅಣ್ಣನ ತಬ್ಬಿಕಂಡ್ ಮರ್ಲತ್"

ಎಲ್ಲವೂ ಕೈ ಬೀಸ್‌ತಿದ್ದಂಗೆ ಕಾರು ಧೂಳು ಏಳ್ಸಿಕಂಡ್ ಹೊರ್ಟ್ ಹೋತ್.

ಭಾಗ್ಯ ಡಿಸ್ಟಿಂಕ್ಸಲಿ ಪಾಸಾಗಿತ್ತ್. ಸೂರ್ಯಂಗೆ ಗ್ಯಾನ ಮಾಡ್ದಂಗೆ ರ್‍ಯಾಂಕ್ ಬಂದಿತ್ತ್. ಭಾಗ್ಯನೊಟ್ಟಿಗೆ ಪ್ರೇಮಾ, ವಾಣಿ ಪಾಸಾಗಿದ್ದೊ. ಜಂಭದ ಕೋಳಿ ವನಿತಾ ಗೋತಾ ಹೊಡ್ದಿತ್ತ್.

ಎಲ್ಲೆಲ್ಲೂ ಚಾಕ್‌ಲೇಟ್‌ಗಳ ಸುರಿಮಳೆ. ಚಾಕ್‌ಲೇಟ್ ಅಂಗಡಿಯವ್ಕೆ ಲಾಟರಿ ಹೊಡ್ದಂಗೆ.

ಮುಂದೆ ಭಾಗ್ಯನ ಫೈನಲ್ ಇಯರ್ ಓದು ಶುರು ಆತ್. ಆದರೆ ಸೂರ್ಯ ಪಾರಿನ್‌ಗೆ ಹೋದೆತ ಕೇಳಿ ಒಮ್ಮೆ ಇವ್ಳು ಸಣ್ಣ ಮಕ್ಕಳಂಗೆ ಕುಣ್‌ದಾಡ್ತ್. ಆದ್ರೆ ಅದ್ ಸ್ವಲ್ಪ ಹೊತ್ತು ಮಾತ್ರ ಮರುಗಳಿಗೆಲಿ ಅಂವ ತನ್ನಿಂದ ದೂರ ಬಾಳ ದೂರ ಹೊರ್ಟು ಹೋದೆತ ತಿಳ್ದ್ ಬಾಳಾ ಬ್ಯಾನೆ ಆತ್.

ಆದರೆ ಮುಂದೆ ಭಾಗ್ಯ ಫೈನಲ್ ಇಯರ್ ಓದು ಶೂರು ಆತ್.

ಸೂರ್ಯ ಫಾರಿನ್‌ಗೆ ಹೋದ ಮ್ಯಾಲೆ ನನ್ನ ಗ್ಯಾನ ಇದ್ದದೆನಾ? ಅಲ್ಲಿ ಬಿಳಿಗೂಡೆಗಳ ಕಾಂಬಕನ ಅವ್ರ ಮೋಹದ ಬಲೆಂದ ನನ್ನತ್ರ ಬಂದದೆನಾ? ಗ್ಯಾನ ಮಾಡ್ ತಿದ್ದಂಗೆ ಅವ್ಳ ಕಣ್ಣ್‌ಂದ ನೀರಿಳಿಯಕೆ ಶುರು ಆತ್.

ಆದರೆ, ತಕ್ಷಣ ನಾನ್ಯಾಕೆ ಇಷ್ಟೊಂದ್ ಗ್ಯಾನ ಮಾಡ್ನೆ ನನ್ನ ಸೂರ್ಯ ನಂಗೆಂದೂ ಮೋಸ ಮಾಡಿಕಿಲೆತೇಳಿ ಸಮಾಧಾನ ಮಾಡಿಕಣ್‌ತ್ತ್.

ಮೊಬೈಲ್ ರಿಂಗ್ ಆತ್ ಸೂರ್ಯ ಫೋನ್ ಮಾಡಿತ್ತ್. ಫೋನ್‌ಲೇ ಅಂವ ಅವ್ನ ಪ್ರೀತಿ ಪ್ರವಾಹನೇ ಹರ್ಸಿತ್.ಬರುವ ವಾರ ತಾನ್ ಭಾರತನ ಬುಟ್ನೆತ ಹಂಗೆ ಎರ್ಡ್ನೇ ವರ್ಷಲಿ ಓದ್ ಮುಗ್ಸಿಕಂಡ್ ಬನ್ನೆತ ಹೇಳ್ತ್.

ತನ್ನ ಹೃದಯನ ಇಲ್ಲೇ ಬುಟ್ಟ್ ಹೋಗ್ತಾ ವಳೆ ನಾನ್ ಬರುವವರೆಗೆ ನಂಗಾಗಿ ಕಾಯೋಕು ಎರ್ಡ್ ವರ್ಷ ಆಗ್‌ತಿದ್ದಂಗೆ ಹೂಮಾಲೆ ಹಿಡ್ಕಂಡ್ ಹಾರಿ ಬನ್ನೆತ ಹೇಳ್ತ್.

ಭಾಗ್ಯಂಗೆ ಎಂತ ಮಾತಾಡೊಕುತ ಗೋತ್ತಾತ್‌ಲೆ, ಕಣ್ಣ್‌ಂದ ಒಂದೇ ಸಮನೆ ನೀರ್ ಇಳಿತ್ತಿತ್ತ್. ಗಂಟಲ್‌ಂದ ಮಾತೇ ಹೊರ್ಬತ್‌ಲೆ.

ಸರಿ ನನ್ನ ಮರಿಬಡಾತ ಮಾತ್ರ ಹೇಳ್ತ್. ಹೋದಂಗೆ ಫೋನ್ ಮಾಡಿನೆತ ಹೇಳ್ತ್ ಸೂರ್ಯ.

ಭಾಗ್ಯನ ಫೈನಲ್ ಇಯರ್ ಓದ್ ಯಾವುದೇ ಉತ್ಸಾಹ ಇಲ್ಲದೆ ಚಪ್ಪೆಯಾಗಿ ಕಳ್ತ್, ಸೂರ್ಯನ ಕಾಣದೆ ಬಾಳಾ ಬೋರ್ ಆಗ್ತಿತ್ತ್! ಆದರೆ, ಸೂರ್ಯ ಹೋದ ಮ್ಯಾಲೆ ಅವಂದ ಯಾವುದೇ ಸಮಾಚಾರ ಇತ್ತ್‌ಲೆ ಇವ್ಳಿಗೆ ಫೋನ್ ಸಹ ಮಾಡ್ತ್‌ಲೆ.

ದಸರಾ ರಜಲಿ ಭಾಗ್ಯ ಮೂರ್ನಾಡಿಗೆ ಓಡೋಡಿ ಬಾತ್ ಕಾರಣ ಅಕ್ಕ ಮತ್ತೆ ಭಾವ ರಜೆಲಿ ಮನೆಗೆ ಬಂದಿದ್ದೊ. ಹಾಸನಲಿ ಇದ್ದ ಮೋಹನ್ ಮತ್ತೆ ಜಯಶ್ರೀ ಮದುವೆ ಕಳ್ದ ಮ್ಯಾಲೆ ಒಂದೆರಡು ಸಲ ಮಾತ್ರ ಊರಿಗೆ ಬಂದಿದ್ದೊ, ಬಾಳ ದಕ್ಷ ವೈದ್ಯ ಆಗಿದ್ರಂದ ಮೋಹನಂಗೆ ರಜಾ ಸಿಕ್ಕುದೇ ಕಷ್ಟ ಆಗಿತ್ತ್. ಈಗ ಮನೆಗೆ ಬಂದೊಳೊತ ಕೇಳಿ ಭಾಗ್ಯಂಗೆ ಬಾಳಾ ಕುಶಿ ಆಗಿತ್ತ್. ರೇಷ್ಮಾ ಭಾಗ್ಯನೊಟ್ಟಿಗೆ ಹಾರಿ ಬಂದಿತ್ತ್.

ಫೋನ್ ಮಾಡಿ ಹೇಳಿದ್ರಂದ ಅಪ್ಪ ಕಾರ್ ತಕಂಡ್ ಬಸ್ ಸ್ಟ್ಯಾಂಡಿಗೆ ಬಂದಿದ್ದೊ ಮನೆಗೆ ಬಾಕನ ಅಮ್ಮನ ಸ್ವಾಗತ ಕಾದಿತ್ತ್. ಅಮ್ಮನ ತಬ್ಬಿ ಕುಣ್‌ದಾಡ್ತ್.

ಅಕ್ಕ ಭಾವ ಯಾರ್ರೂ ಕಾಣದಿರ್ಕನ,

"ಅಮ್ಮ ಅಕ್ಕ ಭಾವ ಎಲ್ಲಿ ಕಾಣ್ತಾ ಇಲ್ಲೆ"

"ಅವೆಲ್ಲಾ ಊಟ ಮಾಡಿಕಂಡ್ ತೋಟದ ಕಡೆ ಸುತ್ತಾಡಿಕೆ ಹೋಗೊಳೊ ಒಟ್ಟಿಗೆ ನಿನ್ನ ಭಾವನ ಫ್ರೆಂಡ್ ಒಬ್ಬ ಬಂದುಟ್ಟು"

ಅಮ್ಮ ಮಗಳ ಮಾತ್ ಸಾಗ್‌ತಿದ್ದಂಗೆ ಕಿಲಕಿಲ ನಗಾಡಿಕಂಡ್ ಜಯಶ್ರೀ ಮತ್ತೆ ಉಳ್‌ದವೆಲ್ಲಾ ಬಂದೊ,

"ಓ ಜಯಕ್ಕ ವಂಡರ್‌ಫುಲ್ ಎಷ್ಟ್ ಲಾಯ್ಕ ಕಂಡಿಯಾ ಗೊತ್ತಾ" ನನ್ನಕಾಟ ಇಲ್ಲದೆ ಬಾರಿ ಕೊಬ್ಬಿ ಬುಟ್ಟೊಳ" ತೇಳ್ಕನ ಎಲ್ಲವೂ ನಗಾಡ್ದೊ.

"ಅಲ್ಲ ನಾನೇನೋ ಹಿಂಗೊಳೆ, ಆದ್ರೆ ನೀನ್ಯಾಕೆ ಲಾಚಾರ್ ಆಗೊಳಲ್ಲ"

"ನಿಂಗೇನ್ ಸದಾಕಾಲ ನಿನ್ನ ಡಾಕ್ಟ್ರ ನಿನ್ನ ಕಾವಲು ಕಾದದೆ"

"ಸರಿ ಸರಿ ನಿನ್ನ ಕಾವಲಿಗೂ ಒಬ್ಬ ಡಾಕ್ಟ್ರನೇ ತಂದರೆ ಆತ್"

"ಎಕ್ಸಾಟ್‌ಲೀ ..........." ತೇಳಿ ಒಳಗೆ ಬಾತ್ ಮೋಹನ್. ಒಟ್ಟಿಗೆ ಬಂದ ಭಾವನ ಫ್ರೆಂಡ್ಸ್‌ನ ನೋಡಿ ಭಾಗ್ಯಂಗೆ ಒಮ್ಮೆ ತಲೆ ತಿರ್‍ಗಿದಂಗೆ ಆತ್ ಅಕ್ಕನ ಮದ್ವೆಲಿ ನನ್ನ ತಿಂದ್ ಬಿಡುವಂಗೆ ನೋಡ್‌ತಿದ್ದಂವ ಇವನೆ ತೇಳಿ ಎದೆಲಿ ಒಂದ್‌ತರ ಆತ್. ಅಯ್ಯೋ ಇನ್ನ್ ಇವು ಹೋಗೊವರ್‍ಗೆ ಹೆಂಗಪ್ಪಾ ಸಹಿಸುದಪ್ಪಾ ಪ್ರಾಣಿನ ಇವ್ರದೆಲ್ಲಾ ಏನೋ ವಳಗೇ ..........ನಡೀತಾ ಉಟ್ಟುತ ಭಾಗ್ಯಂಗೆ ಅನ್ಸಿತ್ತ್.

"ಹ್ಯಾಗೊಳ್ರಿ ಭಾವ, ಈಗ್ಲಾದ್ರು ನಮ್ಮ ಗ್ಯಾನ ಬಾತಲ್ಲ"

"ನಾನೇನೋ ಬಾದು ಬ್ಯಾಡತ ಇದ್ದೆ, ಆದ್ರೆ ನಿನ್ನಕ್ಕ ಬುಡೊಕಲ್ಲಾ ನನ್ನ ಎಳ್ಕಂಡೇ ಬಂದುಟ್ಟು, ಭಾಗ್ಯ ಮರ್‍ತ್ ಬುಟ್ಟೆ ಇಂವ ನೋಡ್ ನನ್ನ ಕ್ಲೋಸ್ ಫ್ರೆಂಡ್ ಡಾ॥ ಮಹೇಶ್‌ತ ನಮ್ಮ ಮದ್ವೆಗೂ ಬಂದಿತ್ ಗ್ಯಾನ ಇರ್‍ದು ಅಲ್ಲಾ"

ಭಾಗ್ಯ ಸುಮ್ಮನೆ ಕೈ ಮುಗ್ತ್

"ಬಾ ಅಕ್ಕ ಗಂಡಸರೊಟ್ಟಿಗೆ ನಮಿಗೆ ಎಂತ ಮಾತ್ ವಳಗೆ ಪೋಯಿತ ಅಕ್ಕನ ಕೈ ಹಿಡ್ದ್ ಎಳಿಯಕನ"

"ಸ್ವಲ್ಪ ನಿಲ್ಲ್ ಭಾಗ್ಯ ವಳಗೆ ಬಾಳಾ ಸೆಕೆ ಉಟ್ಟ್, ಇಲ್ಲೆ ಫ್ಯಾನ್ ಹತ್ರ ಸ್ವಲ್ಪ ಹೊತ್ತು ಕೂರೊನ ತೇಳಿ ಅವಳ್ನ ಕೂರ್‍ಸಿಕಣ್ತ್.

"ಭಾಗ್ಯ ನೀನ್ ಸೋತ, ಜಯ ಆಗಲೇ ಗಂಡಸರ ಕಡೆ ಸೇರಿಬುಟ್ಟುಟ್ಟು"

ಮೋಹನ್ ಹೇಳ್ಕನ ಭಾಗ್ಯ ತಲೆ ಎತ್ತಿ ನೋಡ್ತ್.

'ನೀನ್ ಸೋಲ್ತಾ ವಳಾ ತೇಳ್ತಿತ್ತ್' ಆ ಜೋಡಿ ಕಣ್ಣ್‌ಗ

"ನಾನು ಖಂಡಿತ ಸೋಲುದಿಲ್ಲೆ ಭಾವ" ತೇಳಿ ಮೋಹನ್ ಕಡೆ ನೋಡ್ಕನ ಅಂವ ಸುಮ್ಮನೆ ನಗಾಡ್ತ್ ಅಷ್ಟೆ.

ಭಾಗ್ಯಂಗೆ ನಗೆ ಬಾತ್, ತಾನ್ ಆಗಲೇ ಸೂರ್ಯಂಗೆ ಸೋತ್ ಬಾಳಾ ದಿನ ಆಗಿತ್ತ್.

ಹದಿನೈದು ದಿನ ಎಲ್ಲವು ಹಾಯಾಗಿ ಕಾಲ ಕಳ್ದೊ, ಭಾಗ್ಯ ಆ ಜೋಡಿ ಕಣ್ಣ್‌ಗಳ್ನ ತಪ್ಪಿಸಿಕೆ ಎಷ್ಟ್ ಪೇಚಾಡ್ರೂ ಒಮ್ಮೊಮ್ಮೆ ತಾನೇ ಆ ನೋಟನ ಬಯಸ್‌ತಿತ್ತ್ ಮತ್ತೊಮ್ಮೆ ಆ ಕಣ್ಣ್‌ಗಳ್‌ಲಿ ಇರುವ ಆಕರ್ಷಣೆಗೆ ಇವ್ಳಿಗೆ ಆಶ್ಚರ್ಯ ಆಗ್ತಿತ್ತ್.

ಸೂರ್ಯನೂ ನನ್ನ ಹಿಂಗೆ ತಾನೆ ಮೋಡಿ ಮಾಡ್ದ್ ! !

ಸೂರ್ಯನ ಗ್ಯಾನ ಬಂದರೇ ಇವ್ಳಿಗೆ ಬಾಳಾ ಬೇಜಾರ್ ಆಗ್‌ತ್ತಿತ್ತ್. ಒಂದು ವರ್ಷ ಕಳ್ದರೂ ಸೂರ್ಯ ಒಂದ್ ಫೋನ್ ಸಹ ಮಾಡಿತ್ತ್‌ಲೆ.

ಹದಿನೈದ್ ದಿನ ಇದ್ದ್ ಅಕ್ಕ ಬಾವ ಮಹೇಶ್ ಹೊರ್‍ಟ್ ಹೋದೊ. ಭಾಗ್ಯನ

ರಜಾ ಸಹ ಒಂದು ವಾರ ಮಾತ್ರ ಇತ್ತ್ ಅಷ್ಟೊತ್ತಿಗೆ ಪ್ರಶಾಂತ್ ಶಾಲಿನಿ ಸಹ ಬಂದೊ.

*******

ಭಾಗ್ಯ ಈ ಸಲನೂ ಫಸ್ಟ್ ಕ್ಲಾಸ್‌ಲಿ ಪಾಸ್‌ಆಗಿತ್ತ್. ಮುಂದೆ ಓದುವ ಗ್ಯಾನ ಅವ್ಳಿಗೆ ಇತ್ತ್‌ಲೆ ಚಾಕ್ರಿಗೆ ಸೇರಕುತ ಇತ್ತ್‌ಲೆ ಹಂಗಾಗಿ ಹಾಯಾಗಿ ಮನೆಲಿ ಕಾಲಕಳ್ಕಂಡ್ ಇತ್ತ್.

ರೇಷ್ಮಾ ಭಾಗ್ಯನ ಬುಟ್ಟ್ ಇರ್‌ತಿತ್‌ಲೆ ಆದ್ರಂದ ಅವ್ಳೂ ಇಲ್ಲೇ ಇತ್ತ್ ಇದ್ರಂದ ರಾಮಯ್ಯ ಮತ್ತೆ ಶಾರದಂಗೆ ಬಾಳಾ ಕುಸಿ ಆಗಿತ್ತ್. ಇಷ್ಟ್ ದಿನದ ಮೌನ ಹೋಗಿ ಮನೆ ಇವರಿಬ್ರರ ಗಲಾಟೆಂದ ತುಂಬಿ ಹೋಗಿತ್ತ್.

ಪುಟ್ಟ ಪುಟ್ಟ ಹೆಜ್ಜೆ ಹಾಕ್‌ತಿದ್ದ ರೇಷ್ಮಾ ಮನೆಯಿಡೀ ಓಡಾಡಿಕಂಡ್ ಇರ್‌ತಿತ್ತ್.

ಕಾಲೇಜ್ ಬುಟ್ಟ ಸ್ವಲ್ಪ ದಿನಕ್ಕೆಲ್ಲಾ ಭಾಗ್ಯಂಗೆ ಬಾಳಾ ಬ್ಯಾಜರ ಆಗಿ ಹಾರಾಡ್‌ತಿದ್ದ ಪಕ್ಷಿನ ಪಂಜರದೊಳಗೆ ಹಾಕಿದಂಗೆ ಆಗ್‌ತ್ತಿತ್ತ್.

ಸೂರ್ಯ ಹೋದ ಮ್ಯಾಲೆ ಯಾವುದೇ ಸಮಾಚಾರ ಇತ್ತ್‌ಲೆ. ಅವನ ಗ್ಯಾನ ಬಾಕನ ಇವ್ಳು ಬಾಳ ಮಂಕಾಗಿ ಬುಡ್ತಿತ್.

ಆದ್ಕೆ ಅವ್ಳು ಮನೆಲಿ ಪ್ರತಿಯೊಂದು ಕೆಲಸಗಳಿಗೂ ಕೈ ಹಾಕ್‌ತ್ತಿತ್ತ್. ಇದ್ರಂದ ಅಪ್ಪ ಅಮ್ಮಂಗೆ ಬಾಳಾ ಕುಸಿ ಆಗ್ತಿತ್ತ್.

ರಾಮಯ್ಯನವು ಅವ್ಳಿಗೆ ಕಾರ್ ಡ್ರೈವಿಂಗ್ ಕಲ್ಸಿಕೊಟ್ರೊ. ಇದ್ರಂದ

ಅವ್ಳು ಅಪ್ಪ ಇಲ್ಲದಿರ್ಕನ ಎಷ್ಟೊ ಸಲ ತೋಟಕ್ಕೆ ಹೋಗಿ ಬಾತಿತ್ತ್. ತೋಟಲಿ ಆಳ್‌ಗಳ್ಗೆ ಕೆಲ್ಸ ಹೇಳಿ ನೋಡಿಕಣ್ತಿತ್. ಇದ್ರಂದ ಅಪ್ಪಂಗೂ ಹಗುರ ಆಗಿತ್ತ್. ಎಷ್ಟೋ ಸಲ "ನಮ್ಮ ಭಾಗ್ಯ ಹೈದ ಆಗಿ ಹುಟ್ಟೊಕಾಗಿತ್ತ್" ತ ಗ್ಯಾನ ಮಾಡ್ದುಟ್ಟು

******

ಅಂದ್ ತೋಟಂದ ಬಾಕನೇ ರಾಮಯ್ಯನವು 'ಭಾಗ್ಯ, ಭಾಗ್ಯ' ತ ಕರ್ಕಂಡೇ ವಳಗೆ ಬಂದೊ. ಗಾಬರಿಲಿ ಓಡಿ ಬಾತ್ ಭಾಗ್ಯ ಅವ್ಳ ಹಿಂದೆನೇ ಬಾತ್ ಶಾರದ ರಾಮಯ್ಯನವು ಸೋಪಾಲಿ ಕಣ್ಣು ಮುಚ್ಚಿ ಕುದ್ದಿದ್ದೊ.

ಭಾಗ್ಯ ಅಪ್ಪನ ಹಣೆ ಮುಟ್ಟಿ ನೋಡ್ತ್, ಹಣೆ ಬೆಂಕಿನಂಗೆ ಸುಡ್ತಿತ್ತ್. ಅವ್ಕೆ ವಿಪರೀತ ಜ್ವರ ಬಂದಿತ್ತ್.

ಭಾಗ್ಯ ಡಾಕ್ಟರಿಗೆ ಫೋನ್ ಮಾಡಿ, ಬೇಗ ಬೇಗ ಬಿಸಿಬಿಸಿ ಕಾಫಿಮಾಡಿ ಕೊಡ್ತ್ ಹಂಗೆ ಹಣೆ ಮೇಲೆ ಕೋಲ್ಡ್ ಪ್ಯಾಕ್ ಹಾಕಿತ್.

ಇಬ್ಬರೂ ಸೇರಿ ಅವರ್ನ ಹಿಡ್ಕಂಡ್ ಬಂದ್ ಹಾಸಿಗೆಲಿ ಮಲ್ಗಿಸಿದೊ. ಇಷ್ಟೆಲ್ಲಾ ಆಗೋ ಹೊತ್ತಿಗೆ ಡಾಕ್ಟರ್ ಬಂದೊ.

ಡಾಕ್ಟರ್ ಪರೀಕ್ಷೆ ಮಾಡಿ ಒಂದ್ ಇಂಜೆಕ್ಷನ್ ಕೊಟ್ಟು ಒಂದೆರಡು ಮಾತ್ರೆ ಬರ್ದ್ ಕೊಟ್ಟು, ಮಾತ್ರೆನ ಸರಿಯಾದ ಸಮಯಲಿ ಕೊಡಕುತ ಹೇಳಿ ಮತ್ತೆ ಏನೂ ಹೇಳದೆ ನಾಳೆ ಬನ್ನೆತ ಹೇಳಿ ಹೊರ್ಟು ಹೋದೊ.

ರಾಮಯ್ಯನವುಕೆ ಒಂದ್ ವಾರದವರೆಗೂ ಜ್ವರ ಬುಟ್ಟತ್‌ಲೆ ಒಂದ್ ವಾರ ಕಳ್ದ್ ಮೆಲ್ಲೆ ಉಸಾರಾಗ್ತಾ ಬಂದೊ. ಮತ್ತೆ ಒಂದು ವಾರ ಬೆಡ್‌ಂದ ಇಳಿಯಕೆ ಬುಟ್ಟತ್‌ಲೆ ಭಾಗ್ಯ. ಅವು ಉಸಾರಾದರೂ ಮುಂದೆನ ಶಕ್ತಿಯಾಗಲೀ ಜೀವನಲಿ ಉತ್ಸಾಹ ಆಗಲಿ ಅವರಲ್ಲಿ ಮಾಯ ಆಗಿತ್ತ್. ಯಾವುದೊ ಆಲಸ್ಯ ಅವ್ರಲ್ಲಿ ಎದ್ದ್ ಕಾಂಬತಿತ್ತ್.

ಭಾಗ್ಯಂಗೆ ಹೆದ್ರಿಕೆ ಆಕೆ ಶುರು ಆತ್ ಶಾರದಂಗೂ ಬಾಳ ದುಃಖ ಆಗ್ತಿತ್ತ್.

"ಭಾಗ್ಯ ಜಯಂಗೆ ಭಾವಂಗೆ ಪೋನ್ ಮಾಡ್ ಭಾವ ಹೆಂಗೂ ಡಾಕ್ಟರಲ್ಲ ಅವು ಬಂದು ನೋಡಲಿ ಒಮ್ಮೆ"

"ಸರಿ ಅಮ್ಮ ಈಗಲೇ ಮಾಡ್ನೆ"

ಭಾಗ್ಯ ಜಯಂಗೂ, ಅಣ್ಣ ಪ್ರಶಾಂತಗೂ ಸಹ ಫೋನ್ ಮಾಡಿ ತಿಳ್ಸಿತ್.

ಮಾರನೇ ದಿನ ಹಾಸನಂದ ಜಯಶ್ರೀ, ಮೋಹನ್ ಒಟ್ಟಿಗೆ ಪ್ರಶಾಂತನೂ ಓಡೋಡಿ ಬಂದೊ ಅವು ಬಾಕಾಕನ ರಾಮಯ್ಯನವು ಸಾಕಷ್ಟ್ ಚೇತರಿಸಿಕೊಂಡಿದ್ದೊ.

ರಾಮಯ್ಯನವು ಸಂತೋಷಂದ ಎಲ್ಲರೊಟ್ಟಿಗೆ ಮಾತಾಡಿ ಕ್ಷೇಮಲಾಭ ವಿಚಾರಿಸಿದೊ.

ರಾಮಯ್ಯನವರ್ನ ಪರೀಕ್ಷೆ ಮಾಡ್ದ ಮೋಹನ್ ತೃಪ್ತಿಂದ ನಗಾಡಿ, "ಈಗ ಎಲ್ಲಾ ಸರಿಯಾಗುಟ್ಟು, ಆದರೆ ಇನ್ನೂ ನೀವ್ ಬಾಳ ರೆಸ್ಟ್ ಮಾಡಕು" ತೇಳ್ತ್.

"ಅದೇನೊ ಸರಿ, ಮೋಹನ್ ಆದ್ರೆ ತೋಟ ನೋಡಿಕಣೊಕಲ್ಲ, ಭಾಗ್ಯ ಇರುದ್ರಂದ ಎಷ್ಟೊ ಸುಲ್ಬ ಆಗುಟ್ಟು, ನಾನ್ ಮಲ್ಗಿದ ಮ್ಯಾಲೆ ಅವ್ಳೇ ಎಲ್ಲಾ ನೋಡಿಕಂಬದು

"ನಮ್ ಮಿನಿಬಾಸ್ ಇದ್ದ ಮ್ಯಾಲೆ ನೀವ್ಯಾಕೆ ಮಾವ ಬೇಜಾರ್ ಮಾಡಿಕಂಡ್ರೆ ಮತ್ತೆ ಸುಮ್ಮನೆನಾ ಇಷ್ಟು ವರ್ಷ ಕಾಲೇಜಿಗೆ ಮಣ್ಣ್ ಹೊತ್ತದ್"

ಅಲ್ಲೆ ನಿತ್ತಿದ್ದ ಭಾಗ್ಯನ ಕೆಣಕಿತ್ ಮೋಹನ್

"ನಾನ್ ಕಾಲೇಜಿಗೆ ಮಣ್ಣ್ ಹೊತ್ತೊಳೆನಾ! ನಂಗೇನೊ ಪುಸ್ತಕ ಹೊತ್ತದ್ ಮಾತ್ರ ಗ್ಯಾನ ಉಟ್ಟು ಅಷ್ಟೇ ಎಲ್ಲಿಯೋ ನೀವ್ ಮಣ್ಣ್ ಹೊತ್ತದ್ ಗ್ಯಾನ ಬಂದಿರ್ದೆನೊ"

"ಏನ್ ಭಾವ – ನಾದಿನಿಯರ್ ಜಗಳ ಕಾಯ್ತಾವರ್ಳಿ" ಶಾರದ ಕೇಳ್ತ್ ಅಲ್ಲಿಗೆ ಬಂದ್.

"ಅತ್ತೆ, ನೋಡಿ ಇವ್ಳು ಬಾಳ ಜೋರ್ ಆಗಿಬುಟ್ಟುಟ್ಟು ಬೇಗ ಇವಳ್ನ ಯಾವಾನಿಗಾದ್ರ್ ಕುತ್ತಿಗೆಗೆ ಕಟ್ಟಕು"

ಹಂಗೇ ಆಗ್ಲಿ ಮೋಹನ್, ನೀವೆ ಒಬ್ಬನ ಹಿಡ್ಕಂಡ್ ಬನ್ನಿ"

"ಸರಿ ಅತ್ತೆ, ನಾಳೆಂದನೇ ಹುಡ್ಕಿಕೆ ಶುರ್ ಮಾಡ್ನೆ"

ಮಾರನೇ ದಿನ ಪ್ರಶಾಂತ ಮತ್ತೆ ಮೋಹನ್ ಹೊರ್ಟವೆತ ಗೊತ್ತಾಗಿ ಶಾರದ ರಾತ್ರಿಗೆ ಕೋಳಿ ಸಾರ್, ನೂಪಿಟ್ಟ್, ಹಂದಿ ಗೈಪು ಕಡಂಬಿಟ್ಟು ಮಾಡಿದ್ದೊ, ಒಟ್ಟಿಗೆ ಬೈನೆಕಳ್ಳ್ ಇತ್ತ್, ಭಾಗ್ಯ ಮಾಡಿದ್ದ ವೈನ್‌ನ ಜಯಂಗೆ ಕೊಡ್ತ್. ಎಲ್ಲವೂ ಕುಶಿಲಿ ಮಾತಾಡಿಕಂಡ್, ಊಟ ಮಾಡ್‌ತ್ತಿದ್ದೊ, ಅಷ್ಟೊತ್ತಿಗೆ ಮೋಹನ್

"ಮಾವಯ್ಯ, ನಿಮಿಗೆ ಒಂದು ವಿಷ್ಯ ಹೇಳಕುಂತ ಬಾಳ ದಿನಂದ ಗ್ಯಾನ ಮಾಡಿದ್ದೆ ಹೇಳಿಕ್ಕೇ ಆತ್‌ಲೆ"

"ಏನಪ್ಪಾ ಮೋಹನ್, ಯಾಕೆ ಸಂಕೊಚ ಪಟ್ಟಿಯ ಹೇಳ್"

"ಸಂಕೋಚ ಎಂತ ಇಲ್ಲೆ ಮಾವ ನೀವ್, ಏನ್ ಹೇಳ್ರೇನೋತ ಅಷ್ಟೇ"

ಮೋಹನ್ ಭಾಗ್ಯನ ನೋಡಿ ಕಣ್ಣ್ ಹೊಡ್ತ್.

"ಮಾವ ಅಂದ್ ನಮ್ಮೊಟ್ಟಿಗೆ ಬಂದಿತ್ತಲ್ಲ ನನ್ನ ಫ್ರೆಂಡ್ ಮಹೇಶ.

ಅಂವ ಭಾಗ್ಯನ ಬಾಳ ಮೆಚ್ಚಿಕಂಡುಟ್ಟು. ನಿಮ್ಮನ್ನಕೇಳ್‌ತ ಒಂದೇ ಸಮ ನನ್ನ ಪೀಡಿಸ್ತಾ ಉಟ್ಟು"

"ಹಂಗೆನಾ ವಿಷ್ಯ, ಏನಪ್ಪಾ ಪ್ರಶಾಂತು ನೀನ್ ಎಂತ ಹೇಳಿಯಾ?"

"ಆದ್ರೆ ಹೈದ ಹೆಂಗೆ, ಮನೆಕಡೆ ಎಲ್ಲಾ ಲಾಯ್ಕ ವಳೋನಾ" ಶಾರದ ಕೇಳ್ದೊ

"ಮನೆಕಡೆ ತುಂಬಾ ಲಾಯ್ಕ ವಳೋ ಅತ್ತೆ, ವಳ್ಳ ಡಾಕ್ಟರ್‌ತ ಹೆಸ್ರು ಮಾಡಿಟ್ಟು," ಭಾಗ್ಯನ ಕೊಡಿಕೆ ಹಿಂದೆ ಮುಂದೆ ನೋಡ್ದೇ ಬ್ಯಾಡ ಅನ್ನಿದೆ"

ಮದ್ವೆ ಮಾತ್ ಬರ್ತಿದ್ದಂಗೆ ಭಾಗ್ಯನ ಕಣ್ಣ್ ಮಂಜಾತ್ ತಲೆತಗ್ಗಿ ತಟ್ಟೆಲಿ ಕೈ ಆಡಿಸ್ತಿತ್ತ್. ಬೆರಳ್‌ಗ ಅನ್ನನ ಕೆದಕ್ತಾ ಇದ್ದೊ. ಮನ್ಸ್ ಮಾತ್ರ ಎಲ್ಲೋ ಇತ್ತ್.

ಅಪ್ಪ, ಅಮ್ಮ, ಅಣ್ಣ ಎಲ್ಲರ ಮುಕಾನು ಒಮ್ಮೆ ನೋಡ್ತ್ ಎಲ್ಲರ ಮುಕಲೂ ಕುಶಿ ಕಾಂಬಕನ ಅವ್ಳ ಪಾತಾಳಕ್ಕೆ ಇಳ್ದ್ ಹೋತ್.

ಊಟದ ತಟ್ಟೆ ಅವ್ಳಿಗೆ ತಕ್ಕಡಿನಂಗೆ ಕಂಡತ್ ಅವ್ಳ ಒಂದ್ ಕಡೆ ಸೂರ್ಯನ ಮತ್ತೆ ಒಂದ್ ಕಡೆ ಮಹೇಶನ ಇಟ್ಟ್ ತೂಗಿತ್. ತಲೆ ಚಿಟ್ಟ್ ಹಿಡ್ತ್.

"ನಾವ್ಗೇನೊ ಸಂತೋಷ ಆತ್" ತೇಳ್ದೊ ಪ್ರಶಾಂತ ಮತ್ತೆ ಶಾರದ. "ನಂಗೆನೋ ಈ ಸಂಬಂಧ ಬಾಳ ಲಾಯ್ಕ ಕಂಡದೆ. ನಾನೂ ಅವನೂ ಕಾಲೇಜ್‌ಂದಲೇ ಒಟ್ಟಿಗೆ ಇದ್ದವು ಬಾಳ ವಳ್ಳ ಗುಣ, ಮನೆ ಕಡೆ ಬಾಳಾ ಶ್ರೀಮಂತರ್ ಅವ್ನ ಅಪ್ಪ ಅಮ್ಮಂಗೆ ಇಬ್ಬರೇ ಗಂಡು ಮಕ್ಕ, ಇಂವ ಮೊದಲ್ನೆಯಂವ ಇನ್ನೊಬ್ಬ ಫಾರಿನ್‌ಲಿ ಓದಿಕೆ ಹೋಗುಟ್ಟು ಅಂತೆ ಅಪ್ಪ ಅಮ್ಮನ ನೋಡಿವಳೆ ಅವುಸಾ ತುಂಬಾ ಒಳ್ಳೆಯವರಂಗೆ ಕಂಡವೆ ಇನ್ನ್ ಮುಂದೆ ನಿಮ್ಮ ಇಷ್ಟ"



3

"ಸರಿಯಪ್ಪ ನಿಂಗೆ ಇಷ್ಟ ಆದ ಮ್ಯಾಲೆ ನಮ್‌ಗೂ ಸಂತೋಷ ಆದ್ರೆ ಭಾಗ್ಯನ ಕೇಳೊನ" ತೇಳಿ ಭಾಗ್ಯನ ಕಡೆಗೆ ತಿರ್ಗಿ

"ಭಾಗ್ಯ ನಾವೆಲ್ಲಾ ಆಡ್ದ ಮಾತ್‌ಗಳ್ನ ಕೇಳ್ದಲ್ಲಾ ನೀನ್ ಏನ್ ಹೇಳಿಯಾ"

ಭಾಗ್ಯನ ಕಣ್ಣಿಂದ ನೀರ್ ಇಳಿತಿತ್ತ್ "ನಂಗೆ ಸಧ್ಯಕ್ಕೆ ಮದ್ವೆ ಬ್ಯಾಡ" ತೇಳಿ ಎದ್ದ್ ಕೈತೊಳ್ದ್ ಹೋಗಿ ಅವ್ಳ ರೂಮ್‌ಸೇರಿ ಕಣ್ತ್.

ಮತ್ತೆ ಯಾರು ಆ ವಿಷ್ಯ ಮಾತಾಡ್‌ತ್‌ಲೆ. ಒಬ್ಬೊಬ್ಬರ ಮನ್ಸ್‌ಲೂ ಒಂದೊಂದು ಭಾವನೆಗ ನರ್ತಿಸ್‌ತ್ತಿದೊ. ಭಾಗ್ಯನ ಬುಟ್ಟ್ ಮತ್ತೆ ಎಲ್ಲರ ಭಾವನೆಗ ಒಂದೇ ದಿಕ್ಕ್‌ಲಿ ಓಡ್‌ತ್ತಿದ್ದೊ.

ಮಾರನೆ ದಿನ ಭಾಗ್ಯ ಯಾಗೊಳುನಂಗೆ ನಗಾಡಿಕಂಡು ಓಡಾಡ್‌ತ್. ಪ್ರಶಾಂತ, ಮೋಹನ್, ಜಯಶ್ರೀ ರಜೆ ಇಲ್ಲೆತ ಹೊರ್ಟು ನಿಂತ್ರೊ. ಎಲ್ಲವೂ ಅರ್ಜೆಂಟ್‌ಲಿ ಹಂಗಂಗೆ ಬುಟ್ಟ್ ಓಡಿ ಬಂದಿದೊ ಗಾಬರಿಲಿ. ಅವೆಲ್ಲ ಹೋದ ಮ್ಯಾಲೆ ರಾಮಯ್ಯನವು ಮನೆಲೇ ಇದ್ದೊ ಭಾಗ್ಯ ಕಾರು ತಕಂಡ್ ಸ್ವಲ್ಪ ದೂರಲಿ ಇದ್ದ ತೋಟದ ಕಡೆ ಹೊರ್ಟತ್.

ಪ್ರಶಾಂತ ತನ್ನ ಮನೆಗೆ ಹತ್ತ್‌ರದ ಕಾಲೇಜಿಗೆ ವರ್ಗಾವಣೆ ಮಾಡ್ಸಿ ಕೊಡಿತ ಆಗಾಗ ಮೇಲಿನ ಅಧಿಕಾರಿಗಳ್ನ ಕೇಳ್ತಾ ಇತ್ತ್. ಅಂವಂಗೆ ಮೈಸೂರ್‌ಲಿ ಇದ್ದರೂ ಮನ್ಸೆಲ್ಲಾ ಮನೆಲೇ ಇರ್ತಿತ್ತ್ ಮಂಜನಾಗಿ ಅಪ್ಪನ ಲಾಯ್ಕ ನೋಡಿಕೊಣಕು ಹಂಗೆ ತೋಟದ ಕೆಲ್ಸಕ್ಕೆ ಸಹಾಯ ಮಾಡಕುಂತ ಬಾರಿ ಆಶೆ.

ರಾಮಯ್ಯನವುಕೆ ಈಗ ಮತ್ತೆ ಮತ್ತೆ ಸಾಯಂಕಾಲದ ಹೊತ್ತು ಜ್ವರ ಬಾತ್ತಿತ್ತ್. ಮದ್ದ್ ತಕಣ್‌ಕನ ಕಮ್ಮಿ ಆಗ್‌ತಿತ್ತ್ ನಿಲ್ಸ್‌ಕನ ಪುನಃ ಜ್ವರ ಬಾತಿತ್ತ್.

ಅಪ್ಪಂಗೆ ಅರೋಗ್ಯ ಸರಿ ಇಲ್ಲೆತ ಕೇಳಿ ಪ್ರಶಾಂತ ಮತ್ತೆ ಜಯಶ್ರೀ ಇಬ್ಬರೂ ತಮ್ಮ ಮನೆಗೆ ಕಳ್ಸಿಕೊಡಿತ ಒತ್ತಾಯ ಮಾಡ್ತಿದ್ದೊ.

ಹ್ಯಾಗೂ ಮೋಹನ್ ಡಾಕ್ಟರಾದ್ದರಿಂದ ಭಾಗ್ಯಂಗೆ ಅಪ್ಪನ ಹಾಸನಕ್ಕೆ ಕಳ್ಸುದು ಸರಿ ತೇಳಿ ಅಪ್ಪ ಅಮ್ಮ ಒಪ್ಪಿಸಿ ಹಾಸನಕ್ಕೆ ಹೊರ್ಡಿಸಿಕೆ ಏರ್ಪಾಡ್ ಮಾಡ್ದೊ. ದಿನಂದ ದಿನಕ್ಕೆ ರಾಮಯ್ಯನವ್ರ ಅನಾರೋಗ್ಯ ಹೆಚ್ಚ್ ಆಗ್‌ತಿದ್ದ್‌ದರಿಂದ ತಡಮಾಡದೆ ಹಾಸನ ತಲ್ಪಿದೊ. ಒಟ್ಟಿಗೆ ಭಾಗ್ಯ ಹೋತ್ ಮನೆ ನೋಡಿಕಣಕುತ ಶಾರದ ಮನೆಲಿ ಉಳ್ದೊ ಕಾಫಿ ಕೊಯ್ಯುವ ಸಮಯ ಆದ್ರಂದ ಎಲ್ಲವೂ ಮನೆ ಬುಟ್ಟ್ ಹೋಕೆ ಆಗ್‌ತಿತ್ತ್‌ಲೆ ಈಗಂತೂ ಕಾಫಿ ಕಳ್ಳತನ ಜಾಸ್ತಿ ಆಗಿಬುಟ್ಟುಟ್ಟು. ಹಿಂದೆ ಎಲ್ಲಾ ಕಾಫಿ ಬೋರ್ಡ್ ಮತ್ತೆ ಸೆಂಟ್ರಲ್ ಎಕ್ಸೈಸ್ ಇರ್ಕನ ಕಾಫಿ ಮೇಲೆ ಬಾಳ ಕಂಟ್ರೋಲ್ ಇತ್ತ್. ಕಾಫಿನ ಕಾಫಿಬೋರ್ಡ್‌ಗೆ ಮಾರಕುತ ಇತ್ತ್. ಈಗ್‌ನಂಗೆ ಯಾರಿಗೆ ಬೇಕಾರೂ ಮಾರುವ ಹಂಗೆ ಇತ್ತ್‌ಲೆ. ಇದ್ರಂದಾಗಿ ಕಳ್ಳತನ ಜಾಸ್ತಿ ಆಗಿತ್ತ್.

ಜಯಶ್ರೀ ಮತ್ತೆ ಮೋಹನ್ ಬಾಳ ಆಸಕ್ತಿಲಿ ರಾಮಯ್ಯನವುಕೆ ಆರೈಕೆ ಮಾಡ್ದರೂ ಅವು ಗುಣಆಗೋ ಹಂಗೆ ಕಾಣ್‌ತ್ತಿತ್ತ್‌ಲೆ.

ಇದ್ರಂದಾಗಿ ಅವರ್‍ನ ಆಸ್ಪತ್ರೆಗೆ ಸೇರ್ಸಿದೊ. ಎಲ್ಲಾ ಡಾಕ್ಟರುಗ ಬಾಳ ಎಚ್ಚರಿಕೆಲಿ ಅವರ್‍ನ ನೋಡಿಕಂಬತಿದ್ದೊ. ಡಾ. ಮಹೇಶ್ ಮೋಹನ್‌ನೊಟ್ಟಿಗೆ ಸೇರಿ ಬಾಳ ಸಹಕಾರ ನೀಡ್‌ತಿತ್ತ್. ಮೋಹನ್ ವಾರ್ಡ್‌ಗೆ ಹೋಕನ ಇವನೇ ಒಟ್ಟಿಗೆ ಇರ್ತಿತ್ತ್. ರಾಮಯ್ಯನವ್ಕೆ ಕ್ಯಾನ್ಸರ್ ಲಾಸ್ಟ್ ಸ್ಟೇಜ್‌ಗೆ ಬಂದ್ ಬುಟ್ಟಿತ್. ಆದ್ರೆ ಡಾಕ್ಟರುಗ ಇದ್ನ ಮನೆಯವ್ಕೆ ಹೇಳ್‌ತ್‌ಲೆ. ಸ್ಪೆಷಲ್ ವಾರ್ಡ್ ಆದ್ರಂದ ಜಯಶ್ರೀ–ಭಾಗ್ಯಶ್ರೀ ಇಬ್ಬರೂ ಒಬ್ಬರಾದ ಮ್ಯಾಲೆ ಒಬ್ಬರಂಗೆ ಹಗಲೂ ರಾತ್ರಿ ನಿದ್ದೆಗೆಟ್ಟ್ ಅಪ್ಪನ ನೋಡಿಕಂಬತಿದ್ದೊ.

ಮೋಹನ್‌ಗೆ ಮತ್ತೆ ಮಹೇಶ ಅವರ್‍ನ ಉಳ್ಸಿಕೆ ಪಣತೊಟ್ಟು ಹೋರಾಡ್‌ತ್ತಿದ್ದೊ.

ಮೋಹನ್ ನೈಟ್‌ಡ್ಯೂಟಿ ಇರ್ಕನ ಮಹೇಶ್, ಮಹೇಶಂಗೆ ನೈಟ್‌ಡ್ಯೂಟಿ ಇರ್ಕನ ಮೋಹನ್ ಬಂದು ನೋಡಿ ಕಂಬತಿದ್ದೊ.

ಶಾರದ ಒಂದೆರಡು ದಪ ಬಂದ್ ನೋಡಿ ಕಣ್ಣೀರ್ ಹಾಕಿ ಹೋಗಿದ್ದೊ.

ಇಲ್ಲೆ ಇರೋನತೇಳ್ರೆ ಮನೆ ಬುಟ್ಟ್ ಬಾಕೆ ಆಗ್ತಿತ್‌ಲೆ. ಭಾಗ್ಯನ ಮನೆಲಿ ಬುಡೊನಾತೇಳ್ರೆ ಹೆಣ್ಣ್ ಮಕ್ಕಳ್ನ ಹೆಂಗೆ ಒಬ್ಬಳ್ನೆ ಮನೆಲಿ ಬುಡ್ದು, ತೇಳ್ವ ಹೆದ್ರಿಕೆ.

ರಾಮಯ್ಯನವ್ಕೆ ಈಗೀಗ ಮೋಹನ್‌ಗಿಂತ ಮಹೇಶನ ಮ್ಯಾಲೆ ಅದೆಂತೊ ವಾತ್ಸಲ್ಯ, ಸ್ವಲ್ಪ ಹೆಚ್ಚ್‌ಕಮ್ಮಿ ಯಾದರೂ 'ಮಹೇಶ ಎಲ್ಲಿ'ತ ಕೇಳ್ತಿದ್ದೊ. ರಾತ್ರಿ ಯಾಗೋಳು ಭಾಗ್ಯನೇ ಅಪ್ಪನ ಒಟ್ಟಿಗೆ ಇರ್ತಿತ್ತ್. ಯಾಗೋಳುನಂಗೆ ಇಂದ್ ಸಹ ಅಪ್ಪಂಗೆ ಹಾಲು ಬ್ರೆಡ್ ಕೊಟ್ಟ್, ಅವ್ಕೆ ಕೊಡ್ವ ಮದ್ದ್‌ನೆಲ್ಲಾ ಕೊಟ್ಟ್ ಮಲ್ಗಿಸಿತ್. ಸ್ವಲ್ಪ ಹೊತ್ತಿಗೆಲ್ಲಾ ಅಪ್ಪಂಗೆ ನಿದ್ದೆ ಹತ್ತಿತ್" ತ ಗೊತ್ತಾದ ಮ್ಯಾಲೆ ಭಾಗ್ಯ ಕಥೆ ಪುಸ್ತಕ ಹಿಡ್ಕಂಡ್ ಅಲ್ಲೇ ಇದ್ದ ಕುರ್ಚಿಲಿ ಕುದ್ದ್ ಓದಿಕೆ ಶುರು ಮಾಡ್ತ್.

ಚಳಿಗಾಲ ಆದ್ರಂದ ಸ್ವೆಟರ್ ಹಾಕಿಕೊಂಡ್ರೂ ಚಳಿ ಆಗ್ತಿತ್ತ್. ಪುಸ್ತಕ ಓದ್‌ತ್ತಿದ್ದವಳಿಗೆ ನಿದ್ದೆ ಹತ್ತಿದೇ ಗೊತ್ತಾತ್‌ಲೆ. ಎಚ್ಚರ ಆಗಿ ನೋಡ್ಕನ ಬೆಳ್ಕ್ ಹರ್ದಿತ್. ಓದಿಕಂಡಿದ್ದ ಪುಸ್ತಕ ಪಕ್ಕದ ಟೀಪಾಯ್ ಮ್ಯಾಲೆ ಇತ್ತ್. ತನ್ನ ಮೈಮ್ಯಾಲೆ ಇದ್ದ ಶಾಲ್‌ನ ನೋಡಿ ಅವ್ಳಿಗೆ ಆಶ್ಚರ್ಯ ಆತ್ ಹಂಗೇ ಸುತ್ತ ಮುತ್ತ ನೋಡ್ತ್ ಯಾರು ಕಂಡತ್‌ಲೆ.

ತನ್ನ ಅಜಾಗರೂಕತೆನ ನೆನ್ಸಿ ಅವ್ಳು ತಾನೇ ನೊಂದ್‌ಕಣ್ತ್. 'ರಾತ್ರಿ ಲಾಯ್ಕ ನಿದ್ರೆ ಮಾಡಿಬುಟ್ಟೆ, ಅಪ್ಪಂಗೆ ಏನಾರ ಬೇಕಾಗಿದ್ದರೆ' ತೇಳಿಕಂಡ್ ಅಪ್ಪನ ಹತ್ರ ಹೋಗಿ ನೋಡ್ತ್ ಅಪ್ಪನ ಮುಕ ಸ್ವಲ್ಪ ಗೆಲುವಾಗಿದ್ದಂಗೆ ಕಂಡತ್. ಅವು ಎಚ್ಚರವಾಗೇ ಇದ್ದೊ.

"ಅಪ್ಪಾ ಹೆಂಗೊಳ್ಳಿ, ರಾತ್ರಿ ವಳ್ಳ ನಿದ್ದೆ ಮಾಡಿಬುಟ್ಟೆ, ನಿದ್ದೆ ಬಂದದೇ ಗೊತ್ತಾತ್‌ಲೆ ಎಂತಾದ್ರ್ ತೊಂದರೆ ಆತ ಅಪ್ಪಾ" ಭಾಗ್ಯ ಒಂದೇ ಸಮಕೆ ಕೇಳ್ತ್.

"ಪರ್ವಾಗಿಲ್ಲೆ ಕೂಸು, ನೀನ್ ಎಸ್ಟ್ ದಿನಾತ ನಿದ್ದೆಗೆಟ್ಟಿಯ, ಒಮ್ಮೆ ದಾವಾ ಆಗಿತ್ತ್, ನಿನ್ನ ಒಮ್ಮೆ ಕರ್ದೆ, ನಿಂಗೆ ಎಚ್ಚರ ಆತ್‌ಲೆ, ನೀನ್ ನಿದ್ದೆ ಮಾಡಿವಳಾತ ತಿಳ್ದ್ ಏಳಿಕೆ ಹೊರ್ಟೆ ಅಷ್ಟೊತ್ತಿಗೆ ಮಹೇಶ ಓಡಿಬಂದ್ ಕುಡಿಯಕೆ ನೀರ್ ಕೊಟ್ಟ್ ಹಂಗೇ ಮಲ್ಗಿಸಿ ಬೆಳ್‌ಗೆವರೆಗೆ ಇಲ್ಲೇ ಕುದ್ದಿತ್ತ್ ಪಾಪ"

"ಚೆ, ಎಂತಾ ಕೆಲ್ಸ ಆತ್, ನಾನ್ ಎಂತಾ ತಪ್ಪು ಮಾಡಿ ಬುಟ್ಟೆ"..

"ಹೋಗಲಿ ಬುಡು ಕೂಸ್" ತ ಹೇಳ್ಕನ

"ಅಂಕಲ್ ಹೆಂಗೊಳ್ರಿ"ತ ಮಹೇಶ ಒಳಗೆ ಬಾತ್".

ಭಾಗ್ಯ ತನ್ನ ಅಜಾಗರೂಕತೆ ಮತ್ತೆ ಅವಂಗೆ ಕೊಟ್ಟ ಕಷ್ಟನ ಗ್ಯಾನ ಮಾಡಿ ತಲೆ ತಗ್ಗಿಸಿ ಹೇಳ್ತ್.

"ಸಾರಿ ಡಾಕ್ಟ್ರೆ, ನಾನ್ ನಿದ್ದೆ ಮಾಡಿ ಬುಟ್ಟಿದ್ದೆ, ನಿಮಿಗೆ ಬಾಳ ತೊಂದ್ರೆ ಆತ್‌ತ ಅಪ್ಪ ಹೇಳ್ದೊ"

"ತೊಂದ್ರೆ ಎಲ್ಲಿ ಬಾತ್ ಭಾಗ್ಯಶ್ರೀನವೆ, ನನ್ನ ಕರ್ತವ್ಯ ನಾನ್ ಮಾಡ್ದೆ, ನಾನ್ ಒಳಗೆ ಬಾಕನ ಅಂಕಲ್ ಏಳಿಕೆ ಹೊರ್ಟಿದ್ದೊ, ನಾನ್ ಬಾರದೆ ಇದ್ದರೆ ಬಿದ್ದ್ ಬುಡ್ತಿದ್ದೊ, ನಾನ್ ಬಂದ್ ನೀರ್ ಕುಡ್ಸಿ ಮಲ್ಗಿಸಿದೆ" ನೀವ್ ನಿದ್ದೆ ಮಾಡ್ತಿದ್ರಿ ಏಳ್ಸಿಕೆ ಮನ್ಸ್ ಬಾತ್‌ಲೆ, ನೀವ್ ಚಳಿಲಿ ನಡ್ಗಿಕಂಡ್ ಮಲ್ಗಿದ್ ನೋಡಿ ನಾನೇ ಒಂದ್ ಶಾಲ್ ತಂದ್ ಹಾಕಿದೆ" ತೇಳ್ಕನ ಭಾಗ್ಯ ನಾಚಿಕೆಲಿ ತಲೆ ತಗ್ಗಿಸಿತ್.

ಈ ಆಸ್ಪತ್ರೆ ಒಡನಾಟಲಿ ಅವರಿಬ್ಬರ್‌ಲಿ ಏನೋ ಒಂದ್ ತರದ ಆತ್ಮೀಯತೆ ಬೆಳ್ದಿತ್ತ್. ಸೂರ್ಯ ಈಗ ಅವಳ ಮನ್ಸ್‌ಲಿ ಬಂದ್ ಈಗ ಮುಂದೆನಂಗೆ ಪೀಡಿಸ್ತಿತ್ತ್‌ಲೆ.

ಮತ್ತೆ ಅವ್ಳ ಮನ್ಸ್–ಅವಳ್ನ ಎಚ್ಚರಿಸ್‌ತಿತ್ತ್ "ನೀನ್ ಸೂರ್ಯಂಗೆ ಮುಡ್ಪಾದ ಹೂವ್, ಬೇರೆಯವರ್ನ ಬಯ್‌ಸುದ್ ತಪ್ಪು"

ಅದೇ ಕ್ಷಣಲಿ ಇನ್ನೊಂದ್ ಮನ್ಸ್ "ನೀನ್ ಸೂರ್ಯನ ಮರ್ತ್‌ಬುಡ್ ಅಂವ ಈಗ ನಿನ್ನ ಮರ್ತ್ ಯಾವುದೋ ಬಿಳಿ ಗೂಡೆನ ಕಟ್ಟಿಕಂಡಿರ್ದು,

ನಿನ್ನ ಮರ್‌ಳ್ ಮಾಡ್ದಂಗೆ ಅಂವ ಬೇರೆ ಯಾರ್ನೋ ಮರ್‌ಳ್ ಮಾಡಿರ್ದು ಇಲ್ಲಿ ನಿನ್ನ ಪೂಜೆ ಮಾಡ್ವ ಭಕ್ತನೇ ನಿನ್ನೆದ್ರುಗೆ ಇರ್ಕನ ಆ ಗಗನ ಕುಸುಮನ ಬಯಸ್‌ಬ್ಯಾಡ."

ಎರ್ಡ್ ಮನ್ಸ್‌ಗಳ ದ್ವಂದ್ವ ಯುದ್ಧದ ಪರಿಣಾಮ ಮತ್ತೆ ಹಗಲ್‌ರಾತ್ರಿತೇಳದೆ ಅಪ್ಪನ ನೋಡಕಂಡ್ ನಿದ್ದೆ ಗೆಟ್ಟದ್ರಿಂದಾಗಿ ಇದ್ ಭಾಗ್ಯನ ಮೈಲಿ ಕಾಂಬಕೆ ಶುರು ಆತ್. ಅವ್ವು ಬಾಳ ನಿತ್ರಾಣ ಆದಂಗೆ ಆಗಿತ್ತ್.

ಬಾತ್ ರೂಮ್‌ಗೆ ಹೋದ ಭಾಗ್ಯ ಸ್ವಯ ತಪ್ಪಿ ಬಿದ್ದ್ ಬುಟ್ತ್. ಮೊದ್ಲೆ ತೆಳ್ಳಂಗೆ ಇದ್ದ ಅವ್ವು ಊಟತಿಂಡಿ ನಿದ್ದೆನ ಕೊರತೆಂದಾಗಿ ಶಕ್ತಿ ಇಲ್ಲದಂಗೆ ಆಗಿ ಬುಟ್ಟುತ್ತ್.

ಪಕ್ಕದ ವಾರ್ಡ್‌ನ ಪೇಶಂಟ್‌ನ ನೋಡಿ ಹಂಗೆ ರಾಮಯ್ಯನವ್ರನ ಮಾತಾಡ್ಸಿಕೆ ಬಂದ ಮಹೇಶ ಹಂಗೇ ಧಾವಿಸಿ ಬಂದ್ ಭಾಗ್ಯನ ಕೂಸ್‌ನಂಗೆ ಎತ್ತಿತಂದ್ ಹಾಸಿಗೆಲಿ ಮಲ್ಗಿಸಿತ್.

ಅಂವ್ನ ಉಪಚಾರಂದ ಎಚ್ಚರ ಆದ ಭಾಗ್ಯ ಕಣ್ಣ್ ಮುಚ್ಚಿಕಂಡೇ ಅವ್ಳ ಕೈ ಹಣೆ ಮೇಲೆ ಹೋತ್. ತನ್ನ ಹಣೆ ಮ್ಯಾಲೆ ಇದ್ದ ಮತ್ತೊಂದ್ ಕೈನ ಮುಟ್ಟ್‌ಕನ ಪಟ್ಟ್ ತೇಳಿ ಕಣ್ಣ್ ತೆರ್ದ್ ನೋಡ್ಕನ ಬಾಡ್ದ ಮುಕಲಿ ಅವಳ್ನೇ ನೋಡ್ತಿತ್ತ್ ಮಹೇಶ !

ಮಹೇಶ ಅವ್ಳ ಕೈನ ತನ್ನ ಕೈಲಿ ಹಿಡ್ದ್ ಹಂಗೇ ಕೆಳ್ಗೆ ಇಳ್ಸಿತ್. ಭಾಗ್ಯಂಗೆ ಬ್ಯಾನೆಲೂ ಮಧುರ ಭಾವನೆ ಬಾತ್. ವಿಷ್ಯ ತಿಳ್ದ ಜಯಶ್ರೀ ಗಡಿಬಿಡಿಲಿ ಒಂದೇ ಉಸುರಿಗೆ ಓಡೋಡಿ ಬಾತ್ ಬಂದವಳ್,

"ಎಂತಾತ್ ಭಾಗ್ಯ, ಸ್ವಲ್ಪ ರೆಸ್ಟ್ ತಕಾತೇಳ್ರೆ ಕೇಳ್ತುದಲೆ ನೀನ್, ಸರಿಯಾಗಿ ತಿಂಬದೂ ಇಲ್ಲೆ, ಹಗಲ್ ರಾತ್ರಿ ಹಿಂಗೆ ನಿದ್ದೆಕೆಟ್ರೆ ಇನ್ನೆಂತ ಆದೆ, "ಮಹೇಶ ಇವ್ಳಿಗೆ ಎಂತಾಗುಟ್ಟು ಸ್ವಲ್ಪ ನೋಡಿಪ್ಪಾ"

"ಹೋಲ್ಡ್ ಆನ್, ಈಗ ಎಂತ ಆತ್‌ತ ಹಿಂಗೆ ಗಾಬರಿ ಆದಿಯ, ನಂಗೆ ಏನೂ ಆತ್‌ಲೆ" ಭಾಗ್ಯ ಹೇಳ್ತ್.

"ಹೌದು, ಜಯಕ್ಕ, ನಾನ್ ಈಗ ತಾನೆ ಟೆಸ್ಟ್ ಮಾಡಿದೆ, ನಿದ್ರೆ, ಊಟ ಸರಿ ಇಲ್ಲದೆ ಸ್ವಲ್ಪ ನಿಶ್ಯಕ್ತಿ ಬಂದುಟ್ಟು ಅಷ್ಟೆ, ನೀವ್ ಎಂತ ಗ್ಯಾನ ಮಾಡ್ಬಡಿ ಇಂದ್ ರಾತ್ರಿ ಯಾರೂ ಇರ್ದು ಬ್ಯಾಡ, ಅಂಕಲ್‌ನ ನಾವ್ ನೋಡಿಕಂಡವೆ, ನೀವೆಲ್ಲಾ ಮನೆಗೆ ಹೋಗಿ ಸರಿಯಾಗಿ ನಿದ್ದೆ ಮಾಡಿ ಎಲ್ಲಾ ಸರಿ ಆಗೆ."

"ಚೆ ನೀವ್‌ಗೆ ಸುಮ್ಮನೆ ತೊಂದರೆ"

"ತೊಂದರೆ ಗಿಂದರೆ ಎಂತದೂ ಇಲ್ಲೆ, ಅದ್ಕೆಲ್ಲಾ ಮತ್ತೆ ಫೀಸ್ ವಸೂಲಿ ಮಾಡ್ನೆತ ಹೇಳಿ ಭಾಗ್ಯನ ಮುಕ ನೋಡ್ತ್. ಅವ್ಳು ನಾಚಿಕೆಲಿ ತಲೆ ತಗ್ಸಿತ್.

ಒಂದೆರಡು ದಿನಲಿ ಭಾಗ್ಯ ಪೂರ್ತಿಯಾಗಿ ಚೇತರಿಸಿಕಣ್ತ್. ರಾಮಯ್ಯನವು ಸಹ ಸ್ವಲ್ಪ ಉಸಾರಾಗಿದ್ದೊ.

ಅಂದ್ ಬಂದ ಶಾರದನವು ಭಾಗ್ಯನ ಕೈಗೊಂದು ಕಾಗದ ಕೊಟ್ಟೊ. ಅದ್ ಅವ್ಳ ಫ್ರೆಂಡ್ ಪ್ರೇಮನ ಮದ್ವೆ ಕಾಗದ ಆಗಿತ್ತ್. ಭಾಗ್ಯ ಕುಶಿಲಿ ಕುಣ್‌ದಾಡ್ತ್.

* * * * *

ಭಾಗ್ಯ ದಿನ ಮುಂದಾಗಿ ಪ್ರೇಮನ ಮದ್ವೆಗೆ ಹೋತ್. ಭಾಗ್ಯನ ಕಂಡ್ ಪ್ರೇಮ ಬಾಳ ಕುಶಿಲಿ ಅವ್ಳ ತಬ್ಬಿಕಣ್ತ್. ಕಾಲೇಜ್ ಬುಟ್ಟು ಎರ್ಡ್

ವರ್ಷಂದ ಒಬ್ಬರನೊಬ್ಬ ನೋಡಿತ್‌ಲೆ. ಅಷ್ಟೊತ್ತಿಗೆ ವಾಣಿನೂ ಬಂದ್ ಸೇರಿಕಣ್ತ್. ಇನ್ನೂ ಕೇಳೊಕಾ ಮೂರು ಜನ ಫ್ರೇಂಡ್ಸ್ ಸೇರ್ದ ಮ್ಯಾಲೆ, ಮದ್ವೆ ಮನೆಗೆ ಕಳೆ ಬಂದಿತ್ತ್.

ಮದ್ವೆ ಶಾಸ್ತ್ರಗಳೆಲ್ಲ ಮುಗ್ದ್ ರಾತ್ರಿ ರೂಮ್‌ಲಿ ಇವು ಮೂರೇ ಜನ ಉಳ್ಕೊಂಡೊ ಆಗ ಭಾಗ್ಯ ಸೂರ್ಯನ ವಿಷ್ಯನ ಪ್ರೇಮನೊಟ್ಟಿಗೆ ವಿಚಾರಿಸಿತ್. ಆಗ ಪ್ರೇಮನ ಮುಕ ಬಾಡಿಹೋತ್.

" ಭಾಗ್ಯ, ನೀನ್ ಅವ್ನ ಮರ್ತ್ ಬುಟ್ಟು ಬ್ಯಾರೆ ಯಾರನ್ನಾರ ಮದ್ವೆ ಆಗಿ ಸುಖಲಿ ಇರ್, ನಾನ್ ಇಷ್ಟೇ ಹೇಳ್ದು "

"ಯಾಕೆ ಪ್ರೇಮ, ನೀನ್ ತಿಳ್ದ್ ತಿಳ್ದ್ ಹೀಗೆ ಹೇಳ್ತಾವಳಾ "

"ಬ್ಯಾಜಾರು, ಮಾಡ್ಕಬ್ಯಾಡ ಭಾಗ್ಯ ನಂಗೆ ತಿಳ್ದ ವಿಷ್ಯಂದಾಗಿ ಹಿಂಗೆ ಹೇಳ್ತಾವಳೆ ಅಷ್ಟೆ. ಸ್ವಲ್ಪ ದಿನದ ಹಿಂದೆ ನಾನ್ ಟೌನ್‌ಗೆ ಹೋಗಿರ್ಕನ ವನಿತನ ಕಂಡೆ

ಸೂರ್ಯ ಇಲ್ಲಿಂದ ಹೋದ ಮ್ಯಾಲೆ ಅವ್ಳಿಗೆ ಫೋನ್ ಮಾಡ್ತಾ ಉಟ್ಟಂತೆ ಅವಳ್ನೇ ಮದ್ವೆ ಆದುತ ತಿಳ್ಸಿಟ್ಟುತ ಹೇಳ್ತ್.

"ಭಾಗ್ಯನ ಕಣ್ಣ್‌ಂದ ನೀರ್ ಇಳಿಯಕೆ ಸುರು ಆತ್. ಅದ್ಕೇ ಕಂಡದೇ ನಂಗೆ ಫೋನ್ ಸಹ ಮಾಡ್ತ್‌ಲೆ. ಅವ್ನು ದೊಡ್ಡ ಮನ್ಸತಿ ಅವಳ ಹಣಕಾಸ್ ಶ್ರೀಮಂತಿಕೆಗೆ ಮರುಳಾಗಿರ್ದು, ಗಂಡ್ ಜಾತಿನೇ ನಂಬಿಕಾದ್" ತ ಹೇಳಿಕಣ್ತ್.

ಪ್ರೇಮ ಎಷ್ಟ್ ಸಮಾಧಾನ ಮಾಡ್ರೂ ಭಾಗ್ಯನ ದುಕ್ಕ ಕಮ್ಮಿಆತ್‌ಲೆ.

ಸೂರ್ಯ! ಮಹೇಶ್!

ಇಬ್ಬರೂ ಕಣ್ಣ್ ಮುಂದೆ ಸುಳ್ದೊ.

ಒಂದ್ ಗಗನ ಕುಸುಮ! ಇನ್ನೊಂದ್ ತನ್ನ ಮುಡಿಯೇರಿಕೆ ಕಾದ್ ನಿತ್ತಿರ್ವ ಬಿರಿದ ಕುಸುಮ!!

ಅಪ್ಪನ ಉಳ್ಸಿಕ್ಕಾಗಿ ಪಣ ತೊಟ್ಟ್ ಶ್ರಮಿಸ್‌ತಿರ್ವ ಮಹೇಶ, ತನ್ನನ್ನ ಕಣ್ಣ್‌ಲೇ ಪೂಜಿಸ್‌ತಿರ್ವ ಮಹೇಶ !

ಮರುಕ್ಷಣಲೇ ಏನೋ ಬ್ಯಾನೆ ಆದಂಗೆ ಆಗಿ ಅಲ್ಲಿಂದ ಹೊರ್ಡಿಕೆ ತಯಾರಿ ನಡ್ಸಿತ್ ಅಪ್ಪನ ಗ್ಯಾನ ಬಂದ್ ಗಾಬರಿ ಆತ್. ಮದ್ವೆ ಮುಗ್ದಂಗೇ ಅಂದ್ ಸಾಯಂಕಾಲಕ್ಕೆ ವಾಪಾಸ್ ಹೊರ್ಟತ್, ಹೊರ್ಟ್‌ಕಂಡ್ ಇರ್ಕನೇ ಅಪ್ಪ ಸೀರಿಯಸ್ ಹೊರ್ದು ಬಾತ ಜಯಶ್ರೀ ಫೋನ್ ಮಾಡ್ತ್. ಅವ್ಳು ಓಡೋಡಿ ಬಂದ್ ಎತ್‌ಕನ ವಾರ್ಡ್‌ನ ಹೊರಗೆ ಎಲ್ಲವೂ ತುಂಬಿದ್ದೊ, ಅಮ್ಮ ಗೋಳಾಡ್‌ತ್ತಿತ್ತ್ ಜಯಕ್ಕ, ಶಾಲಿನಿ, ಪ್ರಶಾಂತ ಎಲ್ಲವೂ ಮೂಕರಾಗಿ

ಕಣೀರ್ ಹಾಕ್ತಿದ್ದೊ.

ಮೋಹನ್, ಮಹೇಶ, ಮತ್ತೆರಡ್ ಡಾಕ್ಟರ್‌ಗ, ನರ್ಸ್‌ಗ ಸೇರಿಕಂಡ್ ರಾಮಯ್ಯನವರ್ನ ಬದ್ಕಿಸಿಕೆ ಶತಪ್ರಯತ್ನ ಮಾಡ್‌ತಿದ್ದೊ ರಾಮಯ್ಯನವು ಆಗೊಮ್ಮೆ ಈಗೊಮ್ಮೆ ಕಣ್ಣ್ ತೆರ್ದ್ ಯಾರ್‍ನೊ ಹುಡ್ಕ್‌ತಿದ್ದೊ.

ಅಷ್ಟೊತ್ತಿಗೆ ಅಲ್ಲಿಗೆ ಓಡಿಕಂಡ್ ಬಂದ ಭಾಗ್ಯನ ಕಂಡ್ ಅವ್ರ ಕಣ್ಣ್ ಅರಳಿತ್ ಅವ್ಳಿಗೇ ಕಾದ್ ಕಂಡ್ ಇದ್ದಂಗೆ ಅವರ ತುಟಿಲಿ ಸಣ್ಣ ನಗೆ ಬಾತ್. ಕಣ್ಣ್‌ಲೇ ಅವ್ಳ ಹತ್ರಕ್ಕೆ ಕರ್ದೊ‌ ಮಾತಾಡಿಕೆ ಡಾಕ್ಟರ್‌ಗ ಬುಡ್‌ತಿತ್ತ್‌ಲೆ. ಪಕ್ಕಲೇ ನಿತ್ತಿದ್ದ ಡಾಕ್ಟರ್‌ಗಳ್ನ ನೋಡಿ ಬ್ಯಾಡ ತೇಳುವಂಗೆ ತಲೆ ಆಡ್ಸಿದೊ. ಅವ್ರ ಪ್ರಯತ್ನ ಕಂಡ್ ಅವ್ಕೇ ನಗೆ ಬಾತಿತ್ತ್.

ರಾತ್ರಿ ಹೊತ್ತಿಗೆ ಅವ್ರ ಸ್ಥಿತಿ ತೀರಾ ಹದಗೆಟ್ಟ್ ಹೋತ್. ರಾಮಯ್ಯನವು ತನ್ನ ಸುತ್ತಲೂ ನಿತ್ತಿದ್ದ ಎಲ್ಲರ್ನ ನೋಡಿ ಭಾಗ್ಯನ ಮಹೇಶನ ಹತ್ರಕ್ಕೆ ಕರ್ದ್ ಭಾಗ್ಯನ ಕೈನ ಮಹೇಶನ ಕೈಲಿ ಮಡ್ಗಿ ತನ್ನ ಕೆಲ್ಸ ಮುಗ್ತ್ ತೇಳುವಂಗೆ ಕಣ್ಣ್ ಮುಚ್ಚಿದೊ. ಅವರ ಮುಕಲಿ ತಾನೇನೊ ಕರ್ತವ್ಯ ಮಾಡಿ ಮುಗ್ಸಿದ ತೃಪ್ತಿ ಕಾಂಬತಿತ್ತ್. ಮುಚ್ಚಿದ ಕಣ್ಣ್‌ನ ಮತ್ತೆ ಅವು ಶಾಸ್ವತವಾಗಿ ತೆರ್ತೇ ಇಲ್ಲೆ.

ಎಲ್ಲವೂ ಹೃದಯ ಒಡ್ದು ಹೋಗುವಂಗೆ ಮರ್‍ಬೊ ಅಂದೇ ಆ್ಯಂಬುಲೆನ್ಸ್‌ಲಿ ಅವರ್ನ ಮೂರ್ನಾಡ್‌ಗೆ ತಂದ್ ಎಲ್ಲವ್ಕೂ ಸುದ್ದಿ ಕಳ್ಸಿದೊ. ಜನ ಸಾಗರದಂಗೆ ಸೇರಿದ್ದೊ. ಮನೆಯವ್ರ ಚೂಟ್‌ಕಳಲಿ ಅವು ಸುಟ್ಟು ಬೂದಿಯಾಗಿ ಪಂಚಬೂತಗಳ್‌ಲಿ ಸೇರಿ ಹೋದೊ ಮಣ್ಣ್‌ಲಿ ಮಣ್ಣಾಗಿ ಹೋದೊ .

ಮನುಷ್ಯ ತನ್ನ ಜೀವಮಾನಲಿ ಎಂತೆಲ್ಲಾ ಮಾಡ್ರೂ ಅವ್ಕೆ ಕೊನೆಗೆ ಸಿಕ್ಕುದು ಬರೀ ಆರಡಿ ಮೂರಡಿ ಜಾಗ ಮಾತ್ರ. ಇದ್ ಎಲ್ಲವ್ಕು ಗೊತ್ತಿರೊ ಸತ್ಯ. ಆದ್ರೆ ಏನ್ ಮಾಡ್ದು ತನ್ನ ಸ್ವಾರ್ಥ ಕೊನೇ ಗಳಿಗೆ ಮುಟ್ಟ ಮನ್ಸರ್ನ ಏನೋನೋ ಮಾಡ್ಸಿ ಬುಟ್ಟದೆ. ವಿಧಿ ನಿಯಮನೇ ಹಂಗೆ ! ಎಂತಾ ವಿಚಿತ್ರ !!

* * * * *

ಶಾರದನವು ಅರ್ಧ ಆಗಿ ಹೋಗಿದ್ದೊ. ಭಾಗ್ಯನೇ ಸುಧಾರ್‍ಸಿಕಂಡ್ ಮನೆ ಜವಾಬ್ದಾರಿನ ವಹ್ಸಿಕಣ್ತ್. ಪ್ರಶಾಂತ ವಾರ ವಾರ ಬಂದ್ ತೋಟ ಗದ್ದೆತ ವ್ಯವಹಾರಗಳ್ನ ನೋಡಿಕಂಡ್ ಹೋಗ್ತಿತ್ತ್.

ಸ್ವಲ್ಪ ಸಮಯಲಿ ಅವಂಗೆ ಮಡಿಕೇರಿ ಕಾಲೇಜಿಗೆ ವರ್ಗ ಆಗಿತ್ತ್.

ಅದ್ರಂದ ಅಂವ ಮನೆಂದನೇ ಓಡಾಡ್‌ತಿತ್ತ್. ಇದ್ರಂದ ಶಾರದನವುಕೆ ಸ್ವಲ್ಪ ನೆಮ್ಮದಿ

ಸಿಕ್ಕಿತ್ ಮನೆ ಕೆಲ್ಸನ್ನೆಲ್ಲಾ ಶಾಲಿನಿ....... ನೋಡಿಕಂಬತಿತ್.

ಭಾಗ್ಯ ತೋಟದ ಕೆಲ್ಸ ನೋಡಿಕಂಡ್ ಪ್ರಶಾಂತಂಗೆ ಸಹಾಯ ಮಾಡ್‌ತ್ತಿತ್ತ್. ಶಾರದನವ್ಕೆ ಭಾಗ್ಯನ ಮದ್ವೆನ ಮಹೇಶನೊಟ್ಟಿಗೆ ಆದಷ್ಟ್ ಬ್ಯಾಗ ವರ್ಷದೊಳಗೆ ಮಾಡಿ ಬುಡಕುತ ಆಶೆ ಇತ್ತ್. ವರ್ಷದೊಳ್ಗೆ ಮದ್ವೆ ಮಾಡ್ರೆ ಸತ್ತವುಕೆ ಕನ್ಯಾದಾನದ ಪುಣ್ಯ ಸಿಕ್ಕಿದೆತ ನಂಬಿಕೆ. ರಾಮಯ್ಯನವು ಹೋದಮೇಲೆ ಅವ್ಕೂ ಹೆಚ್ಚ್ ಕಾಲ ಬದ್ಕುದು ಬ್ಯಾಡ ತೇಳ್ವ ವೈರಾಗ್ಯ ಬಂದಿತ್ತ್.

ಅವು ಪ್ರಶಾಂತನೊಟ್ಟಿಗೆ ಈ ವಿಷ್ಯ ಮಾತಾಡ್ಕನ ಅವನೂ ಅದ್ಕೆ ಒಪ್ಪಿತ್. ಅಂವ ಈ ವಿಷ್ಯನ ಜಯಶ್ರಿ ಮತ್ತೆ ಮೋಹನಂಗೆ ತಿಳ್ಸಿ ಮುಂದಿನ ಮಾತುಕತೆ ಮಾಡಿತ ಹೇಳ್ತ್.

ಭಾಗ್ಯಂಗೆ ಎಂತದೋ ಅಳುಕು, ಮಹೇಶನ ಮದ್ವೆ ಆದರೆ ಸೂರ್ಯ ..... ಪ್ರೇಮಾ ಹೇಳಿದ್ರು ನಿಜ ಇರ್ದಾ ?

ಒಂದ್ ವೇಳೆ ಮದ್ವೆನ ಬ್ಯಾಡ ತೇಳ್ರೆ ತನ್ನ ಪ್ರಾಣಪದಕನಂಗೆ ಇದ್ದ ಅಪ್ಪನ ಮಾತ್‌ನ ವಿರೋಧ ಮಾಡ್ದಂಗೆ ಆದುಲೆನಾ?

ಉಭಯ ಸಂಕಟಲಿ ಅವ್ಳು ತೊಳಲಾಡ್ತ್.

ರೇಷ್ಮಾನೊಟ್ಟಿಗೆ ಆಡಿಕಂಡ್ ಕುದ್ದಿತ್ತ್ ಪ್ರಶಾಂತ ಶಾಲಿನಿ ವಳಗೆ ಅಡ್ಗೆ ಮಾಡ್‌ತಿತ್ತ್. ಶಾರದನವು ದೇವ್ರ ರೂಮ್‌ನ ಕ್ಲೀನ್ ಮಾಡ್ತಿದ್ದೊ. ಭಾಗ್ಯ ಮೆಲ್ಲೆ ಬಂದ್ "ಅಣ್ಣಾ ........" ತೇಳ್ತ್,

"ಓ ಭಾಗ್ಯ ಬಾ ಬಾ, ಏನ್ ಮದ್ವೆ ಗೂಡೆಗೆ ಈಗಳೇ ಎಂತಾ ಗಾಂಭೀರ್ಯ ಬಂದ್ ಬುಟ್ಟುಟ್ಟು, ನನ್ನೊಟ್ಟಿಗೆ ಮಾತೇ ಕಮ್ಮಿ ಆಗಿ ಬುಟ್ಟುಟ್ಟು" ತೇಳ್ತ್

ಭಾಗ್ಯನ ಕಣ್ಣ್‌ಲಿ ನೀರ್ ಬಾಕೆ ಶುರು ಆತ್.

"ಅರೆ, ನಾನ್ ತಮಾಸೆಗೆ ಹೇಳ್ರೆ ಕಣ್ಣ್‌ಲಿ ಯಾಕೆ ನೀರ್"

ಭಾಗ್ಯಂಗೆ ತಡ್ಕಣಿಕೆ ಆತ್‌ಲೆ ತನ್ನ ಮತ್ತೆ ಸೂರ್ಯನ ಪರಿಚಯ ಆದಲ್ಲಿಂದ ಹಿಡ್ದ್ ಎಲ್ಲಾ ವಿಷ್ಯನೂ ಹೇಳಿ ಕಣ್ತ್, ಅವ್ಳು ಯಾಗೊಳೂ ಹಂಗೆ ಏನೇ ಕಷ್ಟ ಬಂದರೂ ಅಣ್ಣನೊಟ್ಟಿಗೆ ಮನ್ಸ್ ಬಿಚ್ಚಿ ಮಾತಾಡ್ತಿತ್ತ್. ಅಮ್ಮನೊಟ್ಟಿಗೂ ಅವ್ಳಿಗೆ ಅಷ್ಟ್ ಸಲೀಸಾಗಿ ಹೇಳಿಕೆ ಆಗ್‌ತಿತ್ತ್‌ಲೆ.

ಪ್ರಶಾಂತ ಸ್ವಲ್ಪ ಹೊತ್ತ್ ಗ್ಯಾನ ಮಾಡಿ,

"ಭಾಗ್ಯ, ನೋಡ್ ನೀನ್ ಈ ಮದ್ವೆಗೆ ಒಪ್ಪಿಕಂಬದೇ ವಳ್ಳದ್, ಫಾರಿನ್‌ಗೆ ಹೋಗಿ ಬಂದವು ಹಿಂಗೆತ ಹೇಳಿಕೆ ಆದುಲೆ. ನನ್ನ ಫ್ರೆಂಡ್ ಒಬ್ಬ ಮದ್ವೆ ಆಗಿ ಹೋದಂವ ಮತ್ತೆ ಅಲ್ಲೊಂದು ಮದ್ವೆ ಆಗಿ ಅಲ್ಲೇ ಇದ್ದ್ ಬುಟ್ತ್ ಇನ್ನ್ ಇಂತಾ ಮಾತ್‌ಗಳಿಗೆಲ್ಲಾ ಎಂತ ಬೆಲೆ ಉಟ್ಟು" ತೇಳ್ತ್.

ಎಲ್ಲರ ನಿರ್ಧಾರ ಒಂದೇ ಆಕನ ಅನಿವಾರ್ಯ ಆಗಿ ಭಾಗ್ಯ ತನ್ನ ನಿರ್ಧಾರನ ಬದ್ಲಿಸ ಬೇಕಾತ್.

ಭಾಗ್ಯ ಮಹೇಶನ ಲಗ್ನಪತ್ರಿಕೆಗೆ ಮಹೇಶನ ಅಪ್ಪ-ಅಮ್ಮ ಮತ್ತೆ ಅವರ ಸ್ವಲ್ಪ ನೆಂಟರ್‌ಗ, ಅವನ ಫ್ರೆಂಡ್‌ಗ ಬಂದಿದ್ದೊ. ಮಹೇಶನ ಅಪ್ಪ ಕೊಡಗಿನವು ಆದರೂ ಚಾಕರಿಲಿ ಇದ್ರಂದ ಮೈಸೂರ್‌ಲಿ ಮನೆ ಮಾಡಿ ಅಲ್ಲೆ ಎಷ್ಟೋ ವರ್ಷಗಳ್‌ಂದ ಇದ್ದೊ. ಆದ್ರಂದ ಇಲ್ಲಿ ಹೆಚ್ಚ್‌ನ ನೆಂಟರ್ ಇತ್ತ್‌ಲೆ. ಇದ್ದವೂ ಸಹ ದೂರ ದೂರ ಇದ್ದೊ. ಅವ್ರನ್ನೆಲ್ಲಾ  ಮದ್ವೆಗೆ ಕರಿಯನೊತೇಳಿ ಯಾರಿಗೂ ಹೇಳಿತ್ತ್‌ಲೆ. ಇನ್ನೊಬ್ಬ ಮಂಜನೂ ಫಾರಿನ್‌ಗೆ ಹೋಗಿತ್ತ್. ಅಂವ ಓದ್ ಮುಗ್ಸಿ ಅಲ್ಲೆ ಕೆಲ್ಸಕ್ಕೆ ಸೇರ್‌ದ್ರಂದ  ಸದ್ಯಕ್ಕೆ ರಜೆ ಹಾಕಿಕೆ ಆದುಲೆತ ಅಂವ ಬಾತ್‌ಲೆ.

ಮಹೇಶನ ಅಪ್ಪ-ಅಮ್ಮಂಗೆ ಭಾಗ್ಯನ ನೋಡಿ ಬಾಳ ಕುಶಿ ಆತ್. ಮಹೇಶನ ಆಯ್ಕೆನ ಮೆಚ್ಚಿಕಂಡೊ.

ಆದಷ್ಟ್ ಬ್ಯಾಗ ಮದ್ವೆ ಮಾಡಿ ಕೊಡಿತ ಆತುರ ಪಡ್ಸಿದೊ, ಮಹೇಶಂಗೆ ಸ್ವರ್ಗಕ್ಕೆ ಮೂರೇ ಗೇಣ್ ತೇಳ್ವಂಗೆ ಆಗಿತ್ತ್. ತಾನ್ ಮೆಚ್ಚಿದ ಗೂಡೆ ತನಗೆ ದಕ್ಕಿದೆತೇಳಿ ಅವನ ಎದೆ ಉಬ್ಬಿ ಹೋಗಿತ್ತ್.

ಆದರೆ ಭಾಗ್ಯ ಮಾತ್ರ ತನ್ನ ಭಾವನೆಗಳ್ನಕೊಂದ್‌ಕಂಡ್ ನಿರ್ವಿಕಾರವಾಗಿ ಇತ್ತ್. ಅವ್ಳ ಮುಕಲಿ ಸಂತೋಷನೇ ಕಾಣ್ತಿತ್‌ಲೆ. ಆದರೆ ಯಾರೂ ಅವ್ಳ ಅಷ್ಟಾಗಿ ಗಮನಿಸ್‌ತ್‌ಲೆ. ಎಲ್ಲವು ನಾಚಿಕೆಲಿ ಅವ್ಳು ಹಂಗೆ ಉಟ್ಟುತ ತಿಳ್ಕಂಡೊ.

ಆದರೆ, ಅವ್ಳ ಮನ್ಸ್‌ನ ತಿಳ್ದಿದ್ದ ಪ್ರಶಾಂತ ಅವ್ಳಿಗೆ ಸಮಾಧಾನ ಹೇಳಿತ್ತ್.

ಮೋಹನ್ ಮಾತ್ರ ಅವಳ್ನ ಆಗಾಗ ಬಂದ್ ತಮಾಷೆ ಮಾಡ್ತಿತ್ತ್.

"ಭಾಗ್ಯ, ಬೇಗ ಒಪ್ಪಿಕ ಸೋತೆತೆ, ಅಂದ್ ನೀನ್ ಎಂತ ಹೇಳಿದ್ದ ಗ್ಯಾನ ಉಟ್ಟಾ ನೀನ್ ಗಂಡಸರಿಗೆ ಸೋಲುದುಲೆತ ಹೇಳಿದ್ದ"

ಮೌನ ಮಾತ್ರ ಭಾಗ್ಯನ ಉತ್ತರ ಆಗಿತ್ತ್.

ಅಷ್ಟೊತ್ತಿಗೆ ಜಯಶ್ರೀ ಅಮ್ಮನ ಕರ್‌ಕಂಡ್ ಬಂದ್,

"ಅಮ್ಮ, ಇಷ್ಟ್‌ದಿನ ಇವು ಒಬ್ಬ ಡಾಕ್ಟರ್ ಇನ್ನ್ ಮುಂದೆ ಒಬ್ಬೊಬ್ಬಂಗೆ ಎರಡೆರಡ್ ಡಾಕ್ಟ್ರಗಳ ಸಲಹೆ ಉಚಿತವಾಗಿ ಸಿಕ್ಕಿದೆ" ತೇಳ್ತ್.

ಎಲ್ಲವೂ ಹೊರ್‍ಟು ಹೋದೊ. ಮಹೇಶ ಬರುವ ವಾರ ಬನ್ನೆತ ಹೇಳಿ  ಹೋಗಿತ್ತ್. ಹಂಗೆ ಫೋನ್ ಮಾಡ್‌ತ ಹೇಳಿ ಹೋಗಿತ್ತ್. ಭಾಗ್ಯಂಗೆ ಯಾವುದೇ ಆಸಕ್ತಿ ಇತ್ತ್‌ಲೆ. ಅವ್ಳ ಮನ್ಸ್‌ಂದ ಸೂರ್ಯನ ಗ್ಯಾನ ಪೂರ್ತಿ ಮಾಸಿತ್ತ್‌ಲೆ ತಾನೀಗ ಅವನ ನೆನ್ಸ್‌ದು ತಪ್ಪು, ತಾನೀಗ ಬೇರೊಬ್ಬಂಗೆ ಮುಡ್ಪಾದ ಹೂ ಹೇಳಿ ತಾನೇ ಸಮಾಧಾನ ಮಾಡಿಕಣ್ತ್. ಹಂಗೇ

ನಿಧಾನವಾಗಿ ಅವ್ಳ ಮನ್ಸ್‌ಂದ ಸೂರ್ಯನ ಓಡ್ಸಿ ಮಹೇಶನ ತುಂಬಿಕಣ್‌ವ ಪ್ರಯತ್ನಲಿ ಮೆಲ್ಲೆ ಮೆಲ್ಲೆ ಗೆಲ್ಲ್‌ತಾ ಬಾತ್.

ಅಂದ್ ಭಾಗ್ಯ ಕಾರು ತಕಂಡ್ ಸ್ವಲ್ಪ ದೂರಲಿ ಇದ್ದ ತೋಟಕ್ಕೆ ಹೋಗಿತ್ತ್. ಒಟ್ಟಿಗೆ ರೇಷ್ಮಾನು ಇತ್ತ್ ಪ್ರಶಾಂತಗೆ ರಜೆ ಇರ್‍ಕನ ಮಾತ್ರ ಕಾರ್‌ನ ಅಂವ ತಕಂಡ್ ಹೋತಿತ್ತ್. ಅವ್ಳ್ ತೋಟಕ್ಕೆ, ಗದ್ದೆಗೆ ಹೋಕನೆಲ್ಲ ಕೈಲಿ ಒಂದು ಕತ್ತಿ ಹಿಡ್ಕಂಡ್ ಹೋಗ್ತಿತ್ತ್. ಗದ್ದೆಕೆಲ್ಸ ನೋಡಿಕಂಡ್ ಹಂಗೆ ಬಾಕನ ತೋಟಲಿ ಸುತ್ತಾಡ್‌ಕನ ಕಾಫಿಗಿಡಲಿ ನೆಟ್ಟಂಗೆ, ಹೋದ ಕಂಬ ಚಿಗ್‌ರ್‌ನೆಲ್ಲ ತೆಗ್ದ್ ಹಾಕ್‌ತ್ತಿತ್.

ಅವ್ಳಿಗೆ ಬೆಳೆ ಕೊಯ್ಯದು ತೇಕ್ರೆ ಬಾಳಾ ಕುಶಿ. ಅವ್ಳು ಗದ್ದೆಗೆ ಬಂದರೆ ಕೆಲ್ಸ ಬೇಗ 'ಬೇಗ ಸಾಗ್‌ತಿತ್ತ್. ಆಳುಗಳಿಗೆ ಅವ್ಳು ತಮಾಷೆ ಕತೆಗಳ್ನ ಹೇಳಿ ನಗಾಡ್‌ಸ್ತಿತ್.

ಕೆಲ್ಸಲಿ ಮುಳ್ಗಿ ಆಳುಗಳೊಟ್ಟಿಗೆ ಹಂಚಿಕಂಡ್ ಇದ್ದವ್ಳಿಗೆ ಹಿಂದೆಂದ ತೇಲಿಬಂದ ನಗೆನ ಕೇಳಿ ತಿರ್‍ಗಿ ನೋಡ್ತ್, ಸ್ವಲ್ಪ ದೂರಲಿ ಪ್ರಶಾಂತ ಮತ್ತೆ ಮಹೇಶ ನಿತ್ತಿದ್ದೊ! ರೇಷ್ಮಾ ಆಗಲೇ ಅವರೊಟ್ಟಿಗೆ ಸೇರಿಬುಟ್ಟಿತ್.

"ಏನ್ ಅಮ್ಮಾವ್ರು ಬಾಳ ಕೆಲ್ಸ ಮಾಡ್ದಂಗೆ ಕಂಡದೆ. ಒಂದ್ ಸಮಯ ನಾನ್ ಬಡಂವ ಆದ್ರೂ ಬದ್ಕಿಕೆ ತೊಂದರೆ ಇಲ್ಲೆ ತೇಳ್ವ ಧೈರ್ಯ ನಂಗೆ, ಉಟ್ಟು "ತೇಳ್ ಮಹೇಶ ಭಾಗ್ಯನ ನೋಡಿ"

"ಭಾಗ್ಯ ನಾಚಿಕೆಲಿ ಕೆಂಪಾತ್"

"ಯಾಗ ಬಂದರಿ?" ಕೇಳ್ತ್ ಮೆಲ್ಲೆ.

"ನಾನ್ ಮನೆಗೆ ಬಂದ್ ಬಾಳ ಹೊತ್ತಾತ್. ದೇವಿನ ದರ್ಶನ ಇಲ್ಲದೆ ಅಲ್ಲಿ ನಿಲ್ಲಿಕೆ ಆತ್‌ಲೆ. ಅದ್ಕೆ ಆಗತಾನೆ ಬಂದಿದ್ದ ಪ್ರಶಾಂತ ಭಾವನ ಎಳ್ಕಂಡ್ ಬಂದೆ'

"ಇಲ್ಲಿ ಎಷ್ಟೊತ್ತ್‌ಂದ ನಿತ್ತ್ ಕಂಡಿದ್ರೊ ಏನೋ?" ಮತ್ತೆ ಬನ್ನೆತ ಫೋನ್ ಮಾಡ್ತ್‌ಲೆ"

"ನಾ ಬಂದದ್ ಸಾರ್ಥಕ ಆತ್, ಮುಂದೆ ತಿಳ್ಸಿ ಬಂದಿದ್ದರೆ ಇಂತ ನೋಟ ಕಾಂಬಕೆ ಸಿಕ್ಕ್‌ತಿತ್ತಾ"

"ಏನ್ ಭಾಗ್ಯ, ನನ್ನ ಕಣ್ಣಿಗೇ ಕಾಂಬಲೆ ಅಲ್ಲ, ಮದ್ವೆಬ್ಯಾಡ ತೇಳ್‌ತಿದ್ದವ್ಳು ಈಗ ಪಟ್ಟಾಂಗ ಹೊಡಿಯಕೆ ಶುರು ಮಾಡಿ ಬುಟ್ಟೊಳ" ತೇಳಿ ಕಣ್ಣ್ ಮಿಟಿಕಿಸಿತ್. ಪ್ರಶಾಂತ

"ಹಂಗೆಂತ ಏನ್ ಇಲ್ಲಣ್ಣ" ಭಾಗ್ಯ ಹೇಳ್ತ್ ತಲೆತಗ್ಗಿಸಿ.

"ಸರಿ ಇನ್ನ್ ಮನೆಗೆ ಪೋಯಿ, ಮತ್ತೆ ಬೇಕಾದಷ್ಟ್ ಮಾತಾಡಿ"

ಮಹೇಶ ಕಾರ್‌ನ ಮುಂದೆನ ಸೀಟ್‌ಲಿ ಕುದ್ದತ್ ಭಾಗ್ಯ ಹಿಂದೆನ ಸೀಟ್‌ನ ಬಾಗ್ಲ್ ತೆಗೆಯಕನ ಪ್ರಶಾಂತ ನಗಾಡಿ" ಬೇಡ ಭಾಗ್ಯ ನೀನ್ ಡ್ರೈವ್ ಮಾಡ್, ಭಾವನೋಡೋಕಂತೆ" ತೇಳಿ ಅವಳ್ನ ಒಳಗೆ ತಳ್ಳಿ ಬಾಗ್ಲ್ ಹಾಕಿ ರೇಷ್ಮನೊಟ್ಟಿಗೆ ಹಿಂದಿನ ಸೀಟ್‌ಲಿ ಕುದ್ದತ್.

ವೀಲ್ ಮ್ಯಾಲೆ ಇದ್ದ ಭಾಗ್ಯನ ಕೈ ಪರಿಚಯ ಇರ್‍ವ ದಾರಿ ಆದ್ರಂದ ಸರಾಗವಾಗಿ ಓಡ್‌ತ್ತಿತ್ತ್. ಮನ್ಸ್ ಮಾತ್ರ ಮಹೇಶನ ಸುತ್ತ ಸುತ್ತ್‌ತಿತ್ತ್.

ವಾರೆಕಣ್ಣ್‌ಲಿ ಅಂವನೊಮ್ಮೆ ನೋಡ್‌ತ್ ಮಹೇಶ ಅವ್ಳ ಚಂದನ ಹೀರುವ ದುಂಬಿಯಾಗಿತ್ತ್, ಕಣ್ಣ್‌ಲಿ ಮೆಚ್ಚ್‌ಗೆ ಇತ್ತ್.

ಪ್ರಶಾಂತ -ರೇಷ್ಮ ಹಿಂದೆನ ಸೀಟ್‌ಲಿ ತಮ್ಮದೇ ಆದ ಬಾಲಬಾಷೆಲಿ ತೊಡಗಿದ್ದೊ.

ಭಾಗ್ಯ-ಮಹೇಶನ ಮದುವೆ ಭಾರಿ ಗೌಜಿಲಿ ನಡ್ದ್ ಹೋತ್. ಮಹೇಶನ ಅಮ್ಮ ಆಗೊಮ್ಮೆ ಈಗೊಮ್ಮೆ ತಮ್ಮ ಎರ್ಡನೆ ಮಂಜ ಇಲ್ಲದಕ್ಕೆ ಪರ್‍ದಾಡ್‌ತಿದ್ದೊ.

"ಪ್ರಕಾಶ ಇದ್ದಿದ್ದರೆ ಎಷ್ಟ್ ಲಾಯ್ಕ ಇತ್ತ್" ತೇಳಿ ಮಹೇಶನೊಟ್ಟಿಗೆ ಹೇಳ್‌ತಿದ್ದೊ.

ಶಾರದನವು ತಮ್ಮ ಮುದ್ದಿನ ಮಗಳಿಗೆ ಬೇಕಾದಷ್ಟ್ ಕಂಚಿಮುಟ್ಟು, ಬಟ್ಟೆಬರೆ ಮತ್ತೆ ಮನೆ ಸಾಮಾನೆಲ್ಲಾ ಕೊಟ್ಟಿದ್ದೊ.

ಭಾಗ್ಯಶ್ರೀ ಮಹೇಶನ ಮನೆನ ಭಾಗ್ಯ ಲಕ್ಷ್ಮಿ ಆತ್. ಅತ್ತೆ ಅವಳ್ನ ಮಗಳಿಗಿಂತ ಹೆಚ್ಚಾಗಿ ಅಂಗೈಲಿಟ್ಟ್ ನೋಡಿ ಕಂಬತಿದ್ದೊ ಮಾವನಂತೂ ಪ್ರತಿಯೊಂದಕ್ಕೂ ಭಾಗ್ಯ .... ಭಾಗ್ಯತ ಜಪ ಮಾಡ್ತಿದ್ದೊ.

ಸ್ವಲ್ಪ ದಿನಲಿ ಮೋಹನಂಗೆ ಬೆಂಗ್ಳೂರಿಗೆ ವರ್ಗ ಆಗಿತ್ತ್, ಜಯಶ್ರೀ ಮುದ್ದು ಕೂಸು ಅರುಣನ ಅಮ್ಮ ಆಗಿತ್ತ್.

ಪ್ರಶಾಂತ-ಶಾಲಿನಿ ಪುಟ್ಟಾಣಿ ಅಕ್ಷಯ್‌ನ ಪಡ್ದಿದ್ದೊ.

ಮೋಹನ್ ವರ್ಗವಾಗಿ ಹ್ವಾದ ಮ್ಯಾಲೆ ಅಲ್ಲಿ ಇರ್‍ಕೆಬ್ಯಾಜರ ಆಗಿ ಮಹೇಶ ಮೈಸೂರಿಗೆ ವರ್ಗ ಮಾಡ್ಸಿಕಂಡಿತ್. ಮಹೇಶನ ಅಪ್ಪ-ಅಮ್ಮನ ಇಷ್ಟನೂ ಅದೇ ಆಗಿತ್ತ್ ಭಾಗ್ಯ ಅವ್ಕೆ ಮಗಳಂಗೆ ಒಗ್ಗಿ ಹೋಗಿತ್ತ್. ಇದ್ರಂದ ಭಾಗ್ಯ ಅತ್ತೆ-ಮಾವ ನೊಟ್ಟಿಗೆ ಮನೆಲಿ ಉಳ್ಕಂಡತ್. ಮಹೇಶ ಮನೆಂದನೇ ಆಸ್ಪತ್ರೆಗೆ ಹೋಗಿ ಬಾತಿತ್ತ್.

ಭಾಗ್ಯಂಗೆ ಫಾರಿನ್‌ಗೆ ಹೋಗಿರ್‍ವ ತನ್ನ ಮೈದುನನ ಕಾಂಬಕೆ ಎಂತದೋ ಕುತೂಹಲ ಮನೆಲಿ ಹುಡ್ಕಿರೂ ಅವನ ಒಂದೂ ಫೋಟೋ ಸಹ ಸಿಕ್ತ್‌ಲೆ ಮಹೇಶನ ಕೇಳ್ದರೆ,

"ಅವನ ಫೋಟೋ ಕಂಡರೆ ಅಮ್ಮ ಮರ್‍ಡಿಕೆ ಶುರು ಮಾಡ್ವೆ ಅದ್ಕೆ ಒಂದೂ ಕಾಣದಂಗೆ ಆಲ್ಬಮ್‌ಲಿ ಹಾಕ್ಯೊಳೆ ಆಲ್ಬಮ್ ಅಟ್ಟಲಿ ಎಲ್ಲೊ ಉಟ್ಟು ಹುತ್ತರಿ ಬಾಕನ ಆಳ್‌ಗ ಅಟ್ಟನ  ಕ್ಲೀನ್ ಮಾಡ್ವೆ ಆಗ ಸಿಕ್ಕಿದೆ ಬುಡ್ ಇಲ್ಲರೆ ಇನ್ನ್ ಒಂದು ವರ್ಷಲಿ ಅಂವನೇ ಬಂದ್ ಬುಟ್ಟದೆ, ಆಗ ನೀನೆ ಪ್ರತ್ಯಕ್ಷವಾಗಿ ನೋಡ್ ತೇಳಿ ಸುಮ್ಮನಾಗಿ ಬುಟ್ಟತ್.

'ಇನ್ನ್ ಒಂದ್ ವರ್ಷಲಿ ಬಂದದೆ', ಸೂರ್ಯ ಹೋಗಿ ಎರ್ಡು ವರ್ಷ ಅತ್, ಇನ್ನ್ ಒಂದು ವರ್ಷಲಿ ಅವನೂ ಬಾದು ಏನೊ ಅಂವನ ಎಂದೆಂದೂ ಕಾಂಬ ಅವಕಾಶ ಬಾರದೇ ಹೋಗಲಿ 'ವನಿತಾನೊಟ್ಟಿಗೆ  ಅಂವ ಎಲ್ಲಾರ ಲಾಯ್ಕಲಿ ಇರ್‍ಲಿ'

ಭಾಗ್ಯನ ಗ್ಯಾನ ಎಲ್ಲೆಲ್ಲೊ ಹೋಗ್‌ತಿತ್. ಆದರೆ ದೇವರಂತ ಅತ್ತೆ ಮಾವ, ಪ್ರೀತಿನ ಹೊಳೆಲಿ ಈಜಾಡಿಸ್‌ತಿರ್ವ ಪ್ರಾಣಕ್ಕಿಂತ ಹೆಚ್ಚ್ ಪ್ರೀತಿ ಮಾಡ್ವ ಮಹೇಶ ಇವ್ರ ನಡುಲಿ ಸೂರ್ಯ ತೃಣವಾಗಿತ್ತು.

ಅಮ್ಮನ ಗ್ಯಾನ ಆಕನೆಲ್ಲಾ ಅವ್ಳು ಮೂರ್ನಾಡಿಗೆ ಬಂದ್ ಹೋಗ್‌ತಿತ್. ಶನಿವಾರ ಐತ್ವಾರ ಆದರೆ ಮಹೇಶನೂ ಬಾತಿತ್. ಮಹೇಶ ನಿಸರ್ಗ ಪ್ರೇಮಿ ಪ್ರಕೃತಿ ಸೌಂದರ್ಯ ಹೊಂದಿರ್ವ ಕೊಡಗಿಗೆ ಅಂವ ಅದ್ಕೆತೇಳಿ ಮತ್ತೆ ಮತ್ತೆ ಹೋಗ್‌ತಿತ್. ಅಲ್ಲದೆ ಡಾಕ್ಟರಾಗಿ ಹಗಲ್ ಇರ್ಲ್ ಇಲ್ಲದೆ ಕೆಲ್ಸ ಮಾಡ್ವ ಜೀವಕ್ಕೆ ಸ್ವಲ್ಪ ಆರಾಮ ಸಿಕ್ಕ್‌ತಿತ್.

ಕಿತ್ತುಳಿ ಹಣ್ಣ್‌ನ ಸಮಯಲ್ಲಂತೂ ಆ ನೋಟ ನೋಡಿಕೆ ಬಾಳಾ ಪೋಲ್ರ್ ಭೂಮಿತಾಯಿ ಹಸ್ರ್ ಸೀರೆ ಉಟ್ಟ್ ಚೆನ್ನದ  ಬಣ್ಣದ ಜಂಪರ್ ಹಾಕಂಡ್ ಮಲ್ಗಿದಂತೆ ಕಂಡದೆ!! ಮ್ಯಾಲೆ ನೋಡ್ರೆ ಹಂಗೆ ಇನ್ನ್ ಕೆಳಿಗೆ ನೋಡ್ರೆ ಮುತ್ತ್‌ನ ಮಾಲೆಗಳಂಗೆ ಸಾಲ್‌ಸಾಲಾಗಿ ಗಿಡದ ಸುತ್ತಳೂ ನೆಲಲೆಲ್ಲಾ ಹಬ್ಬಿರ್ವ ಏಲಕ್ಕಿ ಕಾಯಿಗ ಎಂತಾ ಅರಸಿಕನೂ ಆ ಕ್ಷಣಲಿ ತನ್ನನೇ ತಾನ್ ಮರ್ತ್ ಬುಟ್ಟದೆ. ಇನ್ನ್ ರಸಿಕರಿಗೆ ಹಬ್ಬದ ಊಟ ಮಾಡ್ದಂಗೆನೆ!!

ಮಹೇಶ-ಭಾಗ್ಯನ ದಾಂಪತ್ಯ ಜೀವನದ ಮೊದ್ಲ ವರ್ಷ ಯಾವ ಏರ್‌ಪೇರ್ ಇಲ್ಲದೆ  ಅವ್ಕೇ ಗೊತ್ತಾಗದಂಗೆ ಜಾರಿ ಹೋಗಿತ್.

ಪ್ರಶಾಂತ ಬಾಕೆ ಇನ್ನ್ ಸ್ವಲ್ಪನೇ ದಿನ ಇರ್ದುತ ಗೊತ್ತಾಗಿ ಎಲ್ಲವ್ಕೂ ಬಾಳ ಕುಶಿ ಆತ್. ಇನ್ನ್ ಎರ್ಡ್ ತಿಂಗಲಿ ಬನ್ನೆತ ಅವಂದ ಫೋನ್ ಬಂದಿತ್.

ಹಂಗೆ ಅತ್ತಿಗೆನ ಕಾಂಬಕೆ ಬಾಳ ಆಸೆ ಆಗುಟ್ಟುತ ಹೇಳಿ ವಿಮಾನ ನಿಲ್ದಾಣಕ್ಕೆ ಎಲ್ಲವೂ ಬರಕುತ ಹೇಳಿತ್.

ಅತ್ತೆ ಮಾವಂದ್‌ರ್ ಬಾಳಾ ಸಮೆಂದ ದೂರ ಇರ್ವ ಮಂಜ ಬರುವ ಸುದ್ದಿ ಕೇಳಿ ಉಬ್ಬಿ ಹೋಗಿದ್ದೊ. ಅವ್ಕೆ ತಮ್ಮ ವಯ್ಸೇ ಮರ್ತ್ ಹೋಂದಂಗೆ ಕುಶಿಲಿ ಓಡಾಡಿಕೆ ಶುರು ಮಾಡ್ದೊ. ಮಹೇಶ ಸ ತನ್ನ ಪ್ರೀತಿಯ ತಮ್ಮ ಬಾವ ದಿನ ಲೆಕ್ಕ ಹಾಕಿಕೆ ಶುರು ಮಾಡ್ತ್ ಭಾಗ್ಯನೂ ತನ್ನ ಮೈದುನನ ಕಲ್ಪನೆಲಿ ತೊಡ್‌ಗಿತ್.

ಅತ್ತೆಗೆ ಬ್ಲಡ್ ಪ್ರೆಶರ್ ಇದ್ರಂದ ಅವು ಎಂತ ಕೆಲ್ಸನೂ ಮಾಡ್‌ತಿತ್ತ್‌ಲೆ ಮನೆಲಿ ಎಲ್ಲ ಕೆಲ್ಸಕ್ಕೂ ಆಳ್‌ಗ ಇದ್ರಂದ ಭಾಗ್ಯ ಸ ಕೆಲ್ಸ ಮಾಡ್ವ ಅಗತ್ಯ ಇತ್ತ್‌ಲೆ.

ಮಹೇಶ ಆಸ್ಪತ್ರೆಗೆ ಹೋದಮ್ಯಾಲೆ ಭಾಗ್ಯ ಟಿವಿ ನೋಡ್ದು, ಕತೆ ಪುಸ್ತಕ ಓದುದ್ ಮಾಡ್‌ತಿತ್. ಅವ್ಳಿಗೆ ಮುಂದೆಂದ್ಲೂ ಕತೆ ಪುಸ್ತಕ ತೇಳ್ರೆ ಹುಚ್ಚು ಈಗಂತೂ ಮಾಡಿಕೆ ಕೆಲ್ಸ ಇಲ್ಲೆ, ಜೊತೆಲಿ ಹಗಲೆಲ್ಲಾ ಏಕಾಂತ.

ಅತ್ತೆ ಮಾವನ ಉಪಚಾರ ಮಾತ್ರ ತಾನೇ ನಿತ್ತ್ ಮಾಡ್ತಿತ್. ಭಾಗ್ಯನ ಮತ್ತೊಂದು ಹವ್ಯಾಸತೇಳ್ರೆ ಹೂ ತೋಟ ಮಾಡ್ದು, ಸಿಟಿಯ ಮನೆ ಆದ್ರಂದ ಹೆಚ್ಚಿಗೆ ಜಾಗ ಇತ್ತ್‌ಲೆ

ಇದ್ದ ಜಾಗಲೇ ನೂರಕ್ಕಿಂತ ಹೆಚ್ಚಿಗೆ ಹೂಚೆಟ್ಟಿ ಇಟ್ಟ್ ಗಿಡ ಬೆಳ್ಸಿತ್ತ್ ಅಲ್ಲದೆ ಟೆರೆಸ್ ಮ್ಯಾಲೆಸ ಗಿಡ ನೆಟ್ಟು ಬೆಳ್ಸಿತ್ತ್ ಚೆಟ್ಟಿಲಿ.

ಅಂದ್ ಹೊತ್ತಾರೆ ಹಾಸಿಗೆಂದ ಏಳ್‌ಕನೇ ಅವ್ಳಿಗೆ ಎಂತದೊ ಹೊಟ್ಟೆಲಿ ಸಂಕಟ, ಬಲ್ದ ಕಣ್ಣ್ ಹಾರಿಕೆ ಶುರುಆತ್. ಅವ್ಳಿಗೆ ಎಂತದೋ ಕಳ್ಕಂಡಂಗೆ ಆಗ್‌ತಿತ್ತ್. ಊಟ ಸೇರ್‌ತ್ಲೆ ಮಹೇಶ ಆಸ್ಪತ್ರೆಗೆ ಹೋದಮ್ಯಾಲೆ ಹಂಗೇ ಹಾಸಿಗೆಲಿಬಿದ್ದ್‌ಕಂಡತ್.

ಆಸ್ಪತ್ರೆಗೆ ಹೋದ ಒಂದೆರಡ್ ಗಂಟೆಲೇ ವಾಪಾಸು ಬಂದ ಮಹೇಶನ ನೋಡಿ ಅವ್ಳಿಗೆ ಆಶ್ಚರ್ಯ, ಗಾಬರಿ ಎಲ್ಲಾ ಒಟ್ಟಿಗೆ ಆತ್.

ಮಹೇಶನ ಮುಕಲಿ ಎಂದ್‌ನ ಕಳೆಯಾಗಲೀ ಅವನ ಸರಸದ ಮಾತಾಗಲೀ ಇತ್ತ್‌ಲೆ.

"ಏನ್ ಎಂತಾತ್? ಯಾಕೆ ಹಿಂಗೆ ವಳ್ರಿ? ಆರೋಗ್ಯ ಸರಿ ಉಟ್ಟುತಾನೆ?"

ತೇಳಿ ಅವನ ಹಣೆ ಮುಕನ ಮುಟ್ಟಿ ನೋಡ್ತ್.

"ಭಾಗ್ಯ ನಾನ್.............. ಉಸಾರ್‌ವಳೆ, ಆದರೆ, ನಿಮ್ಮ ಅಮ್ಮಂಗೆ ಸೀರಿಯಸ್‌ತ ಪ್ರಶಾಂತ ಭಾವ ಪೋನ್ ಮಾಡಿತ್. ನೀನ್ ಗಾಬರಿ ಆದಿಯಾತ ನಿಂಗೆ ಫೋನ್ ಮಾಡ್‌ತ್ಲೆ." ತೇಳಿ ಸೀದ ಒಳಗೆ ಹೊರ್‍ಟು ಹೋತ್.

ಭಾಗ್ಯಂಗೆ ತಲೆ ಮ್ಯಾಲೆ ಆಕಾಶನೇ ಬಿದ್ದಂಗೆ ಆತ್. ಅಪ್ಪನ ಕಳ್ಕಂಡ ದುಕ್ಕ ಆರಿಕೆ ಮುಂದೆ ಈ ಸುದ್ದಿ ಅಮ್ಮನ ಉಳ್ಸಿಕೊಡುತ ದೇವ್ರ್‌ನ ಕೇಳಿಕಂಡತ್.

"ಒಳ್ಳೆ ಅಮ್ಮ ಆಗಿತ್ತ್. ಆದರೆ ಆ ದೇವ್ರ್ ಕರಿಯಕನ ಎಲ್ಲವೂ ಒಂದಲ್ಲ ಒಂದ್ ದಿನ ಹೋಗೇ ಹೋಕಲ್ಲ, ಭಾಗ್ಯನ ಒಟ್ಟಿಗೆ ಕರ್‍ಕಂಡ್ ಬಂದ್ ಬುಡ್ ಅಲ್ಲಿ ಇದ್ದರೆ ಅವ್ಳಿಗೆ ದುಕ್ಕ ತಡಿಯಕೆ ಆಕಿಲೆ ಶುದ್ಧ ಕಳ್ದಂಗೆ ಬಂದ್ ಬುಡಿ, "ಅಪ್ಪಂಗೆ ನಂಗೆ ಉಸಾರ್ ಇದ್ದಿದ್ದರೆ ನಾವೂ ಬರಕಾಗಿತ್ತ್ ಎಂತ ಮಾಡ್ದು"

ಅಸ್ಪಷ್ಟ ಆಗಿ ಭಾಗ್ಯನ ಕೆಮಿಗೆ ಕೇಳ್ದ ಈ ಮಾತ್‌ಗಳ್‌ಂದ ಅವ್ಳ ಕಣ್ಣ್‌ಂದ ನೀರ್‌ನ ಹೊಳೆ ಹರ್‍ತ್ ಅವ್ಳಿಗೆ ಯಾಕೊ ಸಂಶಯ ಬಂದ್ ಮತ್ತೆ ಮಹೇಶನ ಕೇಳ್ತ್.

"ಅಮ್ಮಂಗೆ ಎಂತ ಆತ್‌ಲೆ ಅಲ್ಲಾ"

"ಹೂಂ ಭಾಗ್ಯ ಬೇಗ ಹೊರ್‍ಡು ಲೇಟಾದೆ ಬಾ ಬಾ" ತೇಳಿ ಶೆಡ್ಡ್‌ಂದ ಕಾರ್ ತೆಗಿಯಕೆ ಹೊರ್‍ಟತ್. ಆಸ್ಪತ್ರೆಗೆ ಹೋಕನ ತಕಂಡ್ ಹೋಗಿದ್ದ ಬೈಕ್‌ನ ವಳಗೆ ನಿಲ್ಲಿಸಿ ಕಾರ್ ರೆಡಿ ಮಾಡ್ಕನ ಭಾಗ್ಯಂದ್ ಹೊರ್‍ಟ್ ಆತ್.

"ಸ್ವಲ್ಪ ಬಟ್ಟೆ ಬರೆ ತಕವ್ವ ಸ್ವಲ್ಪದಿನ ಇರಕುತಾದ್ರೆ ಕಷ್ಟ" ಬುಡ್ ನಾನೇ ಪ್ಯಾಕ್ ಮಾಡಿಕೊಟ್ನೆ"

ಬಟ್ಟೆ ಬ್ಯಾಗಿಗೆ ಹಾಕ್‌ಕನ ಅವ್ಳಿಗೆ ಗೊತ್ತಿಲ್ಲದಂಗೆ ಅವ್ಳ ಬಿಳಿ ಸೀರೆನೂ ಹಾಕಿದೊ.

ಭಾಗ್ಯ ಕಣ್ಣ್‌ಲೇ ಮೌನವಾಗಿ ಅತ್ತೆ ಮಾವಂಗೆ ತಿಳ್ಸಿ ಕಾರ್‌ಹತ್ತಿತ್. ಮಹೇಶನ ಗಂಭೀರ ಮುಕ ನೋಡ್ಕನ ಇವು ನನ್ನತ್ರ ಮುಚ್ಚುಮರೆ ಮಾಡ್ತಾವಳೊತ ಸಂಶಯ ಮತ್ತೆ ಮೂಡ್ತ್.

"ನಿಜ ಹೇಳಿ ಅಮ್ಮಂಗೆ ಎಂತಾತ್"

ಇನ್ನ್ ಮುಚ್ಚು ಮರೆ ಮಾಡಿ ಪ್ರಯೋಜನ ಇಲ್ಲೆತ ಮಹೇಶ ಮೆಲ್ಲೆ ಅವ್ಳಿಗೆ ಹೇಳ್ತ್ ಅತ್ತೆ ಬೆಳ್ಳಿಗೆ ಹಾರ್ಟ್ ಅಟೆಕ್ ಆಗಿ ತೀರಿಹೋದೊಂತೆ ಪ್ರಶಾಂತ ತಕ್ಷಣ ಹೊರ್ಡಿತ ಪೋನ್ ಮಾಡ್ತ್."

ಭಾಗ್ಯಂಗೆ ಕಣ್ಣ್ ಕತ್ತಲೆ ಬಂದ್ ಹಂಗೇ ಮಹೇಶನ ಹೆಗ್‌ಲಿಗೆ ವರ್‌ಗಿತ್ ಮಹೇಶ ಹಂಗೇ ಅವ್ನ ವರ್‍ಗಿಸಿಕಂಡೇ ರಭಸಲಿ ಕಾರ್ ಓಡ್ಸಿತ್, ಅವ್ಳು ಸಧ್ಯಕ್ಕೆ ಹಂಗೇ ಇರ್ಲಿತ ಎಚ್ಚರ ಮಾಡಿಕೆ ಹೋತ್‌ಲೆ. ಕಾರ್‌ನ ಗ್ಲಾಸ್ ಇಳ್ಸಿ ಸೀಟ್ ಬೆಲ್ಟ್ ಹಾಕಿ ಅವ್ಳಹಂಗೇ ಕೂರ್ಸಿತ್ ಕಾರೊಳಗೇ ನುಗ್ಗಿ ಬಾತಿದ್ದ ತಂಗಾಳಿಗೆ ಅವ್ಳಿಗೆ ಎಚ್ಚರ ಆತ್ತ್, ಮನೆ ಇನ್ನ್ ಸ್ವಲ್ಪ ದೂರ ಮಾತ್ರ ಇತ್ತ್. ಕಣ್ಣೀರ್ ಹಂಗೇ ಹರಿಯತಿತ್ತ್.

ಮನೆ ಎತ್ತಿದಂಗೆ "ಅಮ್ಮಾ ........ ತ" ಮರ್ಟ್‌ಕಂಡ್ ಓಡ್ತ್. ಜಯಶ್ರೀ, ಮೋಹನ್ ಸೇರ್ದಂಗೆ ಎಲ್ಲಾ ನೆಂಟರಿಷ್ಟರು ಮನೆಲಿ ಸೇರಿ ಹೋಗಿದ್ದೊ, ಮನೆಯಿಡೀ ರೋಧನಂದ ತುಂಬಿ ಹೋಗಿತ್ತ್. ಭಾಗ್ಯ ಮತ್ತೆ ಜಯನ ಅಳುಂದಾಗಿ ಅಲ್ಲಿ ಇದ್ದವೆಲ್ಲಾ ಮರ್ಡಿಕೆ ಶುರುಮಾಡ್ದೊ. ಅಮ್ಮನ ಕಾಲ್‌ಹತ್ರ ಕುಸ್‌ದು ಬಿದ್ದ ಭಾಗ್ಯನ ಶಾಲಿನಿ–ಜಯ ಬಂದ್ ಎತ್ತಿ ಪಕ್ಕಲಿದ್ದ ಬೆಂಚಿಲಿ ಕೂರ್ಸಿದೊ.

ಶಾರದ ನಿದ್ರೆ ಮಾಡಿದಂಗೆ ಮಲ್ಗಿದ್ದೊ, ಬೆಳಿಗ್ಗೆ ಪೂಜೆ ಮಾಡಿಕಂಡ್ ಇದ್ದಂಗೆ ಹೃದಯಘಾತ ಆಗಿ ದೇವರ ಪಾದ ಸೇರಿದ್ದೊ. ಧರ್ಮಂದ ಬಾಳ್ದ ಜೀವ ಯಾವ ನರಳಾಟ ಇಲ್ಲದೆ, ಒಬ್ಬಂಗೆ ತೊಂದರೆ ಕೊಡದೆ ಪತಿಯ ಹತ್ರ ನಡ್‌ದಿತ್ತ್.

ಮಂಜ, ಸೊಸೆ, ಮಗಕ, ಡಾಕ್ಟರಾದ ಅಳಿಯಂದ್‌ರ್ ಮೊಮ್ಮಕ್ಕ ಎಲ್ಲವೂ ಇದ್ದರೂ ಯಾರಿಂದಲೂ ಸೇವೆ ಪಡ್ಕಣಿಕೆ ಇಚ್ಚಿಸದೆ ಯಾರಿಗೂ ಗೊತ್ತೆ ಆಗದಂತೆ ಹೊರ್ಟು ಹೋಗಿದ್ದೊ ಶಾರದ.

ಶುದ್ಧ ಕಳ್ದಂಗೆ ಮಹೇಶ–ಭಾಗ್ಯನ ಕರ್ಕಂಡ್ ಹೊರ್ಡಿಕೆ ತಯಾರಾತ್ ಆದರೆ ಪ್ರಶಾಂತ ಒಪ್ಪದೆ ಭಾಗ್ಯ–ಜಯನ ತಿಥಿ ಕಳಿಯಕ್ಕೆ ಮುಟ್ಟ ಉಳ್ಸಿಕಂಡತ್ ತಿಥಿಕಳಿಯೋ ಹೊತ್ತಿಗೆ ಭಾಗ್ಯ ಬಾಳಾ ಲಾಚಾರ್ ಆಗಿಬುಟ್ಟಿತ್. ಅತ್ತೆಗೆ ಅವ್ಳ ನೋಡಿ ಗಾಬರಿಯಾಗೋತ್. ಬೆಣ್ಣೆಮುದ್ದೆನಂಗೆ ಇದ್ದ ಸೊಸೆ ಇಷ್ಟ್ ಬ್ಯಾಗ ಇಷ್ಟೊಂದ್ ಸೊರ್‍ಗಿದ್ ಕಂಡ್ ಅವಳ ದುಕ್ಕದ ಆಳನ ತಿಳ್ಕಂಡ್ ಅವ್ಳಿಗೆ ತರತರಲಿನ ಸಮಾಧಾನ ಮಾಡ್ದೊ.

ಇನ್ನ್ ನಂಗೆ ತವರ್ ದೂರ ಆದಂಗೆತ ಗ್ಯಾನ ಮಾಡಿ ಭಾಗ್ಯಂಗೆ ವೇದನೆ

ಯಾಗ್ತಿತ್ತ್. ಅಮ್ಮ ಇರ್ಕನೇ ಅತ್ತಿಗೆ ಅಸಡ್ಡೆ ಅಸಹನೆ ತೋರ್ತ್ತಿತ್ತ್. ಅಮ್ಮ ಇಲ್ಲದ ಮ್ಯಾಲೆ ಇನ್ನೆಂತ ತವರ್!

ದಿನ ಕಳ್ದಂಗೆ ಚೇತರಿಸಿಕಂಡ ಭಾಗ್ಯ ಪ್ರಕಾಶ ಬಾಕೆ ಇನ್ನೂ ಒಂದೇ ತಿಂಗ ಇರ್ದುತ ತಿಳ್ದ್ ಅವನ ನಿರೀಕ್ಷೆಲಿ ಉಳ್ದವರೊಟ್ಟಿಗೆ ಸೇರಿ ಹೋತ್ ಮಹೇಶಂಗೂ ಸಮಾಧಾನ ಆತ್.

ಇಷ್ಟ್ ದಿನ ಅಂವ ಅವ್ಳ ಸಂತೋಷಕ್ಕಾಗಿ ಎಂತೆಲ್ಲಾ ಮಾಡಿಕೆ ಸಾಧ್ಯನೋ ಅದೆಲ್ಲಾಮಾಡಿತ್ತ್ ಇವರೆಲ್ಲರ ಪ್ರೀತಿ ಕಂಡ ಭಾಗ್ಯಂಗೆ ತಾನ್ ಅತಿಯಾಗಿ ಕೊರ್ಗುದರ್ಲಿ ಅರ್ಥ ಇಲ್ಲೆತ ಅನ್ನಿಸ್ತ್.

ಅಂದ್ ಮಹೇಶ ಆಸ್ಪತ್ರೆಂದ ಡ್ಯೂಟಿ ಮುಗ್ಸಿ ಬಾಕನ ಭಾಗ್ಯನ ಸುಳಿವೇ ಕಂಡತ್‌ಲೆ ಯಾಗೊಳೂ ತನ್ನ ಕಾರ್ ಬಾಕನೇ ಅಲಂಕರಿಸಿಕಂಡ್ ಗೇಟ್‌ನ ಹತ್ರ ಕಾದ್ ನಿತ್ತಿರ್‌ತಿದ್ದ ಭಾಗ್ಯನ ಕಾಣದೆ ಸೀದಾ ಒಳಗೆ ಬಾತ್.

ರೂಮ್‌ಲಿ ಹಾಸಿಗೆ ಮ್ಯಾಲೆ ಮಲ್ಗಿದ್ದ ಭಾಗ್ಯನ ಕಂಡ್ ಗಾಬರಿಲಿ ಅವ್ಳತ್ರ ಓಡಿಬಾತ್ ಅಷ್ಟೊತ್ತಿಗೆ ಅಲ್ಲಿಗೆ ಬಂದ ಸೀತಮ್ಮ.

"ಏಳ್‌ಸ್‌ಬಡ, ಬೆಳ್ಗೆಂದ ವಾಂತಿ ಮಾಡಿ ಸುಸ್ತು ಆಗುಟ್ಟು, ಊಟಸ ಮಾಡ್ತ್‌ಲೆ ಪಾಪ ಈಗ ತಾನೆ ಸ್ವಲ್ಪ ಜೂಸ್ ಕುಡ್ದು ಮಲ್ಗಿಟ್ಟು ನಾನೇ ಮಲ್ಗಿಕೆ ಹೇಳ್ದೆ"

"ಎಂತ ಅಮ್ಮ ನೀನ್ ಫೋನು ಮಾಡ್ದು ಅಲ್ಲಾ". ಮಹೇಶ ಹಣೆ ಮುಟ್ಟಿ ನೋಡ್ತ್, ಜ್ವರ ಇಲ್ಲೆ.

ಏ ಅವ್ಳಿಗೆ ಏನೂ ಆತ್‌ಲೆ ಬುಡ್ ಅವ್ಳಿಗೆ ಎಂತ ಆವುಟ್ಟುತ ತಿಳಿಯಕೆ ಡಾಕ್ಟ್ರೆ ಬೇಕಾ" ತೇಳಿ ನಗಾಡ್ತ್ "ಎಲ್ಲಾ ವಳ್ಳ ಸುದ್ದಿನೆ ನೀನ್ ಅಪ್ಪ ಆಗ್ತಾ ವಳಾ, ನಾನ್ ಇಷ್ಟ್ ದಿನ ಬೇಡ್ತಾ ಇದ್ದದ್‌ನ ದೇವ್ರು ಕೊಟ್ಟು ಬುಡ್ತ್.

ಮಹೇಶನ ಮುಕಲಿ ನಗೆ ತುಂಬಿತ್. ಅವ್ಳ ನಾಡಿ ಹಿಡ್ದ್ ನೋಡ್ತ್ ಅಮ್ಮನ ಊಹೆ ನಿಜ ಆಗಿತ್ತ್.

"ಅಂತು ನೀನ್ ಯಾವ ಡಾಕ್ಟ್ರಗೂ ಕಮ್ಮಿ ಇಲ್ಲೆಮ್ಮ" ಮಹೇಶ ನಗಾಡ್‌ತ್.

"ಅಯ್ಯೋ ಬುಡ್ ಇದ್ನೆಲ್ಲಾ ಡಾಕ್ಟ್ರೇ ಹೇಳೊಕಾ. ಅನುಭವ ಇಲ್ಲದವ್ಕೆ ಆದರೆ ಸರಿ, ಆದರೂ ನಾಳೆ ಒಮ್ಮೆ ಕರ್ಕೊಂಡೋಗಿ ಸರಿಯಾಗಿ ಟೆಸ್ಟ್ ಮಾಡ್ಸಿಸಿ ಅವ್ಳಿಗೆ ಎಂತೆಲ್ಲ ಕೊಡಕು ಅದ್ನೆಲ್ಲಾ ತಕಂಡ್ ಬಂದ್ ಕೊಡು"

"ಸರಿ ಅಮ್ಮ"

ಸೀತಮ್ಮ ವಳಗೆ ಹೋಕನ ಮಹೇಶ ಅವ್ಳ ಹಣೆಗೆ ಮೆಲ್ಲೆ ತನ್ನ ತುಟಿ ಒತ್ತಿತ್ತ್ ಅವ್ಳು ಕಣ್ಣ್‌ಬುಟ್ಟ್,

"ಓ ಈಗ ಬಂದ್ರ, ನಂಗೆ ಹಂಗೇ ಸ್ವಲ್ಪ ನಿದ್ದೆ ಹತ್ತಿಬುಟ್ಟಿತ್ತ್. ನೀವ್ ಬೆಳಗ್ಗೆ ಹೋದಮ್ಯಾಲೆ ನಂಗೆ ಸ್ವಲ್ಪ ಉಸಾರಿತ್ಲೆ" ತೇಳಿ ಏಳಿಕೆ ಹೊರ್ಟವಳ್ನ ಮಹೇಶ ಹಂಗೇ ಮಲ್ಗಿಸಿ

"ಏಳ್ಬಡ ನಂಗೆ ಎಲ್ಲಾ ಗೊತ್ತಾತ್, ನೀನ್ ಕಳ್ಳಿ ನಂಗೆ ಏನೂ ಹೇಳ್ತ್ಲೆ"

ನೀವೆಂತ ಡಾಕ್ಟ್ರಪ್ಪ, ಅದೆಲ್ಲ ನೀವೇ ತಿಳ್ಕಣಕು, ನಂಗೆ ನಾಚಿಕೆ ಆದೆ"

"ಸರಿ ಇನ್ನ್ ಮುಂದೆ ನಾನ್ ಹೇಳ್ದಂಗೆ ಕೇಳಕು, ಇಷ್ಟರವರೆಗೆ ನೀನ್ ನನ್ನ ನೋಡ್ಕಂಬತಿದ್ದ.

ಇನ್ನ್ ನಾನ್ ನಿಂಗೆ ಟ್ರೀಟ್‌ಮೆಂಟ್ ಕೊಡ್ದು"

"ಅಯ್ಯೋ, ನಂಗೇನಾಗುಟ್ಟು ಟ್ರೀಟ್ ಮೆಂಟ್ ಕೊಡ್ವಂತದ್ದ್"

"ಏನಾವ್ಟು ಹೇಳೊಕ, ಅಯ್ಯೊ ಪೆದ್ದಿ, ಬಾಹೇಳ್ನೆ"ತ ಅವ್ನ ಕಿವಿಲಿ ಪಿಸುಗುಟ್ಟಿತ್ತ್ ಭಾಗ್ಯ ನಾಚಿಕೆಲಿ ಕೆಂಪಾತ್. ಒಮ್ಮೆ ಗಾಬರಿ ಆದರೆ ಮತ್ತೊಮ್ಮೆ ತಾನ್ ಅಮ್ಮ ಆದನೆತ ಗ್ಯಾನ ಮಾಡಿ ಕುಶಿ ಆತ್.

ಪ್ರಕಾಶ ಬಾಕೆ ಇನ್ನ್ ನಾಕೇ ದಿನ ಉಳ್ದಿತ್ ಸೀತಮ್ಮ ಸಂಭ್ರಮಲಿ ಮಂಜಗೆ ತಿಂಡಿ ಮಾಡಿಕೆ ಶುರು ಮಾಡಿದ್ದೊ.

ಸೋಮಯ್ಯನವ್ಕೆ ಅಂತು ನಾಲ್ಕುದಿನ ನಾಲ್ಕು ಯುಗನಂಗೆ ಆಗಿ ಅತ್ತಇತ್ತ ಕಾಲ್ ಸುಟ್ಟ ಬೆಕ್ಕ್‌ನಂಗೆ ಓಡಾಡ್ತ್ತಿದ್ದೊ, ಇಬ್ಬರಿಗೂ ಅವ್ರ ಬಿ.ಪಿ., ಶುಗರ್, ಕಾಲ್‌ಬ್ಯಾನೆ ಎಲ್ಲಾ ಮರ್ತ್ ಹೋಗಿತ್ತ್.

ಮಹೇಶ ಭಾಗ್ಯನೊಟ್ಟಿಗೆ ತಮ್ಮನ ಗುಣಗಾನ ಮಾಡಿಕೆ ಶುರುಮಾಡಿತ್ತ್.ಅವ್ನ ಸಣ್ಣ ವಯ್ಸ್‌ನ ಚೇಷ್ಟೆಗಳ್ನ ಕೇಳಿ ಹೊಟ್ಟೆ ತುಂಬಾ ನಗಾಡ್ತಿತ್.

"ಭಾಗ್ಯ ಏರ್‌ಪೋರ್ಟಿಗೆ ನೀನ್ ಬಂದಿಯಾ ಅಲ್ಲ? ಟ್ರಿಮ್ ಆಗಿ ನಿನ್ನ ಮೆರೂನ್ ಕಲರ್ ಸಿಲ್ಕ್ ಸೀರೆ ಉಟ್ಟುಕ ಅದ್ರಲ್ಲಿ ನೀನ್ ಸೂಪರ್ ಆಗಿ ಕಂಡಿಯಾ, ನೋಡ್ತಿದ್ದಂಗೆ ಪ್ರಕಾಶನನ್ನ ಸೆಲೆಕ್ಷನ್ ನೋಡಿ ಮೂಗ್‌ನ ಮ್ಯಾಲೆ ಬೆರಳ್‌ಮಡ್ಗಿ ನನ್ನ ಬೆನ್ನ್‌ನ ಚಪ್ಪರಿಸಕು" ತೇಳ್ಕನ ಭಾಗ್ಯಂಗೆ ನಗೆ ಬಾತ್.

"ಅಲ್ಲ ಅವರ್ನ ವೆಲ್‌ಕಮ್ ಮಾಡಿಕೆ ಅಷ್ಟೊಂದ್ ಭಾರಿ ಸೀರೆ ಯಾಕೆ? ಸಿಂಪಲಾಗಿದ್ದರೆ ನಾನ್ ಅವ್ರ ಕಣ್ಣಿಗೆ ಕಾಂಬಲೆನಾ"

"ಹೂಂ ಹುಂ ಪ್ಲೀಸ್ ಭಾಗ್ಯ ......." ಎಂದು ಮಹೇಶ ಮುಕನ ಚಪ್ಪೆ ಮಾಡ್ಕನ ಭಾಗ್ಯ ಓಕೆ ಡಾಕ್ಟರ್" ತೇಳ್ತ್.

ಮಹೇಶ, ಭಾಗ್ಯ, ಸೋಮಯ್ಯ, ಸೀತಮ್ಮ ಎಲ್ಲವೂ ಕಾರ್ ಹತ್ತಿಕುದ್ದೊ ವಿಮಾನ ಬಾಕೆ ಮುಂದೆ ಹೋರ್ಟಿದ್ದೊ.

ಎಲ್ಲವೂ ಮಾತಾಡದೇ ತಮ್ಮದೇ ಲೋಕಲಿ ಮುಳ್ಗಿ ಹೋಗಿದ್ದೊ ಕಾರು ಸರಾಗವಾಗಿ ಓಡ್ತ್ತಿತ್ತ್. ಹಂಗೆ ಎಲ್ಲರ ಮನ್ಸೂ ಒಂದೊಂದು ದಿಕ್ಕ್‌ಲಿ ಓಡ್ತ್ತಿತ್ತ್.

"ಸ್ವಲ್ಪ ಮೆಲ್ಲೆ ಓಡ್ಸಪ್ಪ, ಭಾಗ್ಯಂಗೆ ತೊಂದರೆ ಆದು" ಸೀತಮ್ಮ ಎಚ್ಚರಿಸಿದೊ, ಮಹೇಶ ಭಾಗ್ಯಂಗೆ ನಗೆ ಬಾತ್, ಮಹೇಶ ಸ್ಪೀಡ್ ಸ್ವಲ್ಪ ಕಮ್ಮಿ ಮಾಡ್ತ್. ಏರ್‌ಪೋರ್ಟಿಗೆ ತಲ್ಪಿ ಕಾರ್ ಪಾಕಿಂಗ್ ಮಾಡಿ ಕಾರ್ ಒಳಗೇ ಕುದ್ದೊ ವಿಮಾನ ಬಾಕೆ ಇನ್ನು ಸ್ವಲ್ಪ ಹೊತ್ತ್ ಇತ್ತ್.

ಅಂತು ಇಂತು ಕಾದ ಕ್ಷಣ ಬಂದೇ ಬುಡ್ತ್. ವಿಮಾನ ದೂರಲಿ ಬಾದು ಕಾಂಬಕನೆ ಎಲ್ಲವ್ಕೂ ಬಾಳ ಕುಶಿ ಆತ್.

ಮಹೇಶ ಒಬ್ಬನೇ ಒಳಗೆ ಹೋತ್.

ಪ್ರಕಾಶ ಇಳ್ದ್ ಬಾಕನ ಮಹೇಶ ಒಂದೇ ಉಸುರಿಗೆ ಓಡಿ ಅವನ ಕೈ ಹಿಡ್ಕಂಡತ್ ಪ್ರಕಾಶ ಅಣ್ಣನ ಕಾಲು ಹಿಡ್ದು ನಮಸ್ಕಾರ ಮಾಡಿ, ಅವನ ತಬ್ಬಿಕಣ್ತ್, ಆ ಒಂದು ಅಪ್ಪುಗೆಲಿ ದೀರ್ಘಕಾಲದ ಅಗಲಿಕೆನ ಬ್ಯಾನೆ ಇತ್ತ್.

ಮಹೇಶ ಪ್ರಕಾಶನ ಕಾರ್‌ಹತ್ರ ಕರ್ಕಂಡ್ ಬಾತ್.

ಪ್ರಕಾಶ ಅಪ್ಪನ ಹತ್ರ ಬಂದ್ ಕಾಲ್ ಹಿಡ್ದ್" ಉಸಾರ್ ವಳರಿಯಾ? ಅಪ್ಪಾ"ಂತ ಕೇಳ್ಕನ ಸೋಮಯ್ಯನವ್ರ ಕಣ್ಣ್‌ಂದ ಆನಂದದ ಕಣ್ಣೀರ್ ಬಾತ್.

ಸೀತಮ್ಮನ ಕಾಲ್ ಹಿಡ್ದ್ ಅಮ್ಮನ ತಬ್ಬಿಕಣ್ತ್. ಸೀತಮ್ಮಂಗೆ ಕುಶಿಲಿ ಮಾತೇ ಬಾತ್‌ಲೆ ಸುಮ್ಮನೆ ಅಂವನ ತಲೆ ನೇವರಿಸಿತ್. ಕಣ್ಣ್‌ಂದ ಎರ್ಡ್ ಹನಿ ನೀರ್ ಬಾತ್.

ಭಾಗ್ಯ  ಕಾರ್‌ಲೇ ಕುದ್ದಿತ್, ಅವ್ಳಿಗೆ ಏನೋ ಒಂತರ ಸಂಕೋಚ.  ಮಹೇಶ

"ಬಾ ಅತ್ತಿಗೆನ ಪರ್ಚಯ  ಮಾಡ್ಸನೆ" ತ ಕರ್ಕೊಂಡ್ ಹೋತ್

"ಭಾಗ್ಯ ನೋಡ್ ಇವ್ನೆ ನನ್ನ ಪೆಟ್ ಬ್ರದರ್ ಪ್ರಕಾಶ"

ಭಾಗ್ಯ ನಮಸ್ತೆತ ಹೇಳಿ ತಲೆ ಎತ್ತ್‌ಕನ ಬೆಚ್ಚಿ ಬೀತ್ ಕಣ್ಣ್ ಕತ್ತಲೆ ಆಗಿ ಮಹೇಶನ ಕಡೆಗೆ ವಾಲಿತ್.

"ಹಿಡ್ಕಪ್ಪ, ಮಹೇಶ ನೋಡು ಭಾಗ್ಯ ಒಂತರಾ ಮಾಡ್ತಾ ಉಟ್ಟು"

ತೇಳಿ ಕಿರ್ಚಿದೊ ಸೀತಮ್ಮ ಮಹೇಶ ಅವಳ್ನ ಕಾರ್‌ಲಿ ಮಲ್ಗಿಸಿತ್.

"ಭಾಗ್ಯ ......ತೇಳಿ ಮನ್ಸ್‌ಲೇ ಜೋರಾಗಿ ಕಿರ್ಚಿಕಂಡ್‌ತ್ ಪ್ರಕಾಶ. ಅವನ ಮುಕ ಕಪ್ಪು ಹಿಡ್ದ್ ಹೋತ್ .

ತಾನ್ ಯಾರಿಗಾಗಿ ಫಾರಿನ್‌ಂದ ಆತುರಲಿ ಹಾರಿ ಬಂದೊಳೆನೊ ಆ ವಸ್ತು ಈಗ ತನ್ನ ಅತ್ತಿಗೆ ರೂಪಲಿ !!

"ಭಾಗ್ಯ ನಂಗೆಂತಾ ಮೋಸ ಮಾಡ್ತ್. ಇವ್ಳಿಗಾಗಿ ನಾನ್ ಅಂಗ್ಲೈಲಿ ಇದ್ದ ಸುಖಗಳ್ನೆಲ್ಲಾ

ತಳ್ಳಿ ಕನ್ಸ್ ಹೆಣ್‌ದಿದ್ದೆ, ಆದರೆ ಆ ಕನ್ಸ್‌ಗಳೆಲ್ಲಾ ಕನ್ಸಾಗೇ ಉಳ್ಸಿ ಬುಟ್ಟಲ್ಲ

ಛೆ ! ಎಂತ ಮೋಸಮಾಡಿ ಬುಡ್ತ್. ಹೆಣ್ಣ್ ಜಾತಿನೇ ನಂಬಿಕಾದ್ ನಾಕ್ ವರ್ಷಂದ ಒಟ್ಟಿಗೆ ತಿರ್‌ಗಾಡ್ತಿದ್ದ ನನ್ನ ಇವ್ಳು ಅರ್ಥ ಮಾಡಿಕಂಡದ್ ಇಷ್ಟೆನಾ? ಅಯ್ಯೋ...... ಮುಂದೆ ಏನ್ ಮಾಡ್ದು?

ಅಂವಂಗೆ ಮುಂದೆ ಗ್ಯಾನ ಮಾಡಿಕೆ ಆತ್‌ಲೆ

"ಯಾಕಪ್ಪ ಪ್ರಕಾಶ ಮುಕ ಎಲ್ಲಾ ಒಂದು ತರಾ ಉಟ್ಟು, ಎಂತಾತಪ್ಪ ?"

ಆಂ! ಓ....ಎಂತ ಇಲ್ಲೆ ಅಮ್ಮ, ಪ್ರಯಾಣದ ಸುಸ್ತು ಇರಕು" ತೇಳ್ತ್ ಬಾರದ ನಗೆ ಬರ್ಸಿಕಂಡ್

"ಇನ್ನ್ ಮನೆಗೆ ಹೋಗ್ತಾ ಹಂಗೇ ಮಾತಾಡನಾ ಬನ್ನಿಪೋಯಿ"

ಭಾಗ್ಯ ಸೀತಮ್ಮನ ತೊಡೆ ಮ್ಯಾಲೆ ತಲೆ ಮಡ್ಕಂಡ್ ಮಲ್ಗಿತ್ತ್. ಅವ್ಳಿಗೆ ಎಚ್ಚರ ಆಗಿದ್ದರೂ  ಕಣ್ಣ ಬುಡಿಕೆ ಹೆದ್ರಿಕೆ ಕಣ್ಣ್‌ಂದ ನೀರ್ ಇಳ್ತ್.

"ಯಾಕೆ ಭಾಗ್ಯ ಎಂತ ಆಗ್ತಾ ಉಟ್ಟು" ಯಾರು ಕೇಳ್ದರೂ ಅವ್ಳಿಂದ ಉತ್ತರ ಬಾತ್‌ಲೆ.

ಯಾರ್‍ನ ತನ್ನ ಬಾಳ್‌ಲಿ ಮತ್ತೆ ನೋಡ್ದು ಬ್ಯಾಡತ ಗ್ಯಾನ ಮಾಡಿತ್ತೊ. ಇಂದ್ ಅಂವನೇ ತನ್ನ ಮೈದುನನ ರೂಪಲಿ ವಿಧಿ ಮತ್ತೆ ಅಂವನ ಇವ್ಳ ಹತ್ರ ಕಳ್ಸಿತ್ತ್. ಹೆಸರ್‌ಂದಾದ ಪ್ರಮಾದ ಅವಳ್ನ ಅಂವಂದ ವಂಚಿಸಿತ್ತ್. ಸುತ್ತಿ ಬಳ್ಸಿ ಅವನ ಮನೆಗೇ ಕರ್ದ್‌ಕಂಡ್ ಬಂದಿತ್ತ್ ವಿಧಿ.

ಭಾಗ್ಯನ ಸೂರ್ಯ ಇವನೇ ಆಗಿತ್ತ್. ಸೂರ್ಯ ಪ್ರಕಾಶ್" ಕಾಲೇಜ್‌ಲಿ ಎಲ್ಲವೂ ಸೂರ್ಯನ ಕರ್ದರೆ ಮನೆಲಿ ಇಂವ ಪ್ರಕಾಶ ಆಗಿತ್ತ್.

ಪ್ರಕಾಶ ತನ್ನ ಯೋಚನೆಲೇ ಮುಳ್ಗಿತ್ತ್. ಮನೆಗೆ ಬಂದಂಗೆ ಮನೆಯವುಕೆ ತಿಳ್ಸಿ ಭಾಗ್ಯನ ತನ್ನ ಮನಮನೆ ತುಂಬಿಸಿಕೊಳ್ಳಕುತ ಇದ್ದಂವಂಗೆ ವಿಮಾನಂದ ಇಳ್ದ್ ಬರ್‍ತಿದಂಗೆ ಶಾಕ್ ಆಗಿತ್ತ್. ತನ್ನ ಮದ್ವೆ ಬಗ್ಗೆ ಹೆಣ್‌ದಿದ್ದ ಆಶಾ ಗೋಪುರ ಪುಡಿಪುಡಿ ಆಗಿತ್ತ್.

ಅವ್ಳು ಮದ್ವೆಯಾಗಿ ಬ್ಯಾರೆ ಕಡೆ ಹೋಗಿದ್ದರೂ ಸಹಿಸಿಕಂಬತ್ತಿತ್ತೇನೋ! ಆದರೆ ಈಗ ತನ್ನ ಅತ್ತಿಗೆನ ಸ್ಥಾನಲಿ ನಿತ್ತುಟ್ಟು.

ತನ್ನ ಕಾಲ್ ಬುಡಲಿ ಇದ್ದ ಪ್ಯಾಕೆಟ್ಟ್‌ಗಳ ಕಡೆ ಅಂವನ ದೃಷ್ಟಿ ಹೋತ್ ಒಂದು ತನ್ನ ಅತ್ತಿಗೆಗೆ! ಒಂದು ತನ್ನ ಭಾಗ್ಯಂಗೆ! ತಂದಿದ್ದ ಉಡುಗೊರೆಗ.

ಮತ್ತೊಮ್ಮೆ ಅವನ ಮನ್ಸ್ ಅಂವನ ಅಣ್‌ಕಿಸಿತ್. ನಿನ್ನ ಹೆಸರ್‌ನ ಬಗ್ಗೆ ನಿಂಗೆ ಬಾಳ ಅಭಿಮಾನ ಇತ್ತಲ್ಲ, ಆದರೆ ಆ ಹೆಸರೇ ನಿಂಗೆ ಈ ಗತಿ ತಂದುಟ್ಟು ಅಂವ ಯಾಗೊಳು ಸೂರ್ಯತ ಕರ್ಸಿಕಂಬಕೇ ಇಷ್ಟ ಪಡ್ತಿತ್ತ್ ತನ್ನ ಪೂರ್ತಿ ಹೆಸ್ರ್‌ನ ಯಾರಿಗೂ

ಹೇಳಿತ್‌ಲೆ. 'ನೀನ್ ಹೋದ ಮ್ಯಾಲೆ ಅವಳೊಟ್ಟಿಗೆ ಯಾವುದೇ ಸಂಪರ್ಕ ಇಟ್ಕಂಡತ್‌ಲೆ ಫಾರಿನ್‌ಗೆ ಹೋದವನೊಬ್ಬನ ನೆಚ್ಚಿಕಂಡ್ ಕೂರಿಗೆ ಅವ್ಳಿಗೆ ಹೇಳವು ಕೇಳವು ಯಾರೂ ಇಲ್ಲೆತ ತಿಳ್ಕಂಡಿದ್ದಾ?'

ತನ್ನ ತಲೆ ಕೆಟ್ಟೇ ಹೋದೆ ತಲೆ ಸಿಡ್ದ್ ಹೋದಂಗೆ ಆದೆತ ಅಂವ ಸೀಟಿಗೊರ್‍ಗಿ ಕಣ್ಣ್ ಮುಚ್ಚಿತ್ತ್ ಮುಚ್ಚಿದ ಕಣ್ಣ್‌ಗಳ ಮುಂದೆ ತಮ್ಮ ಕಾಲೇಜ್ ದಿನಗ, ಒಟ್ಟಿಗೆ ಕಾಲ ಕಳ್ದ ಸವಿ ನೆನಪುಗ ಹಾದು ಹೋದೊ.

ಭಾಗ್ಯನ ಮುಕಲಿ ಮುಂದೆನ ಕಾಂತಿಯಾಗಲಿ, ಮುಂದೆನ ಲವಲವಿಕೆ ಯಾಗಲೀ ಇತ್ತ್‌ಲೆ.

ಅವ್ಳ ಮನೆಲಿ ಪ್ರಕಾಶನ ಕಣ್ಣ್ ತಪ್ಪಿ ಓಡಾಡ್ತಿತ್ತ್.

ಅವ್ಳ ಆರೋಗ್ಯ ಸ ಕೆಲವು ಸಲ ಹದಗೆಡ್‌ತಿತ್ತ್. ಗಂಟೆಗಟ್ಟಲೆ ಎಂತೋ ಗ್ಯಾನ ಮಾಡಿಕಂಡ್ ಕುದ್ದಿರ್‌ತಿದ್ದ ಭಾಗ್ಯ ಮಹೇಶಂಗೆ ಒಂದು ಸಮಸ್ಯೆ ಆತ್. ಅವನ ಒದ್ದಾಟ ಕಂಡ್ ಭಾಗ್ಯಂಗೆ" ಅಯ್ಯೋ ಅನ್ನಿಸ್‌ತಿತ್ತ್.

ಸೀತಮ್ಮ ತಮ್ಮ ಸೊಸೆನ ಈ ಅವಸ್ಥೆ ನೋಡಿ ಮರುಗುತ್ತಿದ್ದೊ" ಅಪ್ಪ ಅಮ್ಮನ ನೆನ್ನಿಕಂಡ್ ಹಿಂಗೆ ಉಟ್ಟು, ಪಾಪ ಬಸುರಿ ಹೆಣ್ಣ್ ಮಕ್ಕಳಿಗೆ ತವರು ಮನೆ ಸ್ವರ್ಗ ಇದ್ದಂಗೆ ಅಮ್ಮನ ಮಡಿಲ್‌ಲಿ ಅವು ತಮ್ಮ ಬ್ಯಾನೆನ ಮರ್ತವೆ. ವಳ್ಳ ಸಮೆಲಿ ಅಮ್ಮನ ಕಳ್‌ಕಂಣ್ತ್ ಪಾಪ" ತೇಳಿ ಸಮಧಾನ ಮಾಡ್ತಿದ್ದೊ.

ಪ್ರಕಾಶಂಗೆ ಮನೆಲಿ ಇರ್ದೇ ಬ್ಯಾಡ ಅನ್ಸ್‌ತಿತ್ತ್, ಆದರೆ ಅಪ್ಪ ಅಮ್ಮ ಅಣ್ಣಂಗಾಗಿ ಎಂತದೂ ತೋರ್‍ಸಿಕಣದೆ ಕುಶಿಲಿ ಇದ್ದಂಗೆ ಇರ್‍ತಿತ್ತ್.

ಬ್ಯಾಗ ಎಲ್ಲಾರ ದೂರ ಕೆಲ್ಸ ಸಿಕ್ಕಿ ಹೋಗಿ ಬುಟ್ರೆ ಸಾಕ್‌ತ ಆಗಿ ಬುಟ್ಟಿತ್ತ್. ಎಷ್ಟೋ ಸಲ ಭಾಗ್ಯನೊಟ್ಟಿಗೆ ಮಾತಾಡಕುತ ಗ್ಯಾನ ಮಾಡ್ತಿತ್. ಆದರೆ ಅಂತ ಸಮಯ ಸಿಕ್ಕಿತ್‌ಲೆ. ಮನೆಲಿ ಯಾರೂ ಇಲ್ಲದಿರ್ಕನ ಅವ್ಳ ರೂಮ್‌ಂದ ಹೊರಗೇ ಬಾತಿತ್ತ್‌ಲೆ.

ಅವ್ಳ ಮುಕ ಕಾಂಬಕನ ಪ್ರಕಾಂಶಗೂ 'ಅಯ್ಯೋ ಪಾಪ' ತ ಅನ್ಸ್‌ತಿತ್ತ್.

ತಾನ್ ಬಾಕೆ ಮುಂದೆ ಸುಖಲಿ ಇತ್ತ್. ಈ ರೀತಿ ಆಗುಟ್ಟುತ ಗೊತ್ತಾಗಿದ್ದರೆ ತಾನ್ ವಾಪಾಸ್ ಬಾದೇ ಬ್ಯಾಡಾಗಿತ್ತ್. ಇನ್ನ್ ಹೆಂಗಾರ ಒಂದ್ ಚಾಕಾರಿ ಹಿಡ್ದ್ ಹೋಗಿ ಬಿಡಕುತ ಅವನ ಮನ್ಸ್ ಗ್ಯಾನ ಮಾಡ್ತಿತ್ತ್.

ಫಾರಿನ್‌ಲಿ ಎಂ.ಎಸ್ ಮಾಡಿ ಬಂದಿದ್ದ ಅವಂಗೆ ಕೆಲ್ಸ ಸಿಕ್ಕುದು ಕಷ್ಟ ಆತ್ತ್‌ಲೆ ಮೈಸೂರ್‌ಲೇ ಇಂಜಿನಿಯರಿಂಗ್ ಕಾಲೇಜ್‌ಲಿ ಲೆಕ್ಚರರ್ ಕೆಲ್ಸ ಸಿಕ್ಕಿತ್.

ಬೆಂಗ್ಳೂರಿಗೆ ಹೋಕೆ ಇಷ್ಟ ಇದ್ದರೂ ಅಪ್ಪ ಅಮ್ಮನ ಹಟಂದಾಗಿ ಹತ್ತ್‌ರಲೇ ಕೆಲ್ಸಕ್ಕೆ ಸೇರಿಕಣ್ತ್ ಇಷ್ಟ್ ವರ್ಷ ಬುಟ್ಟ್ ಇದ್ದವ್ಕೆ ಮತ್ತೆ ಅವನ ದೂರ ಕಳ್ಸಿಕೆ ಇಷ್ಟ ಇತ್ತ್‌ಲೆ.

ದಿನಾಲೂ ಬೈಕ್‌ಲಿ, ಇಲ್ಲರೆ ಕಾರ್‌ಲಿ ಕಾಲೇಜಿಗೆ ಹೋಗಿ ಬಾತಿತ್ತ್.

ಈಗ ಸೋಮಯ್ಯ ಮತ್ತೆ ಸೀತಮ್ಮನವು ಬಾಳಾ ಕುಶಿಲಿ ಇದ್ದೊ. ತಮ್ಮ ಕಣ್ಣ್ ಮುಂದೆ ದೊಡ್ಡ ದೊಡ್ಡ ಚಾಕ್ರಿಗಳ್‌ಲಿ ಇಬ್ಬರು ಮಕ್ಕ ಮುತ್ತ್‌ನಂಥ ಸೊಸೆ, ಬೇಕಾದ ಸಿರಿಸಂಪತ್ತ್, ಕಾರ್, ಬೈಕ್, ಬಂಗ್ಲೆ ಎಲ್ಲಕ್ಕಿಂತ ಜಾಸ್ತಿಯಾಗಿ ಮನಶಾಂತಿ, ನೆಮ್ಮದಿ, ಇದ್ದಿಂತ ಮನ್ಸಂಗೆ ಹೆಚ್ಚಿಗೆ ಎಂತತಾನೆ ಬೇಕ್?

ಪ್ರಕಾಂಶಂಗೆ ಹೆಣ್ಣ್ ಕೊಡಿಕೆ ನಾ ಮುಂದೆ ತಾ ಮುಂದೆಂತ ಗೂಡೆಗಳ ಅಪ್ಪ ಅಮ್ಮಂದ್ರ್ ಪ್ರತಿದಿನ ಹೇಳಿಕಳ್ಸ್‌ತಿದ್ದೊ. ಕೆಲವು ಗೂಡೆಗ ಸೀತಮ್ಮನವ್ಕೆ ಹಿಡ್ಸಿದ್ದೊ.

ಪ್ರಕಾಂಶನ ಕೇಳ್ದರೆ, "ಈ ವರ್ಷಮದ್ವೆ ಬ್ಯಾಡಮ್ಮ" ತ ಮಾತ್ರ ಹೇಳತ್ತ್ ಅದೂ ಸರಿ ಮುಂದೆನ ವರ್ಷ ನೋಡೊನೊತ ಸೀತಮ್ಮ ಸುಮ್ಮನಾಗಿದ್ದೊ.

ಅಡಿಗೆ ಕೆಲ್ಸದಂವ ತನ್ನ ಮಗ್ಳ ಮದ್ವೆಗೆತ ಹದಿನೈದ್ ದಿನ ರಜೆ ಬೇಕ್‌ತ ಕೇಳ್ಕನ ಎಲ್ಲವ್ಕೂ ಪೇಚಾಟ ಆಗಿತ್ತ್, ಬ್ಯಾರೆ ಅಡ್ಗೆಯವರ ಹುಡ್ಕಿಕೆ ಶುರು ಮಾಡ್ದೊ.

ಆದರೆ ಭಾಗ್ಯ ತಾನೇ ಅಡ್ಗೆ ಮಾಡ್ನೆತ ಒಪ್ಪಿಕಂಡ್ ಆಳ್‌ನ ಬೇಟೆನ ಕೊನೆಗಾಣ್ಸಿತ್. ಸೋಮಯ್ಯ, ಸೀತಮ್ಮಂಗೆ ಸೊಸೆ ಅಡ್ಗೆ ಮಾಡ್ದು ಇಷ್ಟ ಇಲ್ಲದಿದ್ರೂ ವಿಧಿಯಿಲ್ಲದೇ ಒಪ್ಪಿಕಂಡೊ.

ಸೋಮಯ್ಯನವು ಸರಕಾರದ ದೊಡ್ಡ ಚಾಕ್ರಿಲಿ ಇದ್ರಂದ ಸುರುಂದೇ ಮನೆಲಿ ಕೆಲ್ಸಕ್ಕೆ ಜನ ಇದ್ದೊ ಅದ್ರಂದ ಸೀತಮ್ಮನವ್ಕೆ ಕೆಲ್ಸ ಮಾಡ್ವ ರೂಢಿ ತಪ್ಪಿ ಹೋಗಿತ್ತ್.

ಭಾಗ್ಯಂಗೆ ಅಡ್ಗೆ ಮಾಡ್ಕೆ ಬರದಿದ್ದರೂ ಅದರ ವಿಧಾನ ಗೊತ್ತಿತ್ ಅಮ್ಮ ಇರ್ಕನ ಗೂಡೆಗ ಅಡ್ಗೆ ಕಲಿಯಕುತ ಹೇಳಿ ಅವಳ್ನ ಅಡ್ಗೆ ಮನೆಲಿ ಕೂರ್ಸಿಕಂಬತಿದ್ದೊ. ಹಂಗಾಗಿ ಎಲ್ಲಾ ನೋಡಿ ಕಂಬತಿತ್.

ಶುರು ದಿನ ಅವ್ಳ ಅಡ್ಗೆತಿಂದ್ ಎಲ್ಲವ್ಕೂ ತೃಪ್ತಿ ಆಗಿತ್ತ್. ಸೀತಮ್ಮನವು ಅಡ್ಗೆ ಮನೆಲಿ ಕುದ್ದ್ ಕಂಡ್ ಎಲ್ಲಾ ಹೇಳಿಕೊಟ್ಟಿದ್ದೊ.

"ಅಮ್ಮಾ, ಆ ಭಟ್ರು ಇನ್ನ್ ಪರ್ಮನೆಂಟಾಗಿ ಬಾರದಿದ್ರೂ ನಡ್ದದೆ, ನಮ್ಮ ಭಾಗ್ಯನ ಕೈ ಊಟ ಯಾಗೋಳೂ ಸಿಕ್ಕಿದೆ" ತ ಮಹೇಶ ಹೇಳ್ಕನ ಎಲ್ಲವೂ ನಗಾಡ್ದೊ.

ಈಗ ಅಡ್ಗೆ ಕೆಲ್ಸಂದಾಗಿ ಗ್ಯಾನ ಮಾಡಿಕೆ ಪುರುಷೊತ್ತು ಇಲ್ಲದ್ರಂದ ಭಾಗ್ಯ ಬಾಳ ಮಟ್ಟಿಗೆ ಗೆಲುವಾಗಿತ್ತ್, ಸೀತಮ್ಮ ಅವ್ಳಿಗೆ ಸಹಾಯ ಮಾಡ್ತಿದ್ದೊ. ಬಟ್ಟೆ ಒಗಿಯಕೆ ಮತ್ತೆ ಪಾತ್ರೆ ತೊಳ್ದು ಮನೆವರ್ಸಿಕೆ

ಒಂದ್ ಹೆಂಗಸ್ ಬರ್ತಿತ್ತ್, ಮಹೇಶ ಡ್ಯೂಟಿ ಮುಗ್ಸಿ ಬಂದ್ ಅಡ್ಗೆ ಮನೆಲೇ ಕುದ್ದ್‌ಕಂಬತಿತ್ತ್.

ಅಂದ್ ಆಸ್ಪತ್ರೆಗೆ ಬಂದ ಪೇಶಂಟ್‌ಗಳ ವಿಷಯ ಹಳ್ಳಿಂದ ಬಂದ ಜನ ಮಾತಾಡ್ವ

ರೀತಿನ ಹೇಳಿ ಭಾಗ್ಯನ ನಗಾಡ್ಸಿತ್. ಹಳ್ಳಿ ಹೆಂಗ್ಸರ ಮಾತ್ ಕೇಳಿ ಭಾಗ್ಯಂಗೆ ಬಾಳ ನಗೆ ಬಾತಿತ್.

"ಏನಮ್ಮ ನಿನ್ನ ವಯಸ್ಸೆಷ್ಟು?"

"ನನ್ ವಯ್ಸು ಏನೋ ಗೊತ್ತಿಲ್ರಿ, ಅದೇ ನಮ್ ಪಕ್ಕದ್ಮನೆ ಗೌರಿಗೂ ನಂಗೂ ಒಂದ್ ವರ್ಷ ಹೆಚ್ಚ್ ಕಮ್ಮಿರಿ ನೀವೇ ಲೆಕ್ಕ ಆಕಳಿ"

"ಮಕ್ಳೆಷ್ಟಮ್ಮಾ," ಎಲ್ಲಾ ದೊಡ್ಡೋರಾ?" ವಯಸ್‌ನ ಅಂದಾಜ್ ಮಾಡಿಕೆ ಕೇಳ್ದು.

"ಎಲ್ಲಾ ವಸ್ರದವು, ದೊಡ್ಮಗ ಹುಟ್ದಾಗ ನಮ್ಮೆಜಮಾನ್ರಿಗೆ ಜ್ವರ ಬಂದಿತ್. ಎರಡ್ನೆದು ಹುಟ್ದಾಗ ನನ್ ತಂಗಿ ಅವ್ಳ ಗಂಡ ಬಂದಿದ್ರು, ಮೂರ್ನೇದು ಹುಟ್ದವರ್ಷ ನಮ್ ಎಮ್ಮೆ ಕರುಹಾಕ್ತು. ಮತ್ತೆ ನಾಕೂ ಒಂದೊಂದು ವರ್ಷಕ್ಕೆ ಹುಟ್ದವು ಡಾಕ್ಟ್ರೆ ಕೊನೆದು ಹುಟ್ಟೋ ಹೊತ್ತಿಗೆ ಸರ್ರ್ಯಾಗಿ ಸೂರ್ಯ ಉಟ್ಟಿದ್ದ, ಅತ್ಲಾಗಿಂದ ಕೋಗ್ಲೆ ಕೂಗ್ತಿತ್ತ್ ಅದೇನೂ ಒಳ್ಳೆದಂತಾರೆ ಅದ್ಕೆ ಈಗ ಎರ್ಡು ವರ್ಷ"

"ಸದ್ಯ ಕೊನೆ ಮಗೂದಾದ್ರು ವಯ್ಸು ಗೊತ್ತಲ್ಲ" ಅದ್ಕನೋ ಆಪರೇಶನ್‌ಗೆ ಬಂದಿದ್ದು"

ಈ ಸಂಭಾಷಣೆನ ಕೇಳಿ ಭಾಗ್ಯ ಬಿದ್ದುಬಿದ್ದು ನಗಾಡ್ತ್ ಹಂಗೇ ಹಳ್ಳಿ ಹೆಂಗ್ಸರ ಮೂಢತನಕ್ಕಾಗಿ ಮರುಗಿತ್. ತನ್ನ ಮಕ್ಕಳ ವಯ್ಸ್ ಲೆಕ್ಕ ಇಡಿಕೆ ಬಾರದ ಅನಕ್ಷರಸ್ತರಿರುವ ನಮ್ಮ ದೇಶ ಹೆಂಗೆ ತಾನೆ ಅಭಿವೃದ್ಧಿ ಆದು?

ಭಾಗ್ಯ ಮಹೇಶನ ಉಪಚಾರದ ಮುಂದೆ ನಂಗೆ ಆಗಿತ್. ಆದರೆ ಮುಕಲಿ ಏನೋ ಬ್ಯಾನೆ ಕಾಂಬತಿತ್.

ಪ್ರಕಾಶ-ಭಾಗ್ಯ ಮಾತಾಡದೇ ಇಗ್ದುನ ಕಂಡ್ ಮಹೇಶ ನಗಾಡ್ತಿತ್, ಸೀತಮ್ಮ

"ಅವ್ನು ಅವ್ಳು ಸರಿ ವಳೊ ಇಬ್ಬರಿಗೂ ಮಾತಾಡಿಕೆ ಸಂಕೋಚ, ಬಂದ್ ಇಷ್ಟ್ ದಿನ ಆದರೂ ಇಬ್ಬರೂ ಮಾತಾಡ್ದುಕಂಡತ್‌ಲೆ"

"ನೀನ್ ಮಾತಾಡ್ರೆ ಅಂವ ನಿನ್ನ ಎಂತದೂ ಮಾಡ್ದುಲೆ, ಅಂವಂದು ಗುಡ್ ಬಿಹೇವಿಯರ್ ಗೊತ್ತಾ" ಮಹೇಶ ಹೇಳ್ತಿತ್.

ಆದರೆ, ಭಾಗ್ಯಂಗೆ ಒಳಗೊಳಗೆ ನಗೆ ಬಾತಿತ್. ನಮ್ಮಿಬ್ಬರ ವಿಷ್ಯ ಇವ್ಕೆ ಹೆಂಗೆ ತಿಳ್ದದೆ. ಇವ್ಕಿಂತ ಮೊದ್ಲೇ ಅವಂಗೆ ನನ್ನ ಗೊತ್ತುತ!

ಅಂದ್ ಪ್ರಕಾಶ ತಲೆಬೇನೆತೇಳಿ ರಜೆ ಹಾಕಿ ಮನೆಲೇ ಇತ್.

ಒಟ್ಟಿಗೆ ಸ್ವಲ್ಪ ಜ್ವರ ಸಹ ಇತ್. ಮಹೇಶ ಡ್ಯೂಟಿಗೆ ಹೋಕೆ ಮುಟ್ಟ ಅವನೊಟ್ಟಿಗೆ ಇದ್ದ್ ಅವಂಗೆ ಮಾತ್ರೆ ಕೊಟ್ಟು ಭಾಗ್ಯನ ಕರ್ದ್ ಹೇಳ್ತ್.

"ಅಮ್ಮ, ಇಂದ್ ಮನೆಲಿ ಇರ್ದುಲೆ, ನೀನೇ ಸ್ವಲ್ಪ ಪ್ರಕಾಶನ ನೋಡಿಕ, ಇಂದ್ ನಂಗೆ ಒಂದ್ ಅರ್ಜೆಂಟ್ ಕೇಸ್ ಉಟ್ಟು, ನಾನ್ ರಾತ್ರೀನೇ ಬಾದು ಮಧ್ಯಾಹ್ನ ಊಟಕ್ಕೆ

ಕಾಯ್ಬಡ" ತೇಳಿ ಹೊರ್ಟು ಹೋತ್.

ಅಂವ ಅತ್ತ ಹೋದ ಮ್ಯಾಲೆ ಸೀತಮ್ಮ ಸ್ವಲ್ಪ ದೂರಲಿ ಇದ್ದ ನೆಂಟರ ಮನೆಲಿ ಕೂಸ್‌ಗೆ ಹೆಸರ್ ಹಾಕ್ವ ಜಂಬರಕ್ಕೆ ಹೋದೊ. ಅವು ಅಲ್ಲಿಗೆ ಹೋದರೆ ಸಾಯಂಕಾಲ ಅಲ್ಲದೆ ಬಾದುಲೆತ ಎಲ್ಲವ್ಕೂ ಗೊತ್ತಿತ್ತ್.

ಸೋಮಯ್ಯನವು ಲೈಬ್ರರಿಗೆ ಹೋಗಿ ಬನ್ನೆ, ಪುಸ್ತಕ ಚೇಂಜ್ ಮಾಡಕು ಇಂದ್ ಕಡೇ ದಿನ ತೇಳಿ ಹೊರ್ಟೊ, ಅವು ಅಂತು ಪುಸ್ತಕ ಸಿಕ್ಕಿರೆ ಅದ್ರಲ್ಲಿ ಮುಳ್ಗಿ ಹೋಗ್‌ತಿದ್ದೊ.

ಭಾಗ್ಯಂಗೆ ಪ್ರಕಾಶನ ಉಪಚಾರ ಮಾಡದೆ ವಿಧಿ ಇತ್ತ್‌ಲೆ, ಸೀತಮ್ಮ ಹೋಕೆ ಮುಂದೆ ಎಲ್ಲಾ ಕೆಲ್ಸ ಮುಗ್ಸಿ ಹೋಗಿದ್ದೊ.

ಮಧ್ಯಾಹ್ನ ಆಕನ ಸ್ವಲ್ಪ ಗಂಜಿ ಮಾಡಿಕಂಡ್ ಹಾಲು ತಕಂಡ್ ಮಹೇಶ ಕೊಟ್ಟಿದ್ದ ಮಾತ್ರೆನ ತಕಂಡ್ ಹತ್ರ ಹೋಕನ ಅಷ್ಟ್ ದೂರಕ್ಕೆ ಅವನ ಮೈನ ಕಾವು ಬಡಿಯತಿತ್ತ್. ಭಾಗ್ಯಂಗೆ ಕನಿಕರ ಆತ್.

"ಪ್ರಕಾಶ್ .." ಮೆಲ್ಲೆಕರ್ತ್, ಹಂಗೆ ಕರಿಯಕನ ಅವ್ಳ ನಾಲಿಗೆನ ಯಾರೋ ಹಿಡ್ಕಂಡಂಗೆ ಆತ್.

ಮೆಲ್ಲೆ ಕಣ್ಣ್ ಬುಟ್ಟತ್ ಪ್ರಕಾಶ ಒಂದ್ ಕೈಲಿ ಪ್ಲೇಟ್ ಇನ್ನೊಂದ್ ಕೈಲಿ ಹಾಲು ಹಿಡ್ಡಿದ್ದ ಭಾಗ್ಯನ ನೋಡಿ ಅಲ್ಲೆ ಹತ್ರಲಿ ಇದ್ದ ಮೇಜಿನ ಕಡೆ ಕೈತೋರ್ಸಿ.

"ಅಲ್ಲಿ ಇಟ್ಟ್ ಬುಡು" ತೇಳ್ತ್.

ಭಾಗ್ಯ ತಂದಿದ್ದ ಗಂಜಿ, ಹಾಲು ಮತ್ತೆ ಮಾತ್ರನ ಮೇಜ್‌ಲಿ ಮಡ್ಗಿ ಸ್ವಲ್ಪ ಹೊತ್ತು ನಿತ್ತಿದ್ದ್ ಹೊರಗೆ ಬಾತ್ ಪ್ರಕಾಶ ಕಣ್ಣ್‌ಮುಚ್ಚಿ ಮಲ್ಗಿತ್ತ್.

ಭಾಗ್ಯ ಊಟ ಮಾಡಿ ಪಾತ್ರೆನೆಲ್ಲ ತೊಳ್ದ್ ಮಡ್ಗಿ ಪ್ಲೇಟ್‌ಗ್ಲಾಸ್ ತನ್ನೆತೇಳಿ ಪ್ರಕಾಶನ ರೂಮಿಗೆ ಹೋದವಳ್ಗೆ ಆಶ್ಚರ್ಯ ಆತ್. ತಾನ್ ಇಟ್ಟ್ ಬಂದಿದ್ದ ಊಟ, ಮಾತ್ರೆ ಹಂಗೇ ಇತ್ತ್.

"ಪ್ರಕಾಶ್, ಯಾಕೆ ಊಟ ಮಾಡ್ತ್‌ಲೆ, ಊಟ ಮಾಡದೆ ಮಾತ್ರೆ ತಕಣದೆ ಇದ್ದರೆ ಜ್ವರ ಹೆಂಗೆ ವಾಸಿ ಆದೆ" ಹಂಗೆ ಹೇಳಿ ಅವನ ಹೊದಿಕೆನ ತೆಗ್ತ್ ಅಂವ ಮುಕಕ್ಕೆಲ್ಲ ಮುಚ್ಚಿ ಮಲ್ಗಿತ್ತ್.

"ಬೇಡ ಭಾಗ್ಯ......... ಓಹ್ ಸಾರಿ ಅತ್ತಿಗೆ, ನಂಗ್ಯಾಕೆ ಮಾತ್ರೆ ಮದ್ದ್ ಎಲ್ಲ ನಾನ್ ಯಾರಿಗಾಗಿ ಬದ್ಕಕು" ತೇಳಿ ಅವ್ಳ ಮುಕನೇ ನೋಡ್ತ್.

ಅಂವ ಜ್ವರಲೂ ಅವನಾಡ್ದ ಮಾತ್‌ಂದ ಭಾಗ್ಯಂಗೆ ಬಾಳಾ ದುಕ್ಕ ಆತ್. ಕಣ್ಣ್‌ಂದ ನಾಕ್ ಹನಿ ನೀರ್ ಬಿತ್ತ್.

ಪ್ಲೀಸ್, ಪ್ರಕಾಶ್ ಖಂಡಿತ ಹಂಗೆ ಹೇಳಬ್ಯಾಡಿ, ದಯವಿಟ್ಟ್ ನನ್ನ ಕ್ಷಮ್ಸಿ ಬುಡಿ

ತೇಳಿ ಎಲ್ಲಾ ವಿಷ್ಯನೂ ಹೇಳ್ತ್.

ಪ್ರಕಾಶಂಗೆ ಆಶ್ಚರ್ಯ ಆತ್.

"ತಾನ್ ವನಿತಂಗೆ ಫೋನ್ ಮಾಡ್ನೆನಾ, ಖಂಡಿತ ಸುಳ್ಳು ಅವ್ಳ ಮುಕನೇ ನೋಡಿಕೆ ಹೇಸ್‌ತಿದ್ದಂವ ನಾನ್. ಅವ್ಳಿಗೆ ಫೋನ್ ಮಾಡ್ನೆನಾ ಅಯ್ಯೋ ಅದ್ನ ನಂಬಿಬುಟ್ರ" ನನ್ನ ಫೋನ್ ಹಾಳಾಗಿ ಬುಟ್ಟದ್ರಂದ ನಂಗೆ ಯಾರ ನಂಬರೂ ಇತ್ತ್‌ಲೆ.

"ಏನ್ ಮಾಡ್ದು ನಂಬೋ ಹಂಗೆ ಇತ್ತ್ ವಿಷ್ಯ" ನೀವ್ ಸಹ ಇಲ್ಲಿಂದ ಹೋದ ಮೇಲೆ ಒಂದ್ ಫೋನ್ ಸ ಮಾಡ್ತ್‌ಲೆ.

"ಪ್ರಕಾಶ್ ಒಂದ್ ವಿಷ್ಯ ಕೇಳ್ನೆ ಉತ್ತರ ಕೊಟ್ರೆನಾ

"ಹೂಂ.."

"ನೀವ್ಯಾಕೆ ವನಿತಾನ್ನ ಮದ್ವೆ ಆಕಾದ್?"

"ಅತ್ತಿಗೆ! ನೀವ್ ಈ ಮಾತ್‌ನ ಹೇಳ್ತಾ ಇರ್‍ದಾ? ನೀವ್ ಕೈಕೊಟ್ಟ

ದಿನವೇ ನನ್ನ ಮದ್ವೆ ಬಗ್ಗೆ ಕಟ್ಟಿದ್ದ ಆಶಾ ಗೋಪುರ ಕುಸ್‌ದ್ ಪುಡಿಪುಡಿ ಯಾತ್, ಇನ್ನ್ ಈ ಜನ್ಮಲಿ ನಾನ್ ಮದ್ವೆ ಆದುಲೆ"

"ಅಯ್ಯೋ ಖಂಡಿತ ಹಂಗೆ ಹೇಳ್ಬಡಿ ನಂಗಾಗಿ ಯಾದ್ರು ನೀವ್ ಯಾರ್‍ನಾರ ಮದ್ವೆ ಆಗಕು" ಮತ್ತೆ ನೀವ್ ನನ್ನ ಭಾಗ್ಯತ ಕರಿಯನಿ ಸಾಕ್ ಅತ್ತಿಗೆತೇಳ್ಬಡಿ"

"ಪ್ಲೀಸ್, ಈ ಬಗ್ಗೆ ನನ್ನ ತೀರ್ಮಾನನೇ ಕೊನೆದ್. ನೀವ್ ಇದ್ರ ಬಗ್ಗೆ ಯೋಚನೆ ಮಾಡ್ಬಡಿ ತೇಳಿ" ತಿರ್‍ಗಿ ಮಲ್ಗಿತ್.

ಭಾಗ್ಯ ಅಂವ ಮಾತ್ರೆ ತಿಂದ್ ಹಾಲು ಕುಡಿಯಕ್ಕೆ ಮುಟ್ಟ ಅಲ್ಲೇ ಇದ್ದ್ ಕಣ್ಣ ಉಜ್ಜಿಕಂಡ್ ವಳಗೆ ಹೋತು.

ಮೂರು ಗಂಟೆ ಹೊತ್ತಿಗೆ ಪ್ರಕಾಶನ ತಲೆಬ್ಯಾನೆ ಜ್ವರ ಕಮ್ಮಿಯಾಗಿತ್ತ್. ಎದ್ದ್ ಬಂದ್ ಹೊಟ್ಟೆ ಹಸ್ದದೆತ ಕೇಳಿ ಊಟ ಮಾಡ್ತ್.

ಈಗ ಭಾಗ್ಯ-ಪ್ರಕಾಶರ್ ಮುಂದೆಗಿಂತ ಸ್ವಲ್ಪ ಸುಧಾರಿಸಿದ್ದೊ. ತಮ್ಮ ವಿಷಯ ಬುಟ್ಟ್ ಬ್ಯಾರೆ ಲೋಕದ ವಿಷಯನ ಎಲ್ಲರೊಟ್ಟಿಗೆ ಬೆರ್‍ತ್ ಮಾತಾಡ್‌ತಿದ್ದೊ.

ಅಂದ್ ಮಹೇಶ ಬಾಕನೇ ಭಾಗ್ಯ... ಭಾಗ್ಯ...ಂತ ಕರ್‍ಕಂಡೇ ಬಾತ್ ಅಡ್ಗೆ ಮನೆಲಿ ಇದ್ದ ಭಾಗ್ಯ ಕೈ ವರ್‍ಸಿಕಂಡೇ ಹೊರಗೆ ಬಾತ್.

"ಭಾಗ್ಯ ನಾಳೆ ಮೋಹನ್ ಫ್ಯಾಮಿಲಿ ಬಂದವೆಂತೆ ಅವಂಗೆ ಕೋಲಾರಕ್ಕೆ ವರ್ಗ ಆಗುಟ್ಟಂತೆ ಅದ್ಕೆ ಹೋಕೆ ಮುಂದೆ ನೋಡಿಕಂಡ್ ಹೋಕೆ ಬರ್‍ತಾವಳೊ ಭಾಗ್ಯಂಗೆ ವಿಷ್ಯ ತಿಳ್ದ್ ಬಾಳಾ ಕುಶಿ ಆತ್.

"ಆದ್ರೆ, ಭಾಗ್ಯ ನಿನ್ನ ಹದಿನೈದ್ ದಿನ ಅವರೊಟ್ಟಿಗೆ ಕಳ್ಸಿ ಕೊಡಿತ ಕೇಳ್ಯೊಳೊ.

ನಂಗತು ನಿನ್ನ ಅಷ್ಟ್ ದಿನ ಬುಟ್ಟ್ ಇರಿಕೆ ಆದುಲೆ"

"ಆದರೆ ನನ್ನ ಕರ್‍ಕೊಂಡು ಹೋದವೆತ ಹೇಳಿವಳೊಲ್ಲ"

"ನೋಡು ಭಾಗ್ಯ ನೀನ್ ಬೇಕಾರೆ ನಾಕ್ ದಿನ ಮಾತ್ರ ಇದ್ದ ಬಾ"

"ನಿನ್ನ ಅದ್ಕಿಂತ ಜಾಸ್ತಿ ದಿನ ಬುಟ್ಟ್ ಇರ್‍ಕ ನಂಗೆ ಆದುಲೆ," ನಿಂಗೂ ಒಂದ್ ಚೇಂಜ್ ಆದಂಗೆ ಆದೆ, ನೀನ್ ಮಂಕಾಗಿರ್ದುನ ನಂಗೆ ನೋಡಿಕೆ ಆದುಲೆ"

"ಸರಿ ......" ತೇಳಿ ಭಾಗ್ಯ ಅಕ್ಕ ಭಾವಂಗೆ ತಿಂಡಿ ಮಾಡಿಕೆ ಅಡ್ಗೆ ಮನೆ ಸೇರ್‍ತ್.

ರಾತ್ರಿ ಊಟ ಮಾಡ್ಕನ ಮಹೇಶ ಈ ವಿಷ್ಯನ ಎಲ್ಲರ ಮುಂದೆ ಹೇಳ್ಕನ ಸೀತಮ್ಮ ಮತ್ತೆ ಸೋಮಯ್ಯನವು ಅದಕ್ಕೆ ಒಪ್ಪಿಗೆ ಕೊಟ್ಟೊ.

"ಹೌದು, ಭಾಗ್ಯನ ಸ್ಥಿತಿ ನೋಡ್ರೆ ಅವ್ಳು ಹೋಗಿ ಸ್ವಲ್ಪ ದಿನ ಇದ್ದ್ ಬಾದು ಒಳ್ಳೇದ್‌ತ ಕಂಡದೆ, ಬಸುರಿ ಗೂಡೆ ಕುಶಿಲಿ ಇರೋಕಾದ ಸಮಯಲಿ ಎಷ್ಟ್ ಮಂಕಾಗಿದ್ದದೆ"

ಭಾಗ್ಯಂಗೆ ಆಗಳೇ ತಾನ್ ಬೆಂಗ್ಳೂರು ಸೇರ್ದಂಗೆ ಕುಶಿ ಪಟ್ಟತ್

ಅವ್ಳಿಗೆ ಮನೆನ ಈಗ್‌ನ ವಾತಾವರಣಂದ ಬದಲಾವಣೆನ ಅವಶ್ಯಕತೆನೂ ಇತ್ತ್.

ಆದರೆ, ಪ್ರಕಾಶ ಈ ಮಾತ್ ಬಾಕನ ಒಮ್ಮೆ ತಲೆಯತ್ತಿ ಭಾಗ್ಯನತ್ತ ನೋಡಿ ಸುಮ್ಮನೆ ಅನ್ನದ ಅಗುಳುನೊಟ್ಟಿಗೆ ಆಡಿಕಂಡ್ ಕುದ್ದಕಣ್ತ್.

ಮಾರನೆ ದಿನ ರೈಲ್ವೆ ಸ್ಟೇಷನ್‌ಗೆ ಹೋಕೆ ಭಾಗ್ಯನ ಬಲವಂತ ಮಾಡ್ಕನ "ಬಿಡಪ್ಪ ಅವಳ್ನ ಎಷ್ಟೂತ ಸುತ್ತಿಸಿಯಾ ಪಾಪ ಅವ್ಳಿಗೆ ಸುಸ್ತು ಆದು" ತೇಳ್ತ್ ಸೀತಮ್ಮ.

ಮಹೇಶನ ಮುಕ ಚಪ್ಪೆ ಆಕನ "ಪರ್‍ವಾಗಿಲ್ಲೆ ಅತ್ತೆ ನಾನ್ ಹೋಗಿ ಬನ್ನೆ" ಭಾಗ್ಯ ಹೇಳ್ತ್.

"ಹೂಂ, ಇಬ್ಬರೂ ಸರಿಯಾಗೊಳ್ರಿ" ತೇಳ್ರೊ ಸೀತಮ್ಮ

ಜಯಶ್ರೀ-ಮೋಹನ್ ಇದ್ದ ನಾಕ್ ದಿನ ನಾಕ್ ನಿಮ್ಷದಂಗೆ ಕಳ್ದ್‌ಹೋತ್.

ಅವೆಲ್ಲಾ ಇರ್‍ಕನ ಎಲ್ಲವ್ಕೂ ಬಾಳ ಕುಶಿ ಆಗಿತ್ತ್. ಅಂಬೆಗಾಲ್ ಹಾಕ್‌ತಿದ್ದ ಅಕ್ಷಯ್ ಅಂತು ಪ್ರಕಾಶನ ಅಂಟಿಕೊಂಡ್ ಬುಟ್ಟಿತ್ತ್, ಸಾಯಂಕಾಲ ಬೈಕ್‌ಲಿ ಕೂರ್‍ಸಿಕಂಡ್ ಒಂದ್ ಸುತ್ತ್ ಹಾಕಿಸ್‌ತಿತ್ತ್ ಪ್ರಕಾಶ ಇದ್ರಂದ ಅಕ್ಷಯ್‌ಗೆ ಆ ಮಾವನೇ ಅಚ್ಚ್‌ಮೆಚ್ಚ್.

ಮೋಹನ್-ಜಯಶ್ರೀಯರ್ ಹೊರ್‍ಡ್‌ಕನ ಭಾಗ್ಯನ ಸಹ ಕರ್‍ಕೊಂಡ್ ಹೊರ್‍ಟೊ.

"ಬೇಗ ಬಂದ್ ಬುಡು ತೇಳಿ" ಮಹೇಶ ಅವ್ಳಿಗೆ ಮುತ್ತಿಟ್ಟ್ ಬೀಳ್ಕೊಟ್ಟತ್. ಸೋಮಯ್ಯ ಸೀತಮ್ಮನವು ಸಹ ಬೇಗ ಕಳ್ಸಿಕೊಡಿತ ಒತ್ತಿ ಹೇಳ್ರೊ ತಾನ್ ಇಲ್ಲದಿದ್ದರೆ ಸುಖವಾಗಿ ಇರ್ದನೋತ ಗ್ಯಾನ ಮಾಡಿ,"ಪ್ರಕಾಶ್, ನಾನು ಹೋಗಿ ಬನ್ನೆ" ತೇಳ್ತ್ ಭಾಗ್ಯ

ಪ್ರಕಾಶ ಒಮ್ಮೆ ಬಾಡ್ದ ಮುಕಲಿ ಅವಳ್ನ ನೋಡಿ

"ಸಾಧ್ಯವಾದಷ್ಟ್ ಬೇಗ ಬಂದ್ ಬುಡಿ" ತೇಳ್ತ್

ಭಾಗ್ಯಂಗೆ ಆಶ್ಚರ್ಯ ಆತ್. ಇವನ ಮನ್ಸೇ ಅರ್ಥ ಆದುಲೆ ಅಲ್ಲಪ್ಪಂತ ಗ್ಯಾನ ಮಾಡ್ಕನ,

"ಭಾಗ್ಯ ರೆಡೀನಾ ಲೇಟಾತ್" ಮೋಹನ್ ಹೇಳ್ತ್.

"ಬರುವ ದಿನ ಫೋನ್ ಮಾಡ್, ನಾನೇ ಬಂದ್ ಕರ್ಕಂಡ್ ಬನ್ನೆ" ಮೋಹನಂಗೆ ಮಹೇಶ ಹೇಳ್ತ್.

ಭಾಗ್ಯ ಇಲ್ಲದ ಮನೆ ಬಿಕೋ ತೇಳ್ತಿತ್ತ್. ಭಾಗ್ಯ ಇದ್ದರೆ ಮನೆಲಿ ವಿಶೇಷ ಲಕ್ಷಣ ಇರ್ತಿತ್ತ್. ಅದ್ಕೆ ಸೀತಮ್ಮ ಯಾಗೊಳೂ,

"ಭಾಗ್ಯ ನಮ್ಮ ಮನೆನ ಭಾಗ್ಯ ಲಕ್ಷ್ಮಿ"ತ ಎಲ್ಲರೊಟ್ಟಿಗೆ ಹೊಗಳ್‌ತಿತ್ತ್.

ಭಾಗ್ಯ ಹೋದ ಮ್ಯಾಲೆ ಮಹೇಶ ಅಂತು ಹಗ್‌ಲೆಲ್ಲಾ ಮನೆಗೇ ಬಾತಿತ್ತ್‌ಲೆ.

ಭಾಗ್ಯ ಹೋದ ಎರ್ಡ್ ದಿನಕೇ ಕಳ್ಸಿಕೊಡುತ ಮೋಹನಂಗೆ ಫೋನ್ ಮಾಡ್ತ್.

ಎಲ್ಲಕ್ಕಿಂತ ಹೆಚ್ಚಾಗಿ ಪ್ರಕಾಶ ಮಂಕಾಗಿರ್ತಿತ್ತ್. ಇದ್ರಂದ ಸೀತಮ್ಮಂಗೆ ಆಶ್ಚರ್ಯ ಆಗ್ತಿತ್ತ್.

"ಅವ್ಳು ಇರ್ಕನ ಮಾತೇ ಆಡದಂವ ಅವ್ಳು ಇಲ್ಲದಿರ್ಕನ ಕೇಳ್ತಾವಳಲ್ಲಾ" ಒಳ್ಳೆ ಅತ್ತಿಗೆ ಪ್ರೇಮ ಕಣೊ ನಿಂದ್" ಸೀತಮ್ಮ ನಗಾಡ್ತ್‌ತಿದ್ದೊ.

ಭಾಗ್ಯ ಎದುರಿಗಿದ್ದರೆ ಮಾತಾಡದಿದ್ದರೂ ಅವಂಗೆ ಒಂದು ರೀತಿಲಿ ಚೈತನ್ಯ ಇರ್ತಿತ್.

ಭಾಗ್ಯ ಹೋಗಿ ಒಂದ್ ವಾರ ಕಳ್ದ್ ಹೋಗಿತ್ತ್. ಎಲ್ಲವ್ಕೂ ಬೇಜಾರ ಆಗಿ ಹೋಗಿತ್ತ್. ಪ್ರಕಾಶನೇ ಅಣ್ಣಂಗೆ ಹೊಗಿ ಕರ್ಕಂಡ್ ಬಾಕೆ ಹೇಳಿತ್ತ್.

ಮಹಾಶಂಗೂ ರಜ ಇಲ್ಲದ್ರಂದ ಮತ್ತೆ ತುಂಬಾ ಕೇಸ್‌ಗ ಇದ್ರಂದ ಕೂಡಲೇ ಕಳ್ಸಿಕೊಡುತ ಮೋಹನಂಗೆ ಫೋನ್ ಮಾಡ್ತ್.

ಆದರೆ ತನಿಗೆ ರಜೆ ಇಲ್ಲದ ಕಾರಣ ಇನ್ನ್ ನಾಕ್‌ದಿನ ಕಳ್ದ್ ಕಳ್ಸಿಕೊಟ್ನತ ಮೋಹನ ಫೋನ್ ಮಾಡಿತ್ತ್.

ಅಂದ್ ಮೋಹನ್ ಫೋನ್ ಮಾಡಿ,

"ಸಾರಿ ಮಹೇಶ್ ನಂಗೆ ರಜೆ ಇಲ್ಲದ್ರಂದ ಟ್ರೈನ್‌ಲಿ ಭಾಗ್ಯನ ಕಳಸ್ತಾ ವಳೆ ಪ್ಲೀಸ್ ಏನ್ ಗ್ಯಾನ ಮಾಡ್ಬಡ ನಾಕ್ ದಿನ ಬುಟ್ಟ್ ಕಳ್ಸಿನೆ ಹೇಳ್ದರೆ ಭಾಗ್ಯ ಕೇಳ್ತಾ ಇಲ್ಲೆ, ಇಂದೇ ಹೊರ್ಟು ಬುಟ್ಟುಟ್ಟು" ಪ್ಲೀಸ್ ಅವಳ್ನ ಪಿಕ್ ಮಾಡಿಕ ಮಹೇಶ"

ಅಂತು ಎಲ್ಲವ್ಕೂ ಸಮಾಧಾನ ಆತ್.

ಮಹೇಶ ಆದರೆ ಆಗ್‌ಲಿತೇಳಿ ಇನ್ನೊಬ್ಬ ಡಾಕ್ಟರಿಗೆ ತನ್ನ ಕೇಸ್‌ನೆಲ್ಲಾ ಒಪ್ಸಿ ರಜಾ ಹಾಕಿ ಭಾಗ್ಯನ ಕರ್ಕಂಡ್ ಬಾಕೆ ರೈಲ್ವೆ ಸ್ಟೇಷನ್‌ಗೆ ಹೊರ್ಡಿಕೆ ರೆಡಿ ಆತ್. ಇನ್ನ್ ಎಂದೂ

ಅವಳ್ನ ಕಳ್ಲುವ ತಪ್ಪು ಮಾಡಿಕಾದ್ ತೇಳಿಕಣ್ತ್ ಮನ್ಸ್‌ಲೆ.

ಅಂದ್ ಬಾಳ ಹೊತ್ತ್‌ಂದ ಪೊರ್ಲಾಗಿ ಬಟ್ಟೆ ತೊಟ್ಟ್‌ಕಂಡ್ ಓಡ್‌ತಿದ್ದ ಗಡಿಯಾರಕ್ಕೆ ಶಾಪ ಹಾಕ್‌ತ ಕಾಲ ಹಾಕ್‌ತಿತ್.

ಭಾಗ್ಯ ನೋಡಿ ಆಶ್ಚರ್ಯ ಪಡಕು ತೇಳಿ ಮದ್ವೆಗೆ ಹೊಲ್ಸಿದ್ದ ಬೆಲೆ ಬಾಳ್ವ ಸೂಟ್ ಹಾಕಿಕಂಡ್ ಹೊರ್ಟಿತ್ತ್.

ಯಾವ ಜಂಬರಕ್ಕೂ ಹಾಕದೆ ಇದ್ದ ಸೂಟ್‌ನ ಇಂದ್ ಹಾಕಿದ್ ನೋಡಿ ಸೀತಮ್ಮಂಗೆ ಆಶ್ಚರ್ಯ ಆತ್.

ಇದ್ಯಾಕೋ ಈ ಸೂಟ್ ಇಂದ್' ತ ಕೇಳಿಕೆ ಬಾಯಿ ತೆರ್ದವು ಸುಮ್ಮನಾದೊ.

ಅವುಕೆ ಏನೋ ಒಂತರ ಬ್ಯಾನೆಯಾತ್ ಬಲ್ದ ಕಣ್ಣ್ ಅದ್‌ರ್‌ತ್.

ಪ್ರಕಾಶ ಇನ್ನೂ ಬಂದಿತ್ತ್‌ಲೆ. ಸೋಮಯ್ಯನವು ಲೈಬ್ರರಿಗೆ ಹೋಗಿದ್ದೊ. ಹೊರಟ್ ಆದ ಮ್ಯಾಲೆ ಮಹೇಶಂಗೆ ತಟ್ಟನೆ ಗ್ಯಾನ ಆತ್ ತನ್ನ ಕಾರ್ ಇಲ್ಲೆತ ಬೆಳಗ್ಗೆ ಕಾರಿಗೆ ಏನೋ ತೋಂದರೆ ಆದ್ರಂದ ವರ್ಕ್ ಶಾಪ್‌ಲಿ ಬುಟ್ಟ್ ಬಂದಿತ್ತ್. ನಾಳೆ ಕೊಟ್ನೆತ ಅಂವ ಹೇಳಿತ್ತ್. ಬೈಕ್ ತಕಂಡ್ ಪೋಯಿತೇಳ್ರೆ ಬೈಕ್‌ನ ಪ್ರಕಾಶ ತಕಂಡ್ ಹೋಗಿತ್ತ್.

ಟ್ರೈನ್ ಬಾಕೆ ಒಂದು ಗಂಟೆ ಮುಂದೆ ಟ್ಯಾಕ್ಸಿ ಮಾಡಿಕಂಡ್ ರೈಲ್ವೆ ಸ್ಟೇಷನ್‌ಗೆ ತಲ್ಪಿತ್. ಸಮಯ ಮೀರಿರೂ ರೈಲ್ ಬಾರದಿರ್ಕನ ಬ್ಯಾಜರ ಆಗಿ ಕಂಟ್ರೋಲ್ ರೂಮ್‌ಲಿ ವಿಚಾರಸ್‌ಕನ" ಇಂದ್ ಸ್ವಲ್ಪ ಲೇಟ್ ಈಗ ಬಂದ್ ಬುಟ್ಟದೆ" ತೇಳ್ದೊ ಮತ್ತೆ ಒಂದ್ ಗಂಟೆ ಕಾದರೂ ರೈಲ್ ಬಾರದಿರ್ಕನ ಮಹೇಶ ಗಾಬರಿಂದ ಮತ್ತೆ ಕಂಟ್ರೋಲ್ ರೂಮ್‌ಲಿ ವಿಚಾರ್ಸಿತ್.

"ಸಾರ್ರಿ, ಟ್ರೈನ್ ಹಳಿ ತಪ್ಪಿಟ್ಟೂತ ಈಗ ತಾನೆ ಸುದ್ದಿ ಬಂದುಟ್ಟು" ತ ತಿಳ್ಸಿದೊ, ಮತ್ತೆ ಒಂದೇ ಗಳಿಗೆಲಿ ಕಾಳ್ಗಿಚ್ಚುನಂತೆ ಈ ಸುದ್ದಿ ಹಬ್ಬಿತ್ ಮಹೇಶಂಗೆ ಆಕಾಶ ತಲೆ ಮ್ಯಾಲೆ ಬಿದ್ದಂಗಾತ್ ರೈಲ್ವೆ ಸ್ಟೇಷನ್‌ಲಿ ಜನರ ಕೀರಾಟ ಮರ್‍ಡಾಟ ತುಂಬಿ ಹೊಗಿತ್ತ್.

ಮಹೇಶ ಅಲ್ಲೇ ಇದ್ದ ಟ್ಯಾಕ್ಸಿಲಿ ಸೀದಾ ಪ್ರಕಾಶನ ಆಫೀಸಿಗೆ ಹೋಗಿ ಅವನ ಬೈಕ್ ತಕಂಡ್ ಹೊರ್ಟತ್. ಗಾಬರಿಯಾದ ಪ್ರಕಾಶ ತಾನೂ ಬೈಕ್ ಹತ್ತಿತ್.

ಬೈಕ್‌ನ ಮಿತಿ ಮೀರ್ದ ರಭಸಲಿ ಓಡ್ಸ್‌ತಿತ್ ಮಹೇಶ ಏನ್ ಇಲ್ಲೆತೇಳ್ರು ಭಾಗ್ಯನ ಉಳ್ಳೇ ಉಳ್ಸಿನೆತ ಹೊರ್ಟಿತ್ತ್ ಮಹೇಶ. ಮಹೇಶಂಗೆ ಒಟ್ಟಿಗೆ ಪ್ರಕಾಶ ಇರ್ದರ ಅರಿವೇ ಇತ್ತ್‌ಲೆ. ಪ್ರಕಾಶನ ಎಚ್ಚರಿಕೆ ಮಾತ್‌ಗ ಅವಂಗೆ ಕೇಳ್ತ್‌ಲೆ.

ಮುಂದೆ ಹೋಗ್‌ತ್ತಿದ್ದಂಗೆ ಎದ್ರಿಗೆ ಹೋಗ್‌ತ್ತಿದ್ದ ಬಸ್ ಕಾಂಬಕೆ ಸಿಕ್ತ್. ಎಷ್ಟ್ ಹಾರ್ನ್ ಮಾಡ್ರೂ ಸೈಡ್ ಕೊಡದಿರ್ಕನ ಮಹೇಶನ ಸಹನೆ ತಪ್ಪಿತ್.

ಎಷ್ಟೋ ಹೊತ್ತ್ ಆದ ಮ್ಯಾಲೆ ಬಸ್ ಸೈಡ್‌ಗೆ ಹೋಕನ ತನಿಗೆ ಕೊಟ್ಟ ಸೈಡ್‌ತ

ಗ್ಯಾನ ಮಾಡ್ದ ಮಹೇಶ ರಭಸಲಿ ಬೈಕ್‌ನ ಮುನ್ನುಗಿಸಿತ್.

ಕ್ಷಣಾರ್ಧಲಿ ಮಹೇಶನ ಬೈಕ್ ಎದ್ರ್‌ಂದ ಬರ್ತಿದ್ದ ಲಾರಿಯ ಅಡಿಗೆ ಸಿಕ್ಕಿತ್. ಮಹೇಶ ಸ್ವಯ ತಪ್ಪಿ ಬಿದ್ದಿತ್ತ್.

ಬಸ್ಸ್‌ನವ ಲಾರಿಗೆ ಕೊಟ್ಟ ಸೈಡ್‌ನ ತನಿಗೆತ ತಿಳ್ದ ಮಹೇಶ ನೆಟ್ಟಗೆ ಲಾರಿಯಡಿಗೆ ಸಿಲ್‌ಕ್ಕಿತ್ತ್. ಬಸ್ಸ್‌ನವ ಸಿಗ್ನಲ್ ಕೊಡದೆ ತಪ್ಪ್ ಮಾಡಿತ್ತ್.

ಪರಾರಿಯಾಕೆ ನೋಡ್ತಿದ್ದ ಲಾರಿ ಡ್ರೈವರ್‌ನ ಪ್ರಯತ್ನ ಅಲ್ಲಿಗೆ ಗಕ್ಕನೆ ಬಂದ್ ನಿತ್ತ ಕಾರ್‌ಂದ ವಿಫಲ ಆತ್. ಕಾರ್ ನಿಲ್ಲ್‌ತ್ತಿದ್ದಂಗೆ ಎದೆ ಒಡ್ದ್ ಹೋದಂಗೆ ಸ್ವರವೊಂದ್ ಹೊರ್ಟತ್.

* * * * *

ಭಾಗ್ಯನ ಕರ್ಕಂಡ್ ರೈಲ್ವೆ ಸ್ಟೇಷನ್‌ಗೆ ಬರ್ವಷ್ಟೊತ್ತಿಗೆ ರೈಲ್ ಹೊರ್ಟ್ ಹೋಗಿತ್ತ್. ಇನ್ನೊಂದು ರೈಲ್ ಸಾಯಂಕಾಲನೇ ಇರ್ದುತ ತಿಳ್ದ್ ಮೋಹನ ತಾನೇ ಭಾಗ್ಯನ ಕಾರ್‌ಲಿ ಕರ್ಕಂಡ್ ಹೊರ್ಟತ್. ಜೊತೆಲಿ ಜಯಶ್ರೀ ಮತ್ತೆ ಕೂಸ್‌ಸ ಇದ್ದೊ. ಸ್ವಲ್ಪ ದೂರ ಬಾಕನ ರೈಲ್ ಹಳಿ ತಪ್ಪಿದ ಸುದ್ದಿ ಕೇಳಿ ಭಾಗ್ಯನ ಎದೆ ಬಡ್ಕಣಿಕೆ ಸುರು ಆತ್. ದೇವರೇ ನನ್ನ ಬಚಾವ್ ಮಾಡ್ತ್‌ತ ಮನ್ಸ್‌ಲೇ ದೇವ್ರಿಗೆ ಕೈಮುಗ್ತ್.

ಆದರೆ. ಒಟ್ಟಿಗೆ ಮಹೇಶನ ಗ್ಯಾನ ಬಂದ್ ಗಾಬರಿಯಾತ್ ರೈಲ್ ಆಕ್ಸಿಡೆಂಟ್ ಆದ ಸುದ್ದಿ ಕೇಳಿ ಅಂವ ಏನ್ ಗ್ಯಾನ ಮಾಡಿಟ್ಟೊ ಅವ್ಳಿಗೆ ಹೆದ್ರಿಕೆ ಸುರ್ ಆತ್.

ಮೈಸೂರು ಹತ್ರ ಬರ್ತಿದ್ದಂಗೆ ಮುಂದೆ ಹೋಗ್‌ತ್ತಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡ್ದದ್‌ನೋಡಿ ಮೋಹನ ತಕ್ಷಣ ಕಾರ್ ನಿಲ್ಸಿ ಓಡಿ ಹೋಗಿ ನೋಡ್ತ್. ನೊಡ್ತಿದ್ದಂಗೆ ಅವಂಗೆ ಶಾಕ್ ಆತ್. ಭಾಗ್ಯ ಮಹೇಶನ ನೋಡಿ ಅಯ್ಯೋ.....ತ ಕಿರ್ಚಿ ಸ್ವಯತಪ್ಪಿ ಬೀತ್.

ರಕ್ತದ ಮಡುಲಿ ಮಹೇಶ ಬಿದ್ದಿತ್ತ್. ಪ್ರಕಾಶ ಬೈಕ್‌ಂದ ಬಿಸಾಕಿದಂಗೆ ದೂರ ಬಿದ್ದಿತ್ತ್.

ಭಾಗ್ಯನ ಜಯಶ್ರೀ ಮೆಲ್ಲೆ ಹಿಡ್ಕಂಡ್ ಹೋಗಿ ಕಾರ್‌ಲಿ ಮಲ್ಗಿಸಿತ್. ಅಷ್ಟೊತ್ತಿಗೆ ಅಲ್ಲಿಗೆ ಪೋಲೀಸ್‌ನವು ಮತ್ತೆ ಆಂಬ್ಯುಲೆನ್ಸ್ ಎಲ್ಲಾ ಬಂದ್ ಎತ್ತಿದೊ. ಜನ ಗುಡ್ಡೆ ಸೇರಿ ಬುಟ್ಟಿದ್ದೊ, ಮೋಹನ ತಡ ಮಾಡದೆ ಜನರ ಸಹಾಯಲಿ ಮಹೇಶನ ಮತ್ತೆ ಪ್ರಕಾಶನ ಆಂಬ್ಯುಲೆನ್ಸ್‌ಗೆ ಹಾಕಿ, ಆಂಬ್ಯುಲೆನ್ಸ್ ಹಿಂದೆ ರಭಸಲಿ ಹೊರ್ಟತ್. ಭಾಗ್ಯ, ಜಯಶ್ರೀ ಎಲ್ಲವೂ ಕಾರ್‌ಲಿ ಬೆಂಗ್ಳೂರಿಗೆ ಹೊರ್ಟೊ.

ಆಸ್ಪತ್ರೆಗೆ ಎತ್ತಿಕೆ ಮುಂದೆ ಆಸ್ಪತ್ರೆಗೆ ಫೋನ್ ಮಾಡಿ ಡಾಕ್ಟರ್‌ಗಳಿಗೆ ಎಲ್ಲಾ ರೆಡಿ ಮಾಡಿಕೆ ಹೇಳಿತ್ತ್. ಸೋಮಯ್ಯ ಮತ್ತೆ ಸೀತಮ್ಮಂಗೆ ಸುದ್ದಿ ತಿಳ್ದ್ ಮರ್ಟ್‌ಕಂಡ್ ಓಡೋಡಿ ಬಂದೊ. ಒಂದ್ ಕಡೆ ಸ್ವಯ ತಪ್ಪಿ ಬಿದ್ದಿರ್ವ ಪ್ರಕಾಶ ಇನ್ನೊಂದ್ ಕಡೆ ಗುರ್ತೇ ಸಿಕ್ಕದಂಗೆ

ಜಜ್ಜಿ ಹೋಗಿರ್ವ ಮಹೇಶನ ನೋಡಿ ಹೃದಯ ಎದೆ ಒಡ್ದು  ಹೋದಂಗೆ ಮರ್ಡಿಕೆ ಸುರು ಮಾಡ್ದೊ.

ಮೋಹನ್ ತಾನೊಬ್ಬ ಡಾಕ್ಟರಾಗಿ ಆಸ್ಪತ್ರೆನ ಡಾಕ್ಟರ್‌ಗಳೊಟ್ಟಿಗೆ ಎಲ್ಲಾ ರೀತಿಲೂ ಸಹಕಾರ ಕೊಟ್ಟತ್. ಸೋಮಯ್ಯ ಮತ್ತೆ ಸೀತಮ್ಮನವು ಹೆಂಗಾದರೂ ಮಾಡಿ ತಮ್ಮ ಮಕ್ಕಳ್ನ ಉಳ್ಸಿ ಕೊಡೀತ  ಡಾಕ್ಟರ್‌ಗಳಲ್ಲಿ ಬೇಡಿಕಂಡೊ.

ಮಹೇಶ್ ಎಮರ್ಜೆನ್ಸಿ ವಾರ್ಡ್‌ಲಿ ಇದ್ದದ್ರಂದ ಎಲ್ಲವೂ ದೂರಂದ ನೋಡಿಕೆ ಮಾತ್ರ ಆಗ್ತಿತ್. ಅವಂಗೆ ಡಾಕ್ಟರ್‌ಗ ತಲೆ, ಕಾಲ್, ಕೈ ಎಲ್ಲಾ ಕಡೆ ಆಪರೇಷನ್  ಮಾಡಿದ್ದೊ. ವಿಪರೀತ ರಕ್ತ ಹೋಗಿತ್ತಾದ್ರಂದ ಸುಮಾರ್ ಬಾಟಲ್ ರಕ್ತ ಕೊಟ್ಟಿದ್ದೊ. ಅವಂಗೆ ಸ್ವಯನೇ ಇತ್ಲೆ.

ಇತ್ತ ಪ್ರಕಾಶಂಗೂ ಬಾಳ ಪೆಟ್ಟಾಗಿತ್. ಅವನ ಬಿಸಾಕಿದಂಗೆ ಆಗಿದ್ರಂದ ಅವನ ಸೊಂಟ, ತೊಡೆಗೆ ಪೆಟ್ಟಾಗಿತ್. ಅವಂಗೆ ಸಹ ಆಪರೇಷನ್ ಆಗಿತ್. ಆದರೆ ಅವಂಗೆ ಮಹೇಶನಷ್ಟ್ ಪೆಟ್ಟಾಗಿತ್ಲೆ.

ಭಾಗ್ಯ ಮೂಗಳಾಗಿ ಕಣ್ಣೀರ್ ಹರ್ಸ್‌ತಿತ್. ಅವ್ಳ ಮನ್ಸ್ ದೇವರ್ನ ಬೇಡ್ತಾ ಇತ್. ಮೋಹನ್ ಆಗೊಮ್ಮೆ ಈಗೊಮ್ಮೆ ಹೊರಗೆ ಬಂದ್ ಧೈರ್ಯ ಹೇಳ್ತಿದ್ದರೂ ಅವನ ಮುಕಲೂ ಬಾಳ ಬ್ಯಾನೆ ಕಾಂಬತಿತ್. ಅಂವ ಏನೋ ಮುಚ್ಚಿಡ್ತಾ ಉಟ್ಟುತ ಅನ್ನಿಸ್ತಿತ್.

ಭಾಗ್ಯನ ವ್ಯಥೆನ ನೋಡಿಕಾಗದೆ ಸೀತಮ್ಮ ಮತ್ತೆ ಜಯಶ್ರೀ ತಮ್ಮ ದುಕ್ಕನ ಬುಟ್ಟ್ ಅವಳ್ನ ಸಮಾಧಾನ ಮಾಡ್ತಿದ್ದೊ. ಪ್ರಶಾಂತನೂ ಬಂದಿತ್. ಅಂವ ಬಲಾತ್ಕಾರ ಮಾಡಿ ಭಾಗ್ಯಂಗೆ ಸ್ವಲ್ಪ ತಿನ್ನಿಸ್ತ್‌ತಿತ್.

ಎಲ್ಲವೂ ಸಮಾಧಾನ ಮಾಡ್ಕನ ಅವಳ ದುಕ್ಕ ಜಾಸ್ತಿ ಆಗ್ತಿತ್.

ಎರ್ಡ್ ದಿನ ಸಾವು ಬದ್ಕ್‌ನ ನಡುಲಿ ಹೋರಾಡಿ ಮಹೇಶ ಮೂರನೇ ದಿನ ಎಲ್ಲರ್ನ ಶೋಕ ಸಾಗರಲಿ ಮುಳ್ಗಿಸಿ ಎಂದಿಗೂ ಬಾರದ ಲೋಕಕ್ಕೆ ಹೊರ್ಟ್ ಹೋತ್.

ಭಾಗ್ಯ ಮಹೇಶನ ಮೇಲೆ ಬಿದ್ದ್ ಗೋಳಾಡ್ತ್. ಇನ್ನ್ ಎಂತ ಮಾಡ್ರೂ ಅಂವ ತಿರ್‍ಗಿ ಬಾದುಲೆತ ತಿಳ್ದ್ ತಾನಿನ್ನ್ ಒಂಟಿ, ಈ ಪ್ರಪಂಚಲಿ ತಾನ್ ಏಕಾಂಗಿ ತೇಳ್ವ ಭಾವನೆ ಬೆಳ್ದ್ ತಾನ್ ಬುದುಕುದೇ ಸಾಧ್ಯವಿಲ್ಲತ ಅನ್ನಿಕೆ ಸುರುಆತ್.

ಊಟ-ನಿದ್ದೆಗಳ್ನ ತೊರ್ದ್ ಭಾಗ್ಯ ಬಾಳ ಬಚ್ಚಿ ಹೋತ್. ಅವಳ್ನ ನೋಡಿಕೇ ಆಗ್ತಿತ್‌ಲೆ ಸೀತಮ್ಮನವು ಬಲವಂತವಾಗಿ ಊಟ ಮಾಡ್ಸಿರೆ ಎರಡು ಬಾಯಿ ತಿಂದ ಶಾಸ್ತ್ರ ಮಾಡ್ತಿತ್. ಅವು ಹೇಳ್ಕನ ಮಲ್ಗ್‌ತಿತ್ .

ಮಹೇಶನ ಎಲ್ಲಾ ಕರ್ಮಗಳ್ನ ಬೇರೆಯವು ಹೇಳ್ದಂಗೆ ಮಾಡಿ ಮುಗ್ಸಿತ್.

ಅವು ಅವಳ್ನ ತಮ್ಮ ಒಟ್ಟಿಗೇ ಮಲ್ಗಿಸಿಕಂಬತಿದ್ದೊ. ಬಸುರಿ ಗೂಡೆ ಹಿಂಗೆ ಆದರೆ

ಹೆಂಗೆತ ಅವ್ಕೆ ಬಾಳಾ ದುಕ್ಕ ಆಗ್ತಿತ್ತ್. ಅಂತ ಮುತ್ತ್ ನಂತ ಮಂಜನ ಕಳ್ಕಂಡ್ ಅವು ಅರ್ಧ ಆಗಿಬುಟ್ಟಿದ್ದೊ.

ಆಸ್ಪತ್ರೆಲಿ ಇದ್ದ ಪ್ರಕಾಶ ದಿನಂದ ದಿನಕ್ಕೆ ಚೇತರಿಸಿಕಣ್‌ತಿತ್ತ್ ಭಾಗ್ಯಂಗೆ ಇದ್ಯಾವುದರ ಪರಿವೇ ಇತ್ತ್‌ಲೆ.

ಒಂದ್ ತಿಂಗ ಕಳಿಯಕನ ಭಾಗ್ಯಂಗೆ ಪ್ರಕಾಶನ ಗ್ಯಾನ ಆತ್.

ಅಮ್ಮನೊಟ್ಟಿಗೆ ಆಸ್ಪತ್ರೆಗೆ ಬಂದ ಭಾಗ್ಯನ ನೋಡಿ ಪ್ರಕಾಂಶಗೆ ಗಾಬರಿಯಾಗಿತ್ತ್.

ಭಾಗ್ಯ ಹೌದೋ ಅಲ್ಲವೊ ತೇಳುವಂಗೆ ಅವಳ್ನ ನೋಡ್ತ್. ಭಾಗ್ಯ ಅಷ್ಟ್ ಲಾಚಾರಾಗಿ ಬುಟ್ಟಿತ್. ಬಿಳಿ ಸೀರೆಲಿ ಅವಳ್ನ ಕಂಡ್ ಅವನ ಕರುಳು ಚುರುಕುತೇಳ್ತ್. ಪ್ರಕಾಶನ ಕಂಡ್ ಭಾಗ್ಯಂಗೆ ದುಕ್ಕ ಉಕ್ಕಿ ಬಾತ್ ಪ್ರಕಾಶಂಗೂ ಅವಳ ಮುಕ ನೋಡಿಕಾಗದೆ ಕಣ್ಣ್ ವರ್ಶಿಕಂಡ್ ಮುಖ ತಿರ್‍ಗಿಸಿಕಣ್ತ್ .

ಪ್ರಕಾಶಂಗೆ ಬಲವಾದ ಪೆಟ್ಟಾಗಿದ್ದರೂ ಅಂವ ಪ್ರಾಣಾಪಾಯಂದ ಪಾರಾಗಿತ್ತ್. ಅದ್ರಂದ ಅವನ ಬೆಂಗ್ಳೂರ್‌ಂದ ಮೈಸೂರು ಆಸ್ಪತ್ರೆಗೆ ಕರ್‍ಕಂಡ್ ಬಂದ್ ಅಡ್ಮಿಟ್ ಮಾಡೆದೊ ಅವನ ನೋಡಿಕೆ ಬರ್‍ತಿದ್ದ ಅವನ ಸಹೋದ್ಯೋಗಿಗ ಮತ್ತೆ ಅವನ ಫ್ರೆಂಡ್ಸ್ ಎಲ್ಲಾ ಅವನ ನೋಡಿ ಹೋಕನ ಭಾಗ್ಯನ ಕಡೆ ಕರುಣೆಂದ ನೋಡಿ ಹೋಕನ ಭಾಗ್ಯ ಪಾತಾಳಕ್ಕೆ ಕುಸ್ದ್ ಹೋಗತ್ತಿತ್ತ್. ಭಾಗ್ಯ ಅಲ್ಲೆ ಹೊರಗೆ ಇದ್ದ ಕುರ್ಚಿಲಿ ಕುದ್ದಿತ್ತ್.

"ಹಲೋ ಸೂರ್ಯ ಹೆಂಗೊಳ್ರಿ? ಭ್ಯಾನೆ ಕಮ್ಮಿ ಆಗುಟ್ಟು ತಾನೆ" ತೇಳ್ಕನ ಭಾಗ್ಯ ಸರಕ್ಕನೆ ತಿರ್‍ಗಿ ನೋಡ್ತ್ ತನಿಗೆ ಬೆನ್ನ್ ಹಾಕಿ ನಿತ್ತಿದ್ದ ಬಿಳಿಕೋಟ್ ಹಾಕಿದ್ದ ಮಹಿಳಾ ಡಾಕ್ಟರ್.

ಆದರೂ ಆ ಸೂರ್ಯ ತೇಳ್ವ ಹೆಸ್ರ್ ಮತ್ತೆ ಪರಿಚಯ ಇದ್ದಂಗೆ ಇದ್ದ ಸ್ವರ ಅವಳ್ನ ಕಾಲೇಜ್‌ನ ದಿನಗಳತ್ತ ಕರ್‍ಕಂಡ್ ಹೋತ್.

ಪ್ರಕಾಶ ನಗಾಡಿಕಂಡ್ ಮಾತಾಡ್‌ತಿತ್ತ್. ಎಷ್ಟೋ ಹೊತ್ತ್‌ನ ಕಳ್ದ ಮ್ಯಾಲೆ ಆ ಡಾಕ್ಟರ್ ಹೊರ್‍ಟು ಹೋಕನ ಭಾಗ್ಯ ಮೆಲ್ಲೆ ಒಳಗೆ ಬಾತ್. ಪ್ರಕಾಶನ ಮುಕ ಗೆಲುವಾಗಿತ್ತು. "ಭಾಗ್ಯ ಈಗ ಮಾತಾಡ್ದ ಯಾರಂತ ಗೊತ್ತಾತ" ತ ಕೇಳ್ತ್.

"ಇಲ್ಲೆ"

"ವನಿತಾ ಗ್ಯಾನ ಉಟ್ಟು ತಾನೆ ಅವ್ಳೇ ಈಗ ಇಲ್ಲಿಗೆ ಡಾಕ್ಟರಾಗಿ ಬಂದುಟ್ಟು ಕಳ್ದವಾರ ರಿಪೋರ್ಟ್ ಮಾಡ್ದಂತೆ, ನಾನ್ ಇಲ್ಲಿ ಇರ್‍ವ ವಿಷ್ಯ ತಿಳ್ದ್ ದಿನಾ ಬಂದ್ ನೋಡಿಕಂಡ್ ಹೋಗ್ತಾ ಉಟ್ಟ್.

ಭಾಗ್ಯನ ಮನ್ಸ್‌ಲಿ ತರತರ ವಿಚಾರಗ ಸುಳ್ದ್ ಹೋದೊ.

ಪ್ರಕಾಶ ಮೈಸೂರ್ ಆಸ್ಪತ್ರೆಗೆ ಬಂದ ಮ್ಯಾಲೆ ಭಾಗ್ಯ ದಿನಾ ಊಟ ತಕಂಡ್

ಆಸ್ಪತ್ರೆಗೆ ಹೋಗ್ತಿತ್. ಅವ್ಳು ಹೊಕನೆಲ್ಲಾ ವನಿತಾನ ದರ್ಶನ ಆಗ್ತಿತ್.

ವನಿತ ಮುಂದೆಂದೂ ಭಾಗ್ಯನೊಟ್ಟಿಗೆ ಅಷ್ಟಾಗಿ ಮಾತಾಡ್‌ತಿತ್ತ್‌ಲೆ.

ಮೊದಲೇ ಅಹಂಕಾರಿಯಾಗಿದ್ದ ಅವ್ಳಿಗೆ ಈಗ ಡಾಕ್ಟರಾದ ಮೇಲೆ ಇನ್ನೂ ಅಹಂಕಾರ ಬಂದಿರ್ದುತ ಗ್ಯಾನ ಮಾಡಿ ಭಾಗ್ಯ ಅವಳ್ನ ಮಾತಾಡ್ಸಿಕೆ ಹೋತ್‌ಲೆ ತನ್ನ ಅವತಾರ ತನ್ನ ಸ್ಥಿತಿನ ಕಂಡ್ ಅವ್ಳು ಕುಶಿ ಪಡ್ದುತ ಭಾಗ್ಯ ಗ್ಯಾನ ಮಾಡ್ತ್.

ವನಿತ ಬಾಳಾ ಕುಶಿಲಿ ಪ್ರಕಾಶಂಗೆ ಉಪಚಾರ ಮಾಡ್ತಿತ್ತ್. ಭಾಗ್ಯನ ಕಂಡ್

"ಹಿಂಗೆ ಆಗಕಾಗದಿತ್ತ್"ತ ಹೇಳಿತ್ತ್.

ಪ್ರಕಾಶನ ಮುಕದ ಭಾವನೆನ ಓದಿಕೆ ಆಗ್ತಿತ್ತ್‌ಲೆ ಒಟ್ಟಾರೆ ವನಿತ ಬಾಕನ ಅವನ ಮುಕ ಗೆಲುವಾಗ್‌ತಿತ್.

ಭಾಗ್ಯನ ಕರ್‍ಕಂಡ್ ಹೋಕೆ ಪ್ರಶಾಂತ ಮತ್ತೆ ಶಾಲಿನಿ ಬಂದಿದ್ದೊ ಪ್ರಕಾಶ ಮನೆಗೆ ಬಂದ ಮೇಲೆ ಬನ್ನೆತ ಅವ್ಕೆ ಹೇಳ್ತ್ ಭಾಗ್ಯ.

ಸೋಮಯ್ಯ ಮತ್ತೆ ಸೀತಮ್ಮ "ಮಂಜನ ಕಳ್ಕಂಡ್ ದುಕ್ಕಲಿ ವಳೊ, ಭಾಗ್ಯನ ನೋಡಿ ಆ ದುಕ್ಕನ ಮರ್‍ಯೆಕೆ ಪ್ರಯತ್ನ ಪಟ್ಟಿವೆ. ಅಲ್ಲದೆ ಬಸುರಿ ಗೂಡೆ, ಅಮ್ಮ ಇದ್ದಿದ್ದರೆ ಪರ್‍ವಾಗಿತ್ತ್‌ಲೆ ನಾನೇ ಅವ್ಳ ಅಮ್ಮನಂಗೆ ನೋಡಿಕಣೆ, ನೀವೇನ್ ಬ್ಯಾಜರ ಮಾಡಿಕಣ್‌ಬಡಿ"

ತೇಳಿ ಅವ್ರ ಕೋರಿಕೆನ ನಯವಾಗಿ ತಳ್ಳಿ ಹಾಕಿತ್ತ್,

"ಆದರೂ ಶಾಸ್ತ್ರಕಾದರೂ ಅವಳ್ನ ತವರು ಮನೆಗೆ ಕಳ್ಸಿಕೊಡಿ, ಅವ್ಳಿಗೂ ಒಂದ್ ಬದ್ಲಾವಣೆ ಆದಂಗೆ ಆದೆ"

"ಆಗಲಿ ಪ್ರಕಾಶ ಮನೆಗೆ ಬಂದ ಮ್ಯಾಲೆ ಸ್ವಲ್ಪ ದಿನಕ್ಕೆ ಕಳ್ಸಿ ಕೊಟ್ಟವೆ"

ಅವು ಭಾಗ್ಯನ ಮೇಲೆ ಇಟ್ಟಿರ್‍ವ ಪ್ರೀತಿನ ಕಂಡ್ ಮೂಕವಾಗಿ ಬಿಡ್ತ್ ಅವನ ಬಾಯಿಂದ್ ಮಾತೇ ಹೊರ್‍ಟತ್‌ಲೆ ಮೌನವಾಗಿ ತಲೆ ಆಡ್ಸಿತ್ ಪ್ರಶಾಂತ

ಮತ್ತೆ ಹದ್‌ನೈದ್ ದಿನಲಿ ಪ್ರಕಾಶ ಆಸ್ಪತ್ರೆಂದ ಡಿಸ್‌ಚಾರ್ಜ್ ಆಗಿ ಮನೆಗೆ ಬಾತ್. ನಡಿಯಕೆ ಕಷ್ಟ ಪಡ್ತಿದ್ದ ಅವಂಗೆ ಭಾಗ್ಯ ತನ್ನ ದುಕ್ಕನ ಮರ್ತ್ ಮಕ್ಕಳಂಗೆ ಉಪಚಾರ ಮಾಡ್ತಿತ್.

ಪ್ರಕಾಶ ಈಗ ತನ್ನ ಸಂಕೋಚ ಮರ್ತ್ ಅವಳ್‌ಂದ ತನಿಗೆ ಬೇಕಾದ್‌ನ ಕೇಳಿ ಮಾಡ್ಸಿಕಣ್ತಿತ್, ಆದರೂ ಭಾಗ್ಯ ಇರ್‍ವ ಸ್ಥಿತೀಲಿ ಅವ್ಳ ಆರೋಗ್ಯದ ಕಡೆಗೆ ಗಮನ ಕೊಡೋಕುತೇಳಿ ಅವ್ಳಿಗೆ ಪ್ರೀತಿಂದ ಗದರ್‌ತಿತ್.

ಅಡ್ಗೆಯಂವ ವಾಪಾಸ್ ಬಂದಿದ್ರಂದ ಈಗ ಮನೆಲಿ ಅವ್ಳಿಗೆ ಅಷ್ಟ್ ಕೆಲ್ಸ ಇತ್ತ್‌ಲೆ.

ಪ್ರಕಾಶಂಗೆ ಮೂಸಂಬಿ ಸುಲ್ದ್ ಕೊಡ್‌ತಿದ್ದ ಭಾಗ್ಯ ಮನೆ ಮುಂದೆ ಕಾರ್ ಬಂದ್ ನಿತ್ತ ಸದ್ದ್ ಕೇಳಿ ಹತ್ರ ಹೊಗಿ ನೋಡ್ತ್, ವನಿತಾ ಬರ್‍ತಾಇತ್.

"ಪ್ರಕಾಶ್ ವನಿತಾ ಬರ್‍ತಾ ಉಟ್ಟು, ವಿಶ್ ಯು ಗುಡ್ ಲಕ್" ತೇಳಿ ಅವನತ್ತ ಕಣ್ಣ್ ಮಿಟಿಕಿಸಿತ್

ಪ್ರಕಾಶನ ಮುಕ ಗಂಭೀರ ಆಕನ ಭಾಗ್ಯ ಆಶ್ಚರ್ಯಂದ ಅವನ ಮುಕ ನೋಡ್‌ತ್

"ಬಾ ವನಿತಾ" ತೇಳಿ ಅವಳ್ನ ಪ್ರಕಾಶನ ಹತ್ರ ಕರ್‍ಕಂಡ್ ಹೋತ್

"ನೀವ್ ಮಾತಾಡ್ತಾ ಇರಿ ನಾನ್ ಕಾಫಿ ತಕಂಡ್ ಬನ್ನೆ" ತೇಳಿ ಅವು ಇಬ್ಬರ್‍ನೇ ಬುಟ್ಟ್ ವಳಗೆ ಹೋತ್.

ಸ್ವಲ್ಪ ಹೊತ್ತ್ ಕಳ್ದ್ ಭಾಗ್ಯ ಕಾಫಿ ತಕಂಡ್ ಬಾತ್ ಕಾಫಿ ಕುಡ್ದ್ ವನಿತಾ ಹೋತ್.

ನಗೆ ಮುಕಲಿ ವಳಗೆ ಬಂದ ಭಾಗ್ಯನ ಇನ್ನೂ ಗಂಭೀರ ಆಗೇ ಎಂತದೋ ಗ್ಯಾನಮಾಡಿಕಂಡ್ ಇದ್ದ ಪ್ರಕಾಶ ನೋಡ್ತ್‌ಲೆ, ಅಂವ ಯಾವುದೋ ಯೋಚನೆಲಿ ಮುಳ್ಗಿ ಹೋಗಿತ್ತ್.

"ಕನ್ಸ್ ಕಾಣ್ತಾ ಉಟ್ಟು" ತ ಗ್ಯಾನ ಮಾಡ್ದ ಭಾಗ್ಯ ಅಲ್ಲಿಂದ ಹೊರ್‍ಟ್ ಒಳಗೆ ಹೋತ್.

"ಹೆಂಗಾದರೂ ತಾನ್ ಬಯ್ಸಿದಂಗೆ ಪ್ರಕಾಶ ವನಿತಾನ ಮದ್ವೆ ಆಗೇ ಆದೆತ ಭಾಗ್ಯ ಕುಶಿ ಪಟ್ಟತ್.

ಅಂದ್ ಪ್ರಶಾಂತ ಭಾಗ್ಯನ ಕರ್‍ಕಂಡ್ ಹೋಕೆ ಮತ್ತೆ ಬಾಕನ ಭಾಗ್ಯ ಹೊರ್‍ಡಿಕೆ ತಯಾರಿ ನಡ್ಸಿತ್ ಪ್ರಕಾಶ ಮಾತ್ರ ಭಾಗ್ಯನ ಕಳ್ಸುದು ಬ್ಯಾಡತ ಅಮ್ಮನೊಟ್ಟಿಗೆ ಹೇಳ್ತ ಇದ್ದದ್ನ ಕೇಳಿ ಭಾಗ್ಯ ಆಶ್ಚರ್ಯಲಿ ಅವನ ಮುಕ ನೋಡ್ತ್. ಸೋಮಯ್ಯ ಮತ್ತೆ ಸೀತಮ್ಮ ಮೌನವಾಗಿ ಒಪ್ಪಿಗೆ ನೀಡ್ರೊ.

ತವರಿಗೆ ಬಂದ ಭಾಗ್ಯಂಗೆ ತಾನ್ ಆಡಿ ಬೆಳ್ದ ನೆಲನ ನೋಡ್ತಿದಂಗೆ ಹರ್ಷ ಉಕ್ಕಿ ಬಾತ್. ಆದರೆ, ಒಟ್ಟಿಗೆ ಅಪ್ಪ ಅಮ್ಮ ಇಲ್ಲದ ಮನೆ ಬಿಕೋ ತೇಳ್ತಿತ್ತ್. ಅವ್ರ ನೆನ್ಪ್ ಅವ್ಳಿಗೆ ದುಕ್ಕ ಆಗಿ ಕಣ್ಣಂದ ನೀರ್ ಬಾತ್. ರೇಷ್ಮಂಗೆ ಬಾಳ ಕುಶಿ ಆತ್ ಶಾಲಿನಿ ಅವಳ್ನ ಲಾಯ್ಕ ಉಪಚಾರ ಮಾಡ್ತಿತ್.

ರೇಷ್ಮನೊಟ್ಟಿಗೆ ತೋಟಕ್ಕೆ ಗದ್ದೆಗೆಲ್ಲಾ ಹೋಗಿ ಬಾತ್ ಅವ್ಳ ಮನ್ಸ್‌ಗೆ ಈಗ ಸ್ವಲ್ಪ ಸಮಾಧಾನ ಆಗಿತ್ತ್. ಆಗೊಮ್ಮೆ ಈಗೊಮ್ಮೆ ಮಹೇಶನ ಗ್ಯಾನ ಬಾಕನ ಅವ್ಳ ಮೌನವಾಗಿ ಮರ್‍ಟ್ಕಂಡ್ ಕುದ್ದು ಬಿಡ್ತಿತ್.

ಮಹೇಶನ ಗ್ಯಾನಲಿ ಮಂಕಾಗಿ ಕುದ್ದಿರ್‍ತಿದ್ದ ಭಾಗ್ಯನ ಪ್ರಶಾಂತ ಎಷ್ಟೋ ರೀತಿಲಿ ಸಮಾಧಾನ ಮಾಡ್ತಿತ್. ಶಾಲಿನಿಗೆ ದಿನ ಕಳ್ದಂಗೆ ಸಹನೆ ತಪ್ಪಿ ಸಿಟ್ಟ್ ಬಾತಿತ್. ಅವ್ಳ ತನ್ನ ಸಿಡುಕ್ ಬುದ್ದಿನ ತೋರ್‍ಸಿಕೆ ಸುರುಮಾಡ್ತ್.

ಭಾಗ್ಯಂಗೆ ಈಗ ಮನೆ ಗ್ಯಾನ ಬಾಕೆ ಸುರ್ ಆತ್. ಅತ್ತೆ ಮಾವನ ಪ್ರೀತಿನ ನೆನ್ಪ್

ವಾಪಾಸ್ ಹೋಕೆ ನಿರ್ಧಾರ ಮಾಡ್ತ್. ಈಗಾಗಲೇ ಅತ್ತೆ ಮನೆಂದ ಭಾಗ್ಯನ ಕಳ್ಸಿತ ಸುಮಾರ್ ದಪ ಪೋನ್ ಬಂದಿತ್ತ್.

ಈ ನಡುಲಿ ಜಯಶ್ರೀ ಸಹ ಮನೆಗೆ ಬಾ ತ ಕರ್ದಿತ್ತ್. ಪ್ರಶಾಂತ ಬಾಣಂತನ ಮುಗ್ಸಿ ಕಳ್ಸಿಕೊಟ್ನೆತ ಎಷ್ಟ್ ಹೇಳ್ದರೂ ಸೀತಮ್ಮ ಕೇಳ್ತ್‌ಲೆ. ಅನುಭವಸ್ಥರಿಲ್ಲದ ಮನೆತೇಳಿ ಅವನ ಮಾತ್‌ನ ತೆಗ್ದ್ ಹಾಕಿತ್. ಇದ್ರಂದ ಶಾಲಿನಿಗೆ ಬಾಳ ಕುಶಿ ಆತ್. ಅವ್ಳಿಗೆ ಎಲ್ಲಿ ಭಾಗ್ಯನ ಬಾಣಂತಿ ಕೆಲ್ಸ ಮಾಡಿಕಾದೇನೊ ತೇಳಿ ಬಾಳ ಬೇಜಾರ್ ಆಗಿತ್ತ್.

ರೇಷ್ಮನ ಬಲವಂತಕ್ಕೆ ಅವಳೊಟ್ಟಿಗೆ ಭಾಗ್ಯ ಕಾರ್ ತಕಂಡ್ ತೋಟಕ್ಕೆ ಹೋಗಿತ್ತ್ ಪ್ರಶಾಂತ ರೇಷ್ಮಂಗೆ ಹಂಗೆ ಮಾಡ್‌ತ ಹೇಳಿಕೊಟ್ಟಿತ್ತ್.

ಭಾಗ್ಯ ಮಂಕಾಗಿ ಕುದ್ದುಕಂಡ್ ಇರ್ದುನ ಅವಂಗೆ ನೋಡಿಕೆ ಆಗತಿತ್ತ್‌ಲೆ.

ಶಾಲಿನಿ ಅಂದ್ ಬಾಳ ಸಿಟ್ಟ್‌ಲಿ ಇತ್ತ್. ಪ್ರಶಾಂತ ಭಾಗ್ಯಂಗೆ ಹೋಕೆ ಮುಂದೆ ಅವ್ಳಿಗೆ ಎಂತಾರ ಗಿಫ್ಟ್ ಕೊಡೊನೊತ ಹೇಳ್ದೆ ಅದ್ಕೆ ಕಾರಣ ಆಗಿತ್ತ್. ಅವ್ಳ ಸಿಟ್ಟ್ ಎಲ್ಲರ ಮೇಲೆ ದಾಳಿ ಮಾಡಿತ್ತ್. ಭಾಗ್ಯಂಗೆ ಬಾಳ ಬ್ಯಾಜರಾಗಿತ್ತ್ ಯಾರಾದರೂ ಬಂದ್ ಕರ್ಕಂಡ್ ಹೋದರೆ ಎಷ್ಟು ಲಾಯ್ಕ ಇತ್ತ್‌ತ ತನ್ನ ಅತ್ತೆ ಮನೆಯವರ್ನ ನೆನಿಯತಿತ್ತ್ ಮರುಕ್ಷಣಲಿ ಮಹೇಶನ ಗ್ಯಾನ ಆಗಿ ಕಣ್ಣೀರ್ ಹಾಕ್‌ತಿತ್ತ್. ಅಂತ ಸಮೇಲಿ ಅವ್ಳು ತೋಟಕ್ಕೆ ಹೋಗಿ ಕುದ್ದ್ ಕಣ್ತಿತ್ತ್.

*****

ಕಾಲಿಂಗ್ ಬೆಲ್ಲ್ ಸದ್ದಾಕನ ಶಾಲಿನಿ ಗೊಣ್ಗಿಕಂಡ್ ಹೋಗಿ ಬಾಗ್ಲ್ ತೆರ್ತ್ ಅವ್ಳಿಗೆ ಆಶ್ಚರ್ಯ ಆದರೂ ಬಾರದ ನಗೆನ ಬರ್ಸಿಕಂಡ್ ನಾಕ್ ಮಾತಾಡ್ತ್. ಬಂದಿದ್ದಂವ ಪ್ರಕಾಶ್ ಆಗಿತ್ತ್.

ಹಂಗೇ ಇಂವ ಭಾಗ್ಯನ ಕರ್ಕಂಡ್ ಹೋದೆನೊತೇಳಿ ಕುಶಿನೂ ಆತ್. ಪ್ರಶಾಂತ ಭಾಗ್ಯ – ರೇಷ್ಮ ಯಾರೂ ಮನೆಲಿ ಇತ್ತ್‌ಲೆ ಅದ್ರಂದ ಮನೆ ನಿಶಬ್ಧ ಆಗಿತ್ತ್. ಗಿರೀಶ್ ಶಾಲಿನಿನ ಹಿಂದೆ ಅಡ್ಗಿಕಂಡತ್.

ಪ್ರಕಾಶ, "ಭಾಗ್ಯ ಎಲ್ಲಿ ಕಾಂಬಲೆ" ತ ಕೇಳ್ಕನ

"ಎಲ್ಲೋ ತೋಟದ ಕಡೆ ಹೋಗಿರ್ದು ಈಗ ಬರುವ ಹೊತ್ತಾತ್" ತೇಳ್ದ ಉದಾಸೀನದ ಮಾತ್ ಕೇಳಿ ಪ್ರಕಾಶಂಗೆ ಕಸಿವಿಸಿ ಆತ್. ಚೆ, ನಾನ್ ಸ್ವಲ್ಪ ಮುಂಚೆ ಬಂದ್ ಕರ್ಕಂಡ್ ಹೋಕಾಯ್ತ್"ಂತ ಹೇಳಿಕಣ್ತ್ ಅವ್ನ ಮನ್ಸ್.

ಮನೆ ಮುಂದೆ ನಿತ್ತಿದ್ದ ಕಾರ್‌ನ ಕಂಡ್ ಭಾಗ್ಯ ಅತ್ತೆ ಮಾವ ಬಂದೊಳೊತ ತಿಳ್ದ್

ಸಂತೋಷ ಆತ್ ಓಡೋಡಿ ಮನೆಯೊಳಗೆ ಬಂದವ್ಳಿಗೆ ಪ್ರಕಾಶನ ಕಂಡ್ ಆಶ್ಚರ್ಯ ಆತ್.

ಎಷ್ಟೋ ದಿನಂದ ಅಗಲಿದ್ದ ಆತ್ಮೀಯನ ಕಂಡಂಗೆ ಅವನ ಆರೋಗ್ಯನ ವಿಚಾರ್‌ಸಿತ್

ಅತ್ತೆ ಮಾವನ ವಿಚಾರ್ಸಿತ್

ಪ್ರಕಾಶಂಗೆ ಭಾಗ್ಯ ಈಗ ಮತ್ತಷ್ಟ್ ಚೆಲುವೆಯಾಗಿ ಕಂಡತ್. ಕೊಡಗಿನ ಹವಾಮಾನಂದ ಅವಳ ಮುಕಕ್ಕೆ ಒಂದ್ ಕಳೆ ಬಂದಿತ್ತ್. ಮೈಕೈ ತುಂಬಿಕಂಡಿತ್. ಬೆಳಿಗ್ಗೆ ಸಾನ್ನ ಮಾಡಿದ್ರಂದ ಸಡ್ಲ ಆಗಿ ಹಾಕಿದ್ದ ಜಡೆ, ಅವ್ಳ ಹಿಡ್ತ ತಪ್ಪಿ ಹಾರಾಡ್‌ತಿದ್ದ ಮುಂಗುರುಳ್, ಉಟ್ಟಿದ್ದ ನಿರ್ಮಲ ಬಿಳಿಯ ವಾಯಿಲ್ ಸೀರೆ ಅವ್ಳ ಚೆಲುವುನ ಇಮ್ಮಡಿ ಮಾಡಿದ್ದೊ, ಸ್ವಲ್ಪ ಮಟಿಗಾದರೂ ಅವ್ಳ ಮಹೇಶನ ಮರ್‌ತಿರಕುತ ಪ್ರಕಾಶ ಭಾವಿಸಿತ್.

ಭಾಗ್ಯ ನಗ್‌ನಗ್‌ತ್ತಾ ಮಾತಾಡ್ತ್ ತುಂಟತನಲಿ.

"ವನಿತಾ ಏನ್ ಹೇಳ್ತ್, ಯಾಗ ನಮಿಗೆ ಊಟ ಹಾಕ್ಸುದು" ತೇಳಿ ಕಣ್ಣ್ ಮಿಟಿಕಿಸಿತ್

"ಮದ್ವೆ ಊಟ ......" ತೇಳಿ ಒಂದ್ ಗಳಿಗೆ ಭಾಗ್ಯನ ಮುಖ ನೋಡ್ದ ಪ್ರಕಾಶ

"ನಾನ್ ಊಟ ಹಾಕ್ಸುದು ನಿಮ್ಮ ಮೇಲೆ ಉಟ್ಟು, ನೀವ್ ಹೇಳ್ದಂಗೆ"

"ಓಹೋ, ನಾನ್ ರಾಯಭಾರ ಮಾಡೊಕೇನೊ ಅದ್ಕೇನ್" ಮನೆಗೆ ಹೋದಂಗೆ ಅತ್ತೆ ಮಾವನ ಒಪ್ಪಿಸ್ವ ಜವಾಬ್ದಾರಿ ನಂದ್" ತೇಳ್ತ್ ನಗಾಡಿಕಂಡ್. ಅತ್ತಿಗೆತ ಕರಿಯದು ಬ್ಯಾಡ, ಭಾಗ್ಯತ ಕರ್ದರೆ ಸಾಕ್‌ತ ಭಾಗ್ಯ ಹೇಳಿದ್ರಂದ ಪ್ರಕಾಶ ಅವಳ್ನ ಹೆಸರಿಡ್ಡೇ ಕರಿಯತಿತ್ತ್. ಅಷ್ಟೊತ್ತಿಗೆ ಪ್ರಶಾಂತ ಬರಿದ್ರಂದ ಅವ್ರ ಮಾತ್‌ಗೆ ಬ್ರೇಕ್ ಬಿತ್. ಪ್ರಶಾಂತ ಸಂತೋಷಲಿ ಪ್ರಕಾಶನ ಕೈ ಕುಲ್ಕಿ ಕ್ಷೇಮ ವಿಚಾರ್ಸಿತ್. ಪ್ರಕಾಶ ಮಾತಡ್ತಾ,

"ಅಮ್ಮಂಗೆ ಸ್ವಲ್ಪ ಹುಷಾರಿಲ್ಲೆ, ಅಪ್ಪಂಗೂ ಬಾಕೆ ಆತ್‌ಲೆ ಆದ್ರಂದ ನಾನೇ ರಜಾ ಹಾಕಿ ಭಾಗ್ಯನ ಕರ್ಕಂಡ್ ಬಾತ ಹೇಳಿ ಕಳ್ಸಿವಳೊ, ದಯವಿಟ್ಟು ಕಳ್ಸಿ ಕೊಡಿ.

ಪ್ರಶಾಂತ ಭಾಗ್ಯನ ಮುಕ ನೋಡ್ತ್. ಅಲ್ಲಿ ಹೊರ್ಡುವ ಆತುರ ಎದ್ದ್ ಕಾಂಬತಿತ್ತ್.

ಪ್ರಶಾಂತ ಒಪ್ಪಿಗೆ ಕೊಟ್ಟತ್. ಶಾಲಿನಿ ಕೋಳಿ ಸಾರ್ ನೂಪಿಟ್ಟ್, ಹಂದಿಗೈಪು ಕಡಂಬುಟ್ಟು ಪಾಯ್ಸ ಮಾಡಿತ್.

"ಮನೆ ತಲ್ಪಿದಂಗೆ ಫೋನ್ ಮಾಡ್ " ತೇಳಿ ಪ್ರಶಾಂತ ಭಾಗ್ಯನ ತಲೆ ಸವರಿ ಕಳ್ಸಿ ಕೊಟ್ಟತ್. ಅವ್ನ ಕಣ್ಣಂದ ನಾಕ್ ಹನಿ ನೀರ್ ಬೀತ್. ಬಹುಶ ಅಮ್ಮ ಇದ್ದಿದ್ದರೆ ಈ ಸ್ಥಿತಿಲಿ ಭಾಗ್ಯನ ಅತ್ತೆ ಮನೆಗೆ ಕಳ್ಸಿಕೊಡ್ತಿತ್ತಾ" ತ ಅವಂಗೆ ಆಗಿರ್ದು. ಈ ವಿಷಯಲಿ ಅವಂಗೆ ಶಾಲಿನಿನ ಸಹಕಾರ ಇತ್ತ್‌ಲೆ. ಪ್ರಶಾಂತ ಭಾಗ್ಯಂಗೆ ಸ್ವಲ್ಪ ಲೈಟ್ ಕಲರ್‌ನ ರೇಷ್ಮೆ ಸೀರೆ ಕೊಟ್ಟ್ ಕಳ್ಸಿತ್ತ್.

*******

"ಭಾಗ್ಯ ಇಂದ್ ಸಾಯಂಕಾಲ ಫಿಲ್ಮ್‌ಗೆ ಹೋಕೆ ಪ್ಲಾನ್ ಮಾಡ್ಯೊಳೆ ವನಿತ ಬಂದದೆ ನೀವ್ ಸಹ ಬರಕು, ಸಾಯಂಕಾಲ ನಾನ್ ಬಾಕನ ರೆಡಿಯಾಗಿರಿ" ತೇಳಿ ಅವ್ಳ ಉತ್ತರಕ್ಕೊ ಕಾಯದೆ ಪ್ರಕಾಶ ಹೊರ್ಟ್ಟ್ ಹೋತ್ ಡ್ಯೂಟಿಗೆ.

ಕತೆ ಪುಸ್ತಕ ಓದಿಕಂಡ್ ಕುದ್ದಿದ್ದ ಭಾಗ್ಯ ತಲೆಯೆತ್ತಿ ನೋಡ್ಕನ ಪ್ರಕಾಶ ಮೆಟ್ಲ್ ಇಳಿಯಿತಿತ್ತ್ ಅಂವ ಹೊಳ್ಪು ಕಣ್ಣ್‌ಂದ ಭಾಗ್ಯನೇ ನೋಡ್ತಿತ್ತ್.

"ಇಲ್ಲೆ ನಾನ್ ಬಾದುಲೆ .....ನೀವ್ ವನಿತ ಹೋಗಿ ಬನ್ನಿ" ತೇಳ್ತ್ ಜೋರಾಗಿ "

ಅಷ್ಟ್ ದೂರ ಹೋದಂವ ವಾಪಾಸ್ ಬಂದ್

"ಸ್ಸಾರಿ, ನಾನ್ ಆಗಲೇ ಟಿಕೆಟ್ ಬುಕ್ ಮಾಡಿ ಆಗುಟ್ಟು"

"ಅತ್ತೆನ ಕೇಳಕು"

"ಅಮ್ಮಂಗೆ ಹೇಳಿ ನಾನ್ ಆಗಲೇ ಪರ್ಮಿಷನ್ ತಗಂಡೊಳೆ ನೀವ್ ಮನೆ ಬುಟ್ಟ್ ಹೊರಗೆ ಹೋಗಿ ಬಾಳಾ ಸಮಯ ಆಗುಟ್ಟು, ಅದ್ಕೆ ಜಸ್ಟ್ ಫಾರ್ ಚೇಂಜ್ ಅಷ್ಟೆ ಹೆಂಗೂ ವನಿತಾ ಇದ್ದದೆ ರೆಡಿಯಾಗಿರಿ ಮರಿಬಡಿ" ತೇಳಿ ವಿಶ್‌ಲ್ ಹಾಕಿಕಂಡ್ ಹೊರ್ಟ್‌ಹೋತ್.

ತಾನ್ ಅವರಿಬ್ಬರ ನಡುಲಿ ಯಾಕೆ, ಅಲ್ಲದೆ ವನಿತಂಗೆ ನನ್ನ ಕಂಡ್ರೆ ಅಷ್ಟಾಗಿ ಆದುಲೆ, ಆದರೂ ಪ್ರಕಾಶನ ಆಸೆಗೆ ಭಂಗ ತಾದು ಬ್ಯಾಡತ ಸಾಯಂಕಾಲ ಹೊರ್ಡಿಕೆ ನಿರ್ಧಾರ ಮಾಡ್ತ್.

ಇಂದ್ ಅವರಿಬ್ಬರೊಟ್ಟಿಗೆ ಮಾತಾಡಿ ಆದಷ್ಟ್ ಬ್ಯಾಗ ಮದ್ವೆನ ಮಾಡಿ ಬುಡಿಕೆ ಹೇಳಕು ಅತ್ತೆಗೆ ಮನ್ಸ್‌ಲಿ ಹೇಳಿಕಣ್ತ್.

ದೂರ ದೂರ ಕೆಂಪು ಚುಕ್ಕೆ ಇದ್ದ ಬಿಳಿ ಸೀರೆ ಉಟ್ಟ್, ತನ್ನ ಉದ್ದ ಜಡೆನ ಸಡ್ಲಾಗಿ ಹೆಣ್‌ದ್ ಬೆನ್ನ್ ಹಿಂದೆ ತೂಗಿ ಬುಟ್ಟ್, ಒಮ್ಮೆ ಕನ್ನಡಿ ಮುಂದೆ ನಿತ್ತ್ ನೋಡ್ತ್. ತನ್ನ ಸೌಂದರ್ಯಕ್ಕೆ ತಾನೇ ಮೆಚ್ಚಿಕಣ್ತ್, ಮರುಕ್ಷಣಲಿ ಮುಖ ಬಾಡಿಹೋತ್ ಇನ್ನ್ ಈ ಸೌಂದರ್ಯ ಅಂದ ಚಂದ ಎಲ್ಲಾ ಕಾಡ್‌ನ ಬೆಳದಿಂಗಳಂಗೆ, ಯಾರಿಗೂ ಪ್ರಯೋಜನ ಇಲ್ಲೆ ತೇಳಿ ಮಹೇಶನ ನೆನ್ಪ್ ಕಣ್ಣ್‌ಲಿ ನೀರ್ ಬಾತ್ ಅವಳ ಎದೆ ಹಿಂಡಿದಂಗೆ ಆತ್.

ಅಷ್ಟೊತ್ತಿಗೆ ಕಾರು ನಿತ್ತ ಸದ್ದ ಕೇಳಿ ಮುಕಲಿ ಬಲಾತ್ಕಾರದ ನಗೆ ಬರ್ಸಿಕಂಡ್ ಹೊರಗೆ ಬಾತ್, ವನಿತಾ ಮತ್ತೆ ಪ್ರಕಾಶ ಒಟ್ಟಿಗೆ ಮನೆ ಮೆಟ್ಲ್ ಹತ್ತಿ ಬಾತಿದ್ದೊ. ತಾನ್ ಇವರೆಲ್ಲರ ಸುಖಕ್ಕಾಗಿಯಾದರೂ ಮಹೇಶನ ಮರಿಯಕೆ ಪ್ರಯತ್ನ ಪಡಕುತ ನೆನ್ಸಿರೂ ಅವ್ಳಗೆ ಅದ್ ಸಾದ್ಯ ಆಗಿತ್ತ್‌ಲೆ.

ಭಾಗ್ಯ ಒಳಗೆ ಹೋಗಿ ಕಾಫಿ, ಚಕ್ಕುಲಿ ಮತ್ತೆ ರವೆ ಉಂಡೆ ತಕಂಡ್ ಬಾತ್. ತಿಂಡಿ ತಿಂದ್ ಕಾಫಿ ಕುಡ್ದ್ ಹಿಡ್ದ್ ಅತ್ತೆ ಮಾವಂಗೆ ಹೇಳಿ ಭಾಗ್ಯ ಅವರೊಟ್ಟಿಗೆ ಹೊರ್ಟತ್. ವನಿತಾ ಸ್ಟೇರಿಂಗ್ ಹಿಡ್ದ್ ಕುದ್ದರೆ ಪ್ರಕಾಶ ಸಂಕೋಚ ಇಲ್ಲದೆ ಸೀದಾ ಮುಂದೆನ ಸೀಟ್‌ಲಿ

ಕುದ್ದತ್. ಭಾಗ್ಯ ಹಿಂದೆನ ಸೀಟ್ಲಿ ಕುದ್ದತ್. ಕಾರ್ ಬಿಟ್ಟ್ ಕಂಡೆ ವನಿತಾ –ಪ್ರಕಾಶ ಇಬ್ಬರೂ ಆರಾಮಾಗಿ ಮಾತಾಡಿ ಕಂಡ್ ಇದ್ದೊ. ಭಾಗ್ಯ ಮೌನವಾಗಿ ಅವರ ಮಾತ್‌ಗಳ್‌ಲಿ ಸೇರದೆ ಕಣ್ಣ್ ಮುಚ್ಚಿ ಸೀಟಿಗೆ ಒರ್ಗಿತ್ತ್.

ಪ್ರಕಾಶ ಆಗೊಮ್ಮೆ, ಈಗೊಮ್ಮೆ ಅವಳ್ನ ಮಾತಿಗೆ ಎಳಿಯಕೆ ವ್ಯರ್ಥ ಪ್ರಯತ್ನ ಮಾಡ್ತಿತ್ತ್.

ಕಾರ್ ಸಿನಿಮಾ ಥಿಯೇಟರ್ ಹತ್ರ ಬಾಕನ ಪ್ರಕಾಶ ವನಿತಂಗೆ ಕಣ್ಣ್‌ಹೊಡ್ದ್ ಎಂತೋ ಹೇಳ್ತ್ ಮೆಲ್ಲೆ. ಕಾರು ನೆಟ್ಟಗೆ ಪಾರ್ಕ ಕಡೆ ಹೊರ್ಟತ್. ಸಿನಿಮಾಕೆ ಬಂದವು ಪಾರ್ಕ್‌ಲಿ ಇಳಿಯಕನ ಭಾಗ್ಯ ಪ್ರಕಾಶನ ಮುಕ ನೋಡ್ತ್ ಇದೆಲ್ಲಾ ಎಂತತ "

"ನಾನ್ ಹೋಗಿ ಐಸ್‌ಕ್ರೀಂ ತನ್ನೆ, ನೀವಿಬ್ಬರೂ ಮಾತಾಡ್ತಾ ಇರಿ" ಪ್ರಕಾಶ ಅಲ್ಲಿಂದ ಹೊರ್ಟತ್.

ಭಾಗ್ಯಂಗೆ ಎಂತಸ ಅರ್ಥ ಆಗದೆ, ವನಿತಾನ ಮುಖ ನೋಡ್ಕನ ಅವಳ ಮುಕಲಿ ನಗೆ ಇತ್ತ್. ಅವ್ಳು ಭಾಗ್ಯ ನೊಟ್ಟಿಗೆ ಕುದ್ದಕಂಡ್ ಅವ್ಳ ಕೈ ಹಿಡ್ಕಂಡ್ ಕೇಳ್ತ್.

"ಭಾಗ್ಯ ಹ್ಯಾಗೊಳ, ನಿನ್ನ ಹೆಲ್ತ್ ಹೆಂಗುಟ್ಟು, ಏನೂ ಪ್ರಾಬ್ಲಮ್ ಇಲ್ಲೆ ತಾನೆ, ಎಂತ ಇದ್ದರೂ ನನ್ನೊಟ್ಟಿಗೆ ಹೇಳಕು, ನಾನ್ ಡಾಕ್ಟ್ರತೇಳ್ದನ ಮರಿಬ್ಯಾಡ "

" ಸರಿ ವನಿತಾ.............."

"ಭಾಗ್ಯ, ಮಹೇಶ ಹೋಗಿ ಐದು ತಿಂಗ ಕಳ್ದೋತ್, ನಿಂಗೆ ಈಗ ಆರು ತಿಂಗ ಆಗುಟ್ಟಲ್ಲ, ಸ್ವಲ್ಪ ಕೇರ್‌ಫುಲ್ ಆಗಿ ಇರ್"

ಭಾಗ್ಯ ಸುಮ್ಮನೆ ತಲೆ ಆಡ್ಸಿತ್.

"ಭಾಗ್ಯ ಇಷ್ಟ್ ಸಣ್ಣ ವಯಸ್‌ಲಿ ಹಿಂಗೇ ಎಷ್ಟ್ ದಿನ ಇರಕುತ ಗ್ಯಾನ ಮಾಡ್ಯೊಳ"

"ಅಂದರೆ, ನಾನ್ ಏನ್ ಮಾಡಿಕೆ ಆದೆ"

"ಅಲ್ಲಾ ಭಾಗ್ಯ ನೀನ್ಯಾಕೆ ಮತ್ತೆ ಮದ್ವೆ ಆಕಾದ್ ?"

"ಏನ್ ವನಿತಾ, ತಮಾಶೆ ಮಾಡ್ತಾ ವಳಾ ಈಗಿನ ಕಾಲಲಿ ಒಂದ್ ಮದ್ವೆ ಆದೇ ಕಷ್ಟ ಇನ್ನ್ ನಾನ್ ವಿಧವೆ ಅಲ್ಲದೆ, ಬಸುರಿ ಬ್ಯಾರೆ ಇಂತ ವಿಷ್ಯನ ಗ್ಯಾನಮಾಡ್ದುಸ ತಪ್ಪು"

"ಇಲ್ಲೆ ಭಾಗ್ಯ, ನೀನ್ ನನ್ನ ಒಂದ್ ಮಾತ್‌ನ ನಡ್ಸಿಕೊಡಕು ಖಂಡಿತ ಇಲ್ಲೆತ ಹೇಳಿಕಾದ್"

"ಅದ್ಕೇನ್ ಕೇಳ್ ನೊಡನ" ಭಾಗ್ಯ ಇವ್ಳು ಪ್ರಕಾಶನ ಮದ್ವೆ ಯಾಗುವ ವಿಷ್ಯದ ಬಗ್ಗೆ ಹೇಳ್ತಾ ಉಟ್ಟುತ ಗ್ಯಾನಮಾಡಿ ಹೇಳ್ತ್.

"ಇಲ್ಲೆ, ಖಂಡಿತ ನಡ್ಸಿ ಕೊಟ್ನೆತ ಪ್ರಾಮೀಸ್ ಮಾಡ್"ತೇಳಿ ಕೈ ಮುಂದೆ ಮಾಡ್ತ್. ಭಾಗ್ಯ ಅನುಮಾನಲಿ ಅವ್ಳ ಮುಕ ನೋಡ್ತ್.

"ಹೆದ್ರೂಂತ ವಿಷ್ಯ ಇಲ್ಲೆ. ಇದ್ ನಿಮ್ಮ ವಂಶ ಉದ್ಧಾರದ ಪ್ರಶ್ನೆ "ವನಿತ ಹೇಳ್ಕನ ಭಾಗ್ಯ ನಿಧಾನಲಿ ಅವ್ಳ ಕೈಲಿ ತನ್ನ ಕೈಇಟ್ಟ್ ಪ್ರಾಮಿಸ್ ಮಾಡ್ತ್.

" ನೋಡ್ ಪ್ರಾಮಿಸ್ ಮಾಡ್ಯೊಳ, ಯಾವ ಕಾರಣಕ್ಕೂ ಕೊಟ್ಟ ಮಾತಿಗೆ ತಪ್ಪಿಕಾದ್"

" ಸರಿ........." ಭಾಗ್ಯ ಹೇಳ್ತ್

"ನೋಡ್ ನೀನ್ ಪ್ರಕಾಶನ ಮದ್ವೆ ಆಕು "

"ಏನ್ .....ನಾನ್ .......ಪ್ರಕಾಶನ್ನ ಮದುವೆ ........ನೀನ್ ಏನೂತ ಹೇಳ್ತಾ ವಳ ಈ ರೀತಿ ತಮಾಶೆ ಮಾಡ್ತಿಕಣ್‌ವ ಸ್ಥಿತಿಲಿ ನಾನ್ ಇಲ್ಲೆ. ನಾನ್ ವಿಧವೆ, ಅಲ್ಲದೆ ಅವ್ರ ಅತ್ತಿಗೆ ಸ್ಥಾನಲಿ ಇರೋವಳು, ಇದ್ ಖಂಡಿತ ಸಾಧ್ಯ ಇಲ್ಲೆ, ಕಾಲೇಜ್‌ಲಿ ನಾವ್ ಲಾಯ್ಕ ಇದ್ದದೇನೋ ನಿಜ, ಹಂಗೆತ ನಾನ್ ಈಗ ಅದ್ನ ಗ್ಯಾನ ಮಾಡ್ದು ತಪ್ಪು" ಒಂದೇ ಉಸ್‌ರಿಗೆ ಹೇಳ್ತ್ ಭಾಗ್ಯ, ಅವ್ಳಿಗೆ ಕಣ್ಣ್ ಕತ್ತಲೆ ಬಂದಂಗೆ ಆತ್

ವನಿತ ಅವ್ಳು ಚೇತರಿಸಿಕಣೊವರೆಗೆ ಒಂದ್ ಕ್ಷಣ ಸುಮ್ಮನೆ ಇತ್ತ್.

"ಭಾಗ್ಯ ಪ್ರಾಮಿಸ್ ಮಾಡ್ಯೊಳ. ಅಲ್ಲದೆ, ಭಾಗ್ಯ ನಾನ್ ನಿಂಗೆ ಒಂದ್ ವಿಷ್ಯ ಹೇಳಕು ಪ್ರಕಾಂಶಂಗೆ ಆಕ್ಸಿಡೆಂಟ್ ಆಗಿರ್ಕನ ಅವಂಗೆ ಬಾಳಾ ಪೆಟ್ಟ್ ಆಗುಟ್ಟು ಅವಂಗೆ ಮಕ್ಕ ಆಕೆ ಸಾಧ್ಯ ಇಲ್ಲೆತ ಅವಂಗೆ ಆಪರೇಶನ ಮಾಡ್‌ದ ಸರ್ಜನ್ ಹೇಳಿಟ್ಟು. ನಿನ್ನ ಕೂಸ್ ಅಪ್ಪ ಇಲ್ಲದ ತಬ್ಬಲಿ ಯಾಕೆ ಆದು. ನೀನ್ ಪ್ರಕಾಶನ ಮದ್ವೆ ಆದರೆ ಅದ್ರಂದ ನಿಮ್ಮ ವಂಶ ಉದ್ಧಾರ ಆದೆ. ನಿನ್ನ ಕೂಸಿಗೆ ಅಪ್ಪನ ದೊರ್‍ಕಿಸಿ ಕೊಟ್ಟ ಪುಣ್ಯ ಸಿಕ್ಕಿದೆ. ಅಲ್ಲದೆ, ಇಷ್ಟ್ ಸಣ್ಣ ವಯಸ್‌ಲಿ ನೀನ್ ಈ ಸಮಾಜನ ಎದುರ್‍ನಿ ಒಂಟಿಯಾಗಿ ಬಾಳಿಕೆ ಖಂಡಿತಾ ಸಾಧ್ಯ ಇಲ್ಲೆ"

"ನಾನ್ ಹಿಂಗೆ ಹೇಳ್ನೆತ ತಪ್ಪು ತಿಳಿಬಡ, ಭಾಗ್ಯ ನೀನ್ ನನ್ನ ವಿಷ್ಯಲಿ ತಪ್ಪು ತಿಳ್ದಿರ್‍ವ ಈ ಕೆಲ್ಸನ ಪ್ರಕಾಶನೇ ನಂಗೆ ವಹ್ಸಿದ್. ಅವಂಗೆ ನಿನ್ನೊಟ್ಟಿಗೆ ನೆಟ್ಟಗೆ ಕೇಳಿಕೆ ಸಂಕೋಚ, ಅಲ್ಲದೆ ನಿನ್ನ ಮನಸ್ಥಿತಿನ ಅವಂಗೆ ಅರ್ಥ ಮಾಡಿಕಣಿಕೆ ಸಾಧ್ಯ ಇಲ್ಲೆ "

ಭಾಗ್ಯ ಕಲ್ಲಾಗಿ ಕುದ್ದಿತ್ತ್. ಅವ್ಳ ಬಾಯಿಂದ ಮಾತೇ ಹೊರ್‍ಟತ್‌ಲೆ ಕಡೆಗೆ ಮೆಲ್ಲೆ ಕೇಳ್ತ್. "ವನಿತಾ ನೀನೇ ಯಾಕೆ ಪ್ರಕಾಶನ ಮದ್ವೆ ಆಕಾದ್?"

"ವನಿತಾ ಜೋರ್ ನಗಾಡಿಕೆ ಶುರುಮಾಡ್ತ್

"ಭಾಗ್ಯ ನನ್ನ ಮದ್ವೆ ಆಗಿ ಒಂದ್ ವರ್ಷ ಆತ್. ಪ್ರಕಾಶನ ಫ್ರೆಂಡೇ ನನ್ನ ಗಂಡ ನೀನೂ ನೋಡಿರಕು ಪ್ರವೀಣ್‌ತ ಪ್ರಕಾಶನೊಟ್ಟಿಗೆ ನಿಮ್ಮ ಮನೆಗೂ ಬಂದಿರ್ದ "

ಭಾಗ್ಯ ತನ್ನ ಅವಿವೇಕಕ್ಕೆ ನಾಲಿಗೆ ಕಚ್ಚಿಕಂಡ್"ಸಾರಿ ವನಿತಾ " ತೇಳ್ತ್

ಅಷ್ಟೊತ್ತಿಗೆ ಪ್ರಕಾಶ ಕೈಲಿ ಐಸ್‌ಕ್ರೀಂ ಕೋನ್‌ಗಳ್ನ ಮತ್ತೆ ಚಿಪ್ಸ್ ಪ್ಯಾಕೆಟ್‌ಗಳನ್ನ ತಕಂಡ್ ಬಾತ್.

ಭಾಗ್ಯ ತಲೆ ತಗ್ಗಿಸಿ ಕುದ್ದಿತ್ತ್. ಪ್ರಕಾಶನ ಮನಸ್ಥಿತಿ ಅವನ ತಳಮಳನ ಅವನ ಮುಕ ಹೇಳ್ತಿತ್ತ್. ವನಿತನ ಮುಕ ನೋಡ್ತ್ ಏನಾತ್'ತೇಳ್ವಂಗೆ. ವನಿತ ಕಣ್ಣ್ ಮಿಟಿಕಿಸಿ, ಹೆಬ್ಬೆಟ್ಟ್ ಮೇಲೆ ಎತ್ತಿ ತೋರ್ಸ್ತ್. 'ಸಕ್ಸಸ್'ತೇಳ್ವಂಗೆ.

ಭಾಗ್ಯ ಐಸ್‌ಕ್ರೀಂ ಮಾತ್ರ ತಕಂಡ್ ಗಂಭೀರಂದ ಎದ್ದ್ ಕಾರ್ ಹತ್ರ ಹೋತ್. ಇಬ್ಬರೂ ಮುಕ ಮುಕ ನೋಡಿಕಂಡ್ ಸುಮ್ಮನೆ ಅವ್ಳ ಹಿಂದೆ ಹೋದೊ. ಅವ್ಳ ಮನ್ಸ್‌ಲಿ ಕುರುಕ್ಷೇತ್ರ ಯುದ್ಧ ನಡಿಯತ್ತಿತ್ತ್. ಅತ್ತೆನ ಬಲವಂತಕ್ಕೆ ಒಂದೆರಡು ತುತ್ತು ತಿಂದ ಶಾಸ್ತ್ರ ಮಾಡಿ ತಲೆಬ್ಯಾನೆತೇಳಿ, ರೂಮ್ ಸೇರಿಕಂಡ್ ಹಾಸಿಗೆಲಿ ಮಲ್ಗಿ ಮನ್ಸ್ ಹಗುರ ಆಗ್ವವರೆಗೆ ಮರ್ಗತ್. "ತನ್ನದ್ ಇದ್ ಎಂತಾ ಬಾಳ್ ಆಗೋತು ಮಹೇಶ ನೀನ್ ನನ್ನ ಯಾಕೆ ಬುಟ್ಟ್ ಹೋದ" ಅವ್ಳ ಮನ್ಸ್ ಚೀರಿ ಚೀರಿ ಹೇಳ್ತ್ ಅವ್ಳು ಯಾರ ಮುಕಾನು ನೋಡ್ವ ಸಾಹಸ ಮಾಡ್ತ್‌ಲೆ.

ಮಾರನೇ ದಿನ ಬೆಳಿಗ್ಗೆ ಏಳ್ಕನ ಹಿಂದೆನ ದಿನದ ಮಾತ್‌ನ ಪರಿಣಾಮ ಅವ್ಳ ಮುಕಲಿ ಎದ್ದ್ ಕಾಂಬತಿತ್ತ್. ರಾತ್ರಿಯಿಡೀ ಹೊರ್ಳಾಡಿ ಬೆಳಗಾಕನ ಅವ್ಳಗೆ ನಿದ್ದೆ ಹತ್ತಿತ್ತ್ ಎದ್ದ್ ನೋಡ್ಕನ ಗಂಟೆ ಎಂಟಾಗಿತ್ತ್.

ಗಾಬರಿಂದ ದಡಬಡತ ಎದ್ದ್ ಅಡ್ಗೆಮನೆಗೆ ಹೋಕನ ಪ್ರಕಾಶ ಅಡ್ಗೆಮನೆಲೇ ಕುದ್ದುಕಂಡ್ ಕಾಫಿ ಹೀರ್‌ತಿತ್ತ್.

"ಎದ್ದ್ ಬುಟ್ಯಾ, ಸ್ವಲ್ಪ ಮಲ್ಗಲೀತ ನಾನೇ ಏಳ್ಸಿತ್‌ಲೆ" ತೇಳ್ದೊ ಸೀತಮ್ಮ ನಗಾಡಿಕಂಡ್, ಅವ್ರ ಮುಕಲಿ ಎಂತದೋ ಸಂತೋಷ ಇತ್ತ್.

ಬೆಳಿಗ್ಗೆ ತಿಂಡಿ ತಿಂದ್ ಪ್ರಕಾಶ್ ಡ್ಯೂಟಿಗೆ, ಸೋಮಯ್ಯನವು ಲೈಬ್ರರಿಗೆ ಹೋದ ಮ್ಯಾಲೆ ಸೀತಮ್ಮ ಭಾಗ್ಯನ ಕರ್ದ್ ಸೋಪಲಿ ತಮ್ಮ ಒಟ್ಟಿಗೆ ಕೂರ್ಸಿಕಂಡೊ.

ಅವ್ಳ ಬೆನ್ನ್ ತಲೆ ಸವ್ರಿ.

"ಭಾಗ್ಯ ನೀನ್ ನಮ್ಮ ಮನೆನ ಭಾಗ್ಯ ಲಕ್ಷ್ಮಿ ಅವ್ವ, ನಿನ್ನಿಂದಲೇ ಈ ಮನೆನ ಅಳಿವು ಉಳಿವು ಉಟ್ಟು ಈ ಸ್ಥಿತಿಲಿ ಈ ಮಾತ್ ಕೇಳ್ನೆತ ಗ್ಯಾನ ಮಾಡ್ಬಡ ವನಿತ ನಿಂಗೆ ಹೇಳ್ಯುಟ್ಟಲ್ಲ, ಖಂಡಿತ ನಡ್ಸಿ ಕೊಡವ್ವ ಪ್ರಕಾಶ ನಂಗೆ ನಿಮ್ಮ ಕಾಲೇಜ್ ವಿಷ್ಯನೆಲ್ಲಾ ಹೇಳಿಟ್ಟು ದೇವರ ಆಟನ ಯಾರಿಗೂ ಬದ್ಲಿಸಿಕೆ ಆದುಲೆ"

ಮಹೇಶನ ಕಳ್ಕಂಡೊ. ಇನ್ನ್ ಇರ್ವ ಒಬ್ಬ ಮಂಜ ನಾದ್ರ್ ಉಳ್ಸುವ ಕೆಲ್ಸ ನಿನ್ನ ಕೈಲುಟ್ಟು, ಅಂವ ನಿನ್ನ ಬುಟ್ಟ್ ಬ್ಯಾರೇ ಯಾರ್ನೂ ಮದ್ವೆ ಆದುಲೆತ ಹೇಳಿಟ್ಟು, ಅಲ್ಲದೆ, ಅಂವ ಮದ್ವೆ ಆದರೂ ಅವಂಗೆ ಮಕ್ಕ ಆದುಲೆ ತೇಳ್ವ ಸತ್ಯ ನಂಗೆ ಗೊತ್ತುಟ್ಟು" ತೇಳೀ ಕಣ್ಣ್‌ಲಿ ನೀರ್ ಹಾಕಿದೊ.

ಭಾಗ್ಯ ಅವರ ಮುಕನೇ ದಿಟ್ಟಿಸಿ ನೋಡ್ತ್, ಇದ್ ತನ್ನ ಬುಟ್ಟ್ ಉಳ್ದವೆಲ್ಲಾ ಸೇರಿ



6

ನಡ್ಸಿದ ನಾಟಕ ನಂಗೆ ಮಾತ್ರ ಯಾವ್ದೂ ಗೊತ್ತೇ ಆತ್‌ಲೆ.

ಸೀತಮ್ಮ ಮತ್ತೆ ಹೇಳ್ತ್,

"ನೀನ್ ಈಗಲೇ ಏನಾರ ಹೇಳ್‌ತ ಹೇಳ್ದುಲೆ, ಸ್ವಲ್ಪ ಸಮಯ ತಕಂಡ್ ಗ್ಯಾನ ಮಾಡ್ ವರ್ಷದೊಳಗೆ ಆದರೆ ಮಹೇಶನ ಆತ್ಮಕ್ಕೆ ಶಾಂತಿ ಸಿಕ್ಕಿದೆ ನಿನ್ನ ಹೆರಿಗೆ ಆಗಲಿ ಮತ್ತೆ ಮದ್ವೆ ಇಟ್ಕೊಣ"

"ಖಂಡಿತ ಅಷ್ಟ್ ದೊಡ್ಡ ಮಾತಾಡ್ಬೇಡಿ ಅತ್ತೆ" ತೇಳಿ ಭಾಗ್ಯ ಅವರ ಮಡ್ಲ್‌ಲಿ ಮುಕ ಇಟ್ಟ್ ಬಿಕ್ಕಿತ್.

ಮಾರನೇ ದಿನ ಪ್ರಶಾಂತ ಬಾತ್. ಅವನ ಕಂಡ್ ಭಾಗ್ಯಂಗೆ ಆಶ್ಚರ್ಯ ಆತ್.

"ಅಣ್ಣಾ, ಏನ್ ಹೇಳದೆ ಕೇಳದೆ ಬಂದುಬುಟ್ತೊಳ. ಒಂದ್ ಫೋನ್ ಮಾಡಿಕೆ ಆತ್‌ಲೆನ" ತೇಳಿ ಅವನ ತಬ್ಬಿಕಂಡತ್.

"ಅತ್ತಿಗೆ ಮತ್ತೆ ರೇಷ್ಮನ ಕರ್ಕಂಡ್ ಬರಕಾಯ್ತ್ "

"ನಾನ್ ಸಡನ್ ಆಗಿ ಹೊರ್ಟ್ ಬುಟ್ಟೆ ಅಲ್ಲಾ ಅದ್ಕೆ ಕೆಲ್ಸ ಎಲ್ಲಾ ಹಂಗೆ ಉಟ್ಟು ಆಳುಗಳುಗೆ ಬೇರೆ ಬಾಕೆ ಹೇಳಿ ಬುಟ್ಟಿದ್ದೆ, ಇನ್ನೊಮ್ಮೆ ಕರ್ಕಂಡ್ ಬನ್ನೆ ಆತಾ"

"ಸರಿ ಅಣ್ಣ, ಬಾ ಒಳಗೆ"

ಅಣ್ಣ ಬಂದಕುಶಿ ಭಾಗ್ಯ ಅಡ್ಗೆ ಮನೆಗೆ ಓಡ್ತ್, ಅಡ್ಗೆಯವಂಗೆ ಸ್ಪೆಷಲ್ ಅಡ್ಗೆ ಮಾಡಿಕೆ ಹೇಳಿ ಕಾಫಿ ತಿಂಡಿ ತಕಂಡ್ ಬಾತ್.

"ಸ್ವಲ್ಪ ಮೆಲ್ಲೆ ಓಡಾಡ್ ಭಾಗ್ಯ, ಎಡ್‌ಗಿ ಬಿದ್ದ್ ಬುಟ್ರೆ ಕಷ್ಟ

"ಭಾವ ನೀವ್ ಬಂದ ಮೇಲೆ ಭಾಗ್ಯಂಗೆ ರೆಕ್ಕೆ ಬಂದಂ ಗೆ ಆಗುಟ್ಟು"ತ ಪ್ರಕಾಶ್ ನಗಾಡ್ತ್;

ರಾತ್ರಿ ಊಟಕ್ಕೆ ಗದ್ದಳ ಇತ್ತ್, ಎಲ್ಲರ್ದೂ ಊಟ ಆದ ಮೇಲೆ

ಪ್ರಶಾಂತಂಗೆ ಅವಳ ರೂಮ್‌ನ ಪಕ್ಕಲೇ ಇದ್ದ ಗೆಸ್ಟ್ ರೂಮ್‌ಲಿ ಎಲ್ಲಾ ರೆಡಿ ಮಾಡಿತ್ತ್ ಭಾಗ್ಯ. ಅಣ್ಣನೊಟ್ಟಿಗೆ ಎಷ್ಟ್ ಮಾತಾಡ್‌ರೂ ಅವ್ಳಿಗೆ ತೃಪ್ತಿ ಇತ್ತ್‌ಲೆ. ಅವ್ರ ಮಾತ್ ಅವು ಸಣ್ಣವರಿರ್ಕನ ಆಡ್ದ ಆಟಂದ ಹಿಡ್ದ್ ಅಪ್ಪ ಅಮ್ಮನ ಕಳ್ಕಂಡಿದ್ ಮತ್ತೆ ಮಹೇಶನವರೆಗೆ ಬಂದ್ ನಿತ್ತತ್, ಕುಶಿಂದ ಮಾತಾಡಿಕಂಡಿದ್ದ ಭಾಗ್ಯನ ಮುಕ ಬಾಡಿಹೋತ್ ಅವ್ಳ ಕಣ್ಣ್‌ಂದ ನಾಕ್ ಹನಿ ನೀರ್ ಉರುಳಿತ್.

"ಚೆ ನಾನ್ ಮಹೇಶನ ವಿಷ್ಯ ತೆಗ್ದ್ ತಪ್ಪು ಮಾಡ್ದೆ, ನೀನ್ ಹೋಗಿ ಮಲ್ಗ್ ಬೆಳಿಗ್ಗೆ ಮಾತಾಡನ ಹೋಗಿ ರೆಸ್ಟ್ ತಕ " ಅವಳ್ನ ರೋಮಿಗೆ ಕಳ್ಸಿತ್ .

ಮಲ್ಗಿ ಸ್ವಲ್ಪ ಹೊತ್ತಿಗೆಲ್ಲಾ ಅವ್ಳಿಗೆ ನಿದ್ದೆ ಹತ್ತಿತ್

ಬೆಳಿಗ್ಗೆ ಬೇಗ ಎದ್ದ್ ಅಣ್ಣಂಗೆ ಅಕ್ಕಿರೊಟ್ಟಿ, ಕಾಯಿಪಜ್ಜಿ ಮಾಡ್ಸಿತ್.

ತಿಂಡಿ ತಿಂದ ಮ್ಯಾಲೆ ಪ್ರಶಾಂತ,

"ಭಾಗ್ಯ ನಾವ್ ಸ್ವಲ್ಪ ಹೊರಗೆ ಹೋಗಿ ಬರೋನ ಬಂದಿಯಾ " ಹೇಳ್ತ್

"ಸರಿ ಅಣ್ಣ ಈಗ ರೆಡಿ ಆಗಿ ಬನ್ನೆ "ತೇಳಿ ರೂಮಿಗೆ ಹೋತ್ ಭಾಗ್ಯ. ಅತ್ತೆ ಮಾವಂಗೆ ಹೇಳಿ ಭಾಗ್ಯ ಅಣ್ಣನೊಟ್ಟಿಗೆ ಹೊರ್ಟ್ತ್.

"ಆಲ್‌ದಬೆಸ್ಟ್" ತೇಳ್ತ್ ಪ್ರಕಾಶ

ಭಾಗ್ಯ ಒಮ್ಮೆ ಅವ್ನ ಮುಕ ನೋಡ್ತ್, ಅಲ್ಲಿ ತುಂಟನಗೆ ಇತ್ತ್.

ಪ್ರಶಾಂತ ಭಾಗ್ಯನ ಕರ್‍ಕಂಡ್ ಪಾರ್ಕ್‌ಗೆ ಹೋತ್

"ಅಣ್ಣ ಇದೇನ್ ಪಾರ್ಕ್‌ಗೆ ಕರ್‍ಕಂಡ್ ಬಂದೊಳ, ನಾನೇನೊ ನೀನ್ ನನ್ನ ಶಾಪಿಂಗ್‌ಗೆ ಕರ್‍ಕಂಡ್ ಹೋದಿಯಾತ ಗ್ಯಾನ ಮಾಡ್ದೆ.

"ಬಾ ನಿನ್ನ ಹತ್ರ ಸ್ವಲ್ಪ ಮಾತಾಡೊಕು, ಮತ್ತೆ ಶಾಪಿಂಗ್‌ಗೆ ಹೋಗಿ ನಿಂಗೆ ಎಂತ ಬೇಕ್ ಕೊಡ್ಸಿನೆ"

"ಸರಿ ಅಣ್ಣಾ ........................"

ಇಬ್ಬರೂ ನೆರಳ್ ಇರ್‍ವ ಜಾಗಲಿ ಮರದ ಕೆಳಗೆ ಕುದ್ದೊ.

"ಭಾಗ್ಯ, ಈಗ ಹೇಳ್ ನೀನ್ ಹೆಂಗೊಳ, ಕುಶಿಯಾಗಿ ವಳೊನ "

"ಅಣ್ಣಾ, ನೀನ್ ನನ್ನ ಕುಶಿಯಾಗೊಳಾತ ಕೇಳಿಯಲ್ಲಾ, ನನ್ನ ಕುಶಿಯೆಲ್ಲ ಮಹೇಶನೊಟ್ಟಿಗೆ ಹೊರ್‍ಟ್ ಹೋತ್ "

"ಭಾಗ್ಯ ನೋಡ್ ಅದೇ ವಿಷ್ಯಕ್ಕೆ ನಾನ್ ಬಂದದ್, ಪ್ರಕಾಶನೂ ಅತ್ತೆನೂ, ಮಾವನೂ ಎಲ್ಲಾ ವಿಷ್ಯ ತಿಳ್ಸಿದೊ, ನಂಗೆ ಬಾಳಾ ಪುಶಿ ಆತ್, ನೀನ್ ಜೀವಮಾನಯೆಲ್ಲಾ ಹೆಂಗೆ ಕಳ್ದಿಯಾಪ್ಪತ ಬಾಳ ದುಕ್ಕ ಇತ್ತ್ ನಂಗೆ"

"ಅಣ್ಣ ನಿಂಗೂ ಹೇಳಿ ಬುಟ್ಟೊನಾ "

"ಹೌದು, ಭಾಗ್ಯ ಅವು ಹೇಳ್ದನೆಲ್ಲಾ ಕೇಳ್ದ ಮೇಲೆ ಅವು ಹೇಳುತಿರ್‍ದು ಸರಿತ ನಂಗೆ ಅನ್ಸಿತ್, ನಿಂಗೆ ಇನ್ನೂ ಸಣ್ಣ ವಯ್ಸ್ ಈ ಸಣ್ಣ ವಯ್ಸ್‌ಲಿ ಸಣ್ಣ ಕೂಸುನ ಬೇರೆ ಕಟ್ಟಿಕಂಡ್ ನಿಂಗೆ ಬಾಳಿಕೆ ಸಾಧ್ಯನಾ "

ಭಾಗ್ಯ ತಲೆ ತಗ್ಗಿಸಿ ಕುದ್ದಿತ್ತ್.

ಪ್ರಶಾಂತ ಮತ್ತೆ ಹೇಳ್ತ್

"ನಿನ್ನ ಕಾಲೇಜ್ ಫ್ರೆಂಡ್ ಸೂರ್ಯನೇ ಈ ಪ್ರಕಾಶ್‌ತ ಗೊತ್ತಾತ್. ದೇವ್ರು ಮತ್ತೆ ನಿಂಗೆ ಒಂದ್ ಅವಕಾಶ ಕೊಡ್ತಾ ಉಟ್ಟು, ಪ್ಲೀಸ್ ಆದುಲೇತ ಹೇಳ್ಬಡ "

ಭಾಗ್ಯನ ಮನ್ಸ್‌ನ ತಕ್ಕಡಿ ತೂಗ್‌ತ್ತಿತ್ತ್. ಒಂದ್ ಕಡೆ ಮಹೇಶ ಇನ್ನೊಂದ್ ಕಡೆ ಪ್ರಕಾಶ.

ಯಾವ ನಿರ್ಧಾರಕ್ಕೆ ಬಾಕೆನೂ ಆತ್‌ಲೆ ಅವ್ಳಿಗೆ,

"ಅಣ್ಣ ನಂಗೆ ಸ್ವಲ್ಪ ಟೈಮ್ ಬೇಕ್. ನಾನ್ ಗ್ಯಾನ ಮಾಡ್ನೆ ಅಣ್ಣ "

"ಸರಿ ಭಾಗ್ಯ ನಿಧಾನಲಿ ಗ್ಯಾನ ಮಾಡ್, ಇದ್ ನಿನ್ನ ಬದ್‌ಕ್‌ನ ಪ್ರಶ್ನೆ, ಅದೃಷ್ಟ ಜೀವನಲಿ ಒಮ್ಮೆ ಮಾತ್ರ ಬಾಗ್ಲ್ ತಟ್ಟಿದೆ ಅಂತೆ, ಅದ್ ಮತ್ತೆ ಮತ್ತೆ ಬಾದುಲೆ, ನಿಂಗೆ ಈಗ ಅಂತ ಒಂದು ಅವ್ಕಾಶ ಬಂದುಟ್ಟು, ಸರಿಯಾಗಿ ಉಪಯೋಗಿಸಿಕ ಇಷ್ಟೇ ನಾನ್ ಹೇಳ್ದು"

"ಅಣ್ಣ ಇನ್ನ್ ಹೊರ್ಡ್ನೊನಾ, ಮನೆಗೆ ಪೋಯಿ"

"ಸರಿ, ನಿನ್ನ ಮನೆಗೆ ಬುಟ್ಟು ನಾನ್ ಹೊರ್ಟನೆ "

"ಅಣ್ಣ ಒಂದೆರಡು ದಿನಾ ಆದರೂ ಇದ್ದ್ ಹೋಗಣ್ಣ "

"ಇಲ್ಲೆಮ್ಮಾ, ನೀನ್ ವಳ್ಳ ಸುದ್ದಿ ತಿಳ್ಸ್ ಆಗ ನಾನ್ ಅತ್ತಿಗೆ ಎಲ್ಲವು ಬಂದ್ ನಾಕ್ ದಿನ ಇದ್ದ್ ಹೋದವೆ"

*****

ಭಾಗ್ಯ _ಪ್ರಕಾಶ ಈಗ ಕುಶಿಲಿ ಇರ್ತಿದ್ದೊ ಪ್ರಕಾಶನೇ ಅವಳ್ನ ಚೆಕ್‌ಅಪ್‌ಗೆ ಕರ್ಕಂಡ್ ಹೋಗ್ತಿತ್ತ್. ಭಾಗ್ಯ ಈಗ ಸ್ವಲ್ಪ ಗೆಲುವಾಗಿತ್ತ್. ಆದರೂ ಮನ್ಸೊಳಗೆ ಮಹೇಶ ಆಗಾಗ ಕಾಡ್ತಿತ್ತ್. ತಾನ್ ಮಾಡ್ತಾ ಇರುದು ಸರಿನಾ ತಪ್ಪುನಾ ತೇಳ್ವ ಮನೋಭಾವ ಕಾಡ್ತಿತ್.

ತಾನ್ ಈಗಿರುವ ಪರಿಸ್ಥಿತಿಲಿ ತನಿಗೊಂದು ಆಸರೆ ಬೇಕ್‌ತ ಅನ್ಸಿತ್ತ್.

ಹಂಗೇ ಗ್ಯಾನ ಮಾಡಿಕಂಡ್ ಮಹೇಶನ ಪೋಟೋದ ಮುಂದೆ ನಿತ್ತ್‌ಕಂಡಿತ್ 'ನೀನ್ ಪ್ರಕಾಶ ಸುಖವಾಗಿರಿ' ತೇಳ್ದಂಗೆ ಆತ್.

ಭಾಗ್ಯ ಬಸ್ರಿ ಇದ್ರಂದ ಈ ಸಮೆಲಿ ಶುಭ ಕಾರ್ಯ ಮಾಡ್ದು ಶಾಸ್ತ್ರ ಸಮ್ಮತ ಅಲ್ಲ ತೇಳ್ವ ಕಾರಣಕ್ಕೆ ಅವ್ಳ ಹೆರಿಗೆ ಆದ ಮೇಲೆ ಮದ್ವೆ ಮಾಡ್ದುತ ಮನೆಯವು ತೀರ್ಮಾನ ಮಾಡ್ದೊ.

ಭಾಗ್ಯಂಗೆ ಏಳ್ ತಿಂಗ ತುಂಬಿತ್ತ್ ಪ್ರಕಾಶನೇ ಅವಳ್ನ ಕರ್ಕಂಡ್ ಚೆಕ್‌ಅಪ್‌ಗೆ ಹೋಗಿ ಬರ್ತಿತ್ತ್ .

ಅವ್ಳಿಗೆ ಮಾತ್ರೆ ಟಾನಿಕ್ ತಂದ್ ಕೊಡ್ತಿತ್ತ್. ಸೀತಮ್ಮ ಹೊತ್ತ್ ಹೊತ್ತಿಗೆ ಸರಿಯಾಗಿ ಅವ್ಳಿಗೆ ಊಟ ಮಾಡ್ಸಿ ಮಾತ್ರೆ ಟಾನಿಕ್ ಕೊಡ್ತಿದ್ದೊ, ಪ್ರಕಾಶ ಹೊರಗೆ ಹೋಗಿ ಬಾಕನೆಲ್ಲಾ ತರತರದ ಹಣ್ಣ್ ತಕಂಡ್ ಬರ್ತಿತ್.

ಪ್ರಕಾಶ ಅವಳ್ನ ಕಣ್ಣ್‌ಲಿ ಕಣ್ಣಿಟ್ಟ್ ನೊಡಿ ಕಂಬತಿತ್ತ್, ಆದರೆ ಭಾಗ್ಯನ ಮನಸ್ಥಿತಿ ಇನ್ನೂ ಡೋಲಾಯಮಾನ ಆಗಿತ್ತ್. ಅತ್ತ ಮಹೇಶನ ಮರಿಯಕೆ ಆಗದೆ ಇತ್ತ ಪ್ರಕಾಶ ಒಪ್ಪಿಕಣಿಕೆ ಆಗದೆ ಅವ್ಳು ಒದ್ದಾಡ್‌ತಿತ್ತ್. ಈಗ ದಿನಾ ಮನೆಗೆ ಒಬ್ಬ ಅಲ್ಲದಿದ್ರೆ ಇನ್ನೊಬ್ಬ ತೇಳಿ ನೆಂಟ್ರ್‌ಗ ಬಸ್ರಿನ ನೋಡಿಕೆ ಬುತ್ತಿ ತಕಂಡ್ ಬಾತಿದ್ದೊ.

ದಿನ ತುಂಬಿದಂಗೆ ಭಾಗ್ಯ ಮೈಕೈ ತುಂಬಿಕಂಡ್ ಲಾಯ್‌ಕ ಕಾಂಬತಿತ್ ಸೀತಮ್ಮನವು ಅವ್ಳ ಹೆರಿಗೆ ಬೇಕಾದ ವಸ್ತುಗಳನೆಲ್ಲಾ ಜೋಡ್ಸಿಕಂಡಿದ್ದೊ.

ಅವ್ಳಿಗೆ ಬೇಕಾದ ಬಟ್ಟೆ, ಕೂಸಿಗೆ ಬೇಕಾದ ಬಟ್ಟೆ, ಬೇಬಿ ಸೋಪ್, ಬೇಬಿ ಪೌಡರ್, ಹಗ್ಗೀಸ್ ಎಲ್ಲ ಜೋಡ್ಸಿ ಬ್ಯಾಗಿಗೆ ಹಾಕಿ ಇಟ್ಟ್‌ಕಂಡಿದ್ದೊ, ಅವ್ಕೆ ಭಾಗ್ಯ ಸೊಸೆ ತೇಳ್ದು ಮರ್‍ತ್ ಹೋಗಿತ್ತ್, ಅವ್ಳು ಅವ್ಕೆ ಮಗಳೇ ಆಗಿ ಹೋಗಿತ್ತ್, ಅಮ್ಮ ಇಲ್ಲೆ ತೇಳ್ದು ಭಾಗ್ಯಂಗೂ ಮರ್‍ತ್ ಹೋಗಿತ್ತ್ . ಅದಕ್ಕೆ ಹೇಳ್ದು ಹೆಣ್ಣ್ ಮಕ್ಕಳಿಗೆ ಇಬ್ಬರು ಅಮ್ಮಂದರ್‌ತ ಒಬ್ಬಳು ಹೆತ್ತ ಅಮ್ಮ ಇನ್ನೊಬ್ಬಳು ಅಮ್ಮನ ಸ್ಥಾನದಲ್ಲಿರ್ವ ಅತ್ತೆ. ಅತ್ತೆ ಸೊಸೆಯಂದ್‌ರ್ ಇದ್ನ ತಿಳ್ಕಂಡ್ ಬುಟ್ರೆ ಲೋಕಲಿ ಅತ್ತೆ ಸೊಸೆ ಜಗ್ಳ ತೇಳ್ದು ಇರ್ದುಲೆ.

ಅಂದ್ ಬೆಳಿಗ್ಗೆ ಏಳ್‌ಕನೆ ಭಾಗ್ಯಂಗೆ ಸೊಂಟ ಬೇನೆ ಸ್ವಲ್ಪ ಇತ್ತ್, ಸೀತಮ್ಮಂಗೆ ಗೊತ್ತಾತ್ ಇದ್ ಹೆರಿಗೆ ಬೇನೆತ, ಅವು ಪ್ರಕಾಶನ ಕರ್‍ದೊ, " ಇಂದ್ ನೀನ್ ರಜಾ ಹಾಕ್, ಭಾಗ್ಯಂಗೆ ಹೆರಿಗೆ ಆಗ್ವಂಗೆ ಉಟ್ಟು"

"ಸರಿ ಅಮ್ಮ, ನಾನ್ ಬೇಗ ರೆಡಿಯಾಗಿ ಕಾರ್ ತೆಗ್ದನೆ, ನೀನ್ ಭಾಗ್ಯನ ರೆಡಿ ಮಾಡ್, ಡಾಕ್ಟರಿಗೆ  ತೋರ್‍ಸಿ ಬರನ"

ಸೀತಮ್ಮ ಭಾಗ್ಯನ ಹೊರ್‍ಡಿಕೆ ಹೇಳಿ ಬೇಗ ಬೇಗ ತಿಂಡಿ ಮಾಡಿ, ಫ್ಲಾಸ್ಕಿಗೆ ಕಾಫಿ ತುಂಬಿಸಿಕಂಡ್, ರೆಡಿ ಮಾಡಿ ಇಟ್ಟಿದ್ದ ಬ್ಯಾಗ್‌ನ ತೆಗ್ದ್ ಹೊರಗೆ ಮಡ್ಗಿದೊ.

ಸೋಮಯ್ಯನವುಕೆ ಅಷ್ಟ್ ಉಸಾರಿಲ್ಲದ್ರಂದ ಅವು ಮನೆಲಿ ಇದ್ದನೆತ  ಹೇಳ್ದೊ.

ಅಂದ್ ಸಾಯಂಕಾಲದ ಹೊತ್ತಿಗೆ ಭಾಗ್ಯಂಗೆ  ಹೆರಿಗೆ ಆತ್. ಪೊರ್ಲಾದ ಗಂಡ್ ಕೂಸ್, ಮಹೇಶನೆ ಮತ್ತೆ ಹುಟ್ಟಿ ಬಂದಂಗೆ ಇತ್ತ್. ಎಲ್ಲವ್ಕೂ ಬಾಳ ಕುಶಿ ಆತ್. ಪ್ರಕಾಶ ಅಂತು ಕೋಸ್‌ನ ಎತ್ತಿ ಕಂಡ್ ಕುಣ್‌ದಾಡ್ತ್.

ಪ್ರಕಾಶ, ಶಾಲಿನಿ ಮಕ್ಕ ಎಲ್ಲಾ ನೋಡಿಕೆ ಬಂದೊ, ರೇಷ್ಮಾ ಕೂಸ್ನ ಪುಟ್ಟ ಕೈಕಾಲ್ ಮುಟ್ಟಿ ಕುಶಿ ಪಟ್ಟತ್.

"ಡಿಸ್ಚಾರ್ಜ್ ಮಾಡಿ ನಾವು ಕರ್‍ಕಂಡ್ ಹೋದವೆ, ಮೊದಲ್ನೆ ಬಾಣಂತನ ತವುರು ಮನೆಲೆ ಆಕುತೇಳ್ದು ಪದ್ಧತಿ" ತೇಳ್ತ್ ಪ್ರಶಾಂತ್.

ಶಾಲಿನಿಗೆ ಮನ್ಸ್ ಇಲ್ಲದಿದ್ರೂ ಪ್ರಶಾಂತಂಗೆ ಹೆದ್ರಿ.

"ಹೌದು, ನಾನ್ ಅವಳ್ನ ನೋಡಿಕಣೆ " ತೇಳ್ತ್ ಶಾಲಿನಿ.

"ಅದೆಲ್ಲಾ ಬ್ಯಾಡ, ನಾನೂ ಅವ್ಳ ಅಮ್ಮನೆ. ಇದೇ ಅವ್ಳ ತವುರು ಮನೆ, ನಾನೇ ಅವಳ್ನ ನೋಡಿಕಣೆ , ನೀವು ಯಾರೂ ಎಂತ ಗ್ಯಾನ ಮಾಡ್ಬೇಡಿ ಶಾಲಿನಿಗೂ ಅನುಭವ ಇಲ್ಲೆ, ನೀವೆಲ್ಲಾ ಆಗಾಗ ಬಂದ್ ನೋಡಿಕಂಡ್ ಹೋಗಿ ಸಾಕ್" ಸೀತಮ್ಮ ಖಂಡಿತವಾಗಿ ಹೇಳ್ದೊ.

ಅವ್ರ ಮಾತಿಗೆ ಪ್ರಕಾಶನೂ ದನಿಕೂಡ್ಸಿತ್.

ಮೂರ್ ದಿನಕಳ್ದ್ ಭಾಗ್ಯನ ಮನೆಗೆ ಕರ್ಕಂಡ್ ಬಂದೊ, ಅವ್ಳ ಆರೈಕೆಗೆ ಒಬ್ಳು ಕೆಲ್ಸದವಳ್ನ ಕರ್ಕಂಡ್ ಬಂದಿದ್ದೊ. ದೂರದ ನೆಂಟ್ರರಾದ್ರಂದ ಅವ್ಕೆ ಎಲ್ಲಾ ಕೆಲ್ಸನೂ ಲಾಯ್ಕಲಿ ಗೊತ್ತಿತ್ತ್. ಬಾಣಂತಿ ಮತ್ತೆ ಕೂಸ್‌ನ ಕೆಲ್ಸ ಅವು ಮಾಡ್ತಿದ್ದೊ ಬಾಣಂತಿಗೆ ಅಡಿಗೆ ಮಾತ್ರ ಸೀತಮ್ಮನವೇ ಮುತುವರ್ಜಿ ವಹ್ಸಿ ಮಾಡ್ತಿದ್ದೊ.

ಹಂಗೆ ಹಿಂಗೆ ಎರ್ಡ್ ತಿಂಗ ಕಳ್ದೋತ್ ಪ್ರಕಾಶ ಯಾಗೋಳು ಹೋಗಿ ಕೂಸ್‌ನ ಹತ್ರ ಕುದ್ದಿರ್‌ತಿತ್ತ್. ಭಾಗ್ಯನ  ಮನ್ಸೂ ಈಗ ಬದ್ಲಾಗ್‌ತ್ತಾ ಬಂದಿತ್ತ್.

ಒಂದ್ ವಳ್ಳದಿನ ನೋಡಿ ಕೂಸಿಗೆ ಹೆಸ್ರ್ ಹಾಕುವ ಜಂಬರ ಮಡ್ಕಂಡೊ. ಜಂಬರಕ್ಕೆ  ಹತ್ತ್‌ರದ ನೆಂಟರ್‌ಗ ಮತ್ತೆ ಪ್ರಕಾಶನ ಗೆಳೆಯರ್ನ ಕರ್ದಿದ್ದೊ.

ಹಂಗೆ ನೆರೆಕರೆಯವು ಸಹ ಬಂದಿದ್ದೊ.

ಪ್ರಕಾಶನ ಗೆಳೆಯರ ಬಳಗಲಿ ಅವರ ಆಫೀಸ್‌ನವು ಮತ್ತೆ ಭಾಗ್ಯನ ಫ್ರೆಂಡ್ಸ್ ವಾಣಿ, ಪ್ರೇಮ ಮತ್ತೆ ವನಿತಾ ಬಂದಿದ್ದೊ.

ಅವ್ಕೆಲ್ಲಾ ಪ್ರಕಾಶ ಭಾಗ್ಯ ಮದ್ವೆ ಆಗ್ತಿರೊ ವಿಷ್ಯ ಹೆಂಗೊ ತಿಳ್ದ್ ಹೋಗಿತ್ತ್ ಎಲ್ಲವೂ ಪ್ರಕಾಶನ ಗೋಳು ಹೊಯ್ಕಂಡೊ.

"ಏನ್, ಪ್ರಕಾಶ ....... ಪ್ರೀತ್ಸಿದ ಗೂಡೆ ಮತ್ತೆ ನಿಂಗೆ ಸಿಕ್ತಾ ಉಟ್ಟು ಒಟ್ಟಿಗೆ ರೆಡಿಮೇಡ್ ಮಂಜ, ನೀನ್ ಬಾರಿ ಲಕ್ಕಿಯಾಪ್ಪ, ಬೇಗ ಊಟ ಹಾಕಿಸಿ ಬುಡು"

ಪ್ರಕಾಶನ ನಗೆಯೊಂದೇ ಅವ್ಕೆ ಉತ್ತರ. ನಿಜ ಹೇಳಕುತೇಳ್ರೆ ಭಾಗ್ಯ ಇನ್ನೂ ಬಾಯಿ ಬುಟ್ಟು ಒಂದ್ ಹೇಳಿತ್ತ್‌ಲೆ.

******

ಅಂದ್ ದೇವರ ಕೊಂಬರೆ  ಎದ್‌ರ್ ಕುದ್ದ್ ಕಂಡ್ ಭಾಗ್ಯ ಹೂ ಕಟ್ಟಿತ್ತಿರ್ದುನ ಕಂಡ್ ಆಶ್ಚರ್ಯಂದ ಒಳಗೆ ಬಾತ್ ಪ್ರಕಾಶ. ಅವಳ ಗ್ಯಾನ ಎಲ್ಲೋ ಇತ್ತ್. ಯಾವುದೋ ಲೋಕಲಿ ಇದ್ದವಳಂಗೆ ಹೂ ಕಟ್ಟಿಕಂಡ್ ಕುದ್ದಿತ್ತ್.

ಮಹೇಶ ಸತ್ತ ಮೇಲೆ ಹೂ ಮುಟ್ಟದೆ ಇದ್ದ ಭಾಗ್ಯ ಇಂದ್ ದೇವರಿಗೆ ಹೂಮಾಲೆ ಮಾಡ್ತನ ಕಂಡ್ ಹಂಗೆ ಅವ್ಳ ಹತ್ರ ಬಂದ್ ನಿತ್ತತ್. ಆದರೆ ಅಂವ ಅಲ್ಲಿಗೆ ಬಂದದ್ ಗೊತ್ತೇ ಆತ್‌ಲೆ. ಭಾಗ್ಯಂಗೆ ಬೆಲ್ ಮಾಡ್ರೂ ಅರಿವಿಲ್ಲದೆ ಅಡ್ಗೆಯಂವ ಬಂದ್ ಬಾಗ್ಲ್ ತೆಗ್ದಿತ್ತ್ .

ಸೀತಮ್ಮ ದೇವಸ್ಥಾನಕ್ಕೆ ಹೋಗಿದ್ದೊ. ಸೋಮಯ್ಯನವು ವಾಕ್ ಹೋಗಿದ್ದೊ.

"ಭಾಗ್ಯ ........" ತೇಳ್ಕನ ಬೆಚ್ಚಿಬಿದ್ದ್ ತಲೆ ಎತ್ತಿತ್ ಆ ನೋಟಲಿ ಹೊಸತನ ಇದ್ದಂಗೆ ಅನ್ನಿತ್ ಪ್ರಕಾಶಂಗೆ.

ಮದುವೆ ಬಗ್ಗೆ ಅವ್ಳ ನಿರ್ಧಾರ ಎಂತತ ತಿಳಿಯಕೆ ಆಗದೆ ಅಂವ ಸೋತ್ ಹೋಗಿತ್ತ್. ತಟ್ಟತ ಎದ್ದ್ ನಿತ್ತ ಭಾಗ್ಯನ ಮಡ್ಲ್‌ಲಿ ಇದ್ದ ಹೂಗಳೆಲ್ಲಾ ಚೆಲ್ಲಾ ಪಿಲ್ಲಿಯಾಗಿ ಬಿದ್ದ್ ಹೋದೊ ಹೂಗಳ್ನ ಹೆರ್ಕಿಕೆ ಬಗ್ಗಿದ ಭಾಗ್ಯನ ಕೈನ ಹಿಡ್ದ್ ತಡ್ತ್ ಪ್ರಕಾಶ .

ಭಾಗ್ಯನ ಕಣ್ಣ್ ನಾಚಿಕೆಲಿ ನೆಲ ನೋಡ್ತಿತ್ತ್. ಅವ್ಳು ಮಾಡಿದ್ದ ಹೂಮಾಲೆನ ಅವ್ಳ ಕೈಯಿಂದ ತಕಂಡ್ ಅವ್ಳಿಗೆ ಮುಡ್ಸಿತ್ ಪ್ರಕಾಶ. ಭಾಗ್ಯ ಬೆಚ್ಚಿಬಿದ್ದ್ ಅವನತ್ತ ನೋಡ್ತ್.

ಅವನ ಮೂಕ ಭಾಷೆ ಅವನ ಕಣ್ಣ್‌ಗ ಸಾವಿರ ಕತೆ ಹೇಳ್ದೊ.

ದೇವರ ಕೊಂಬರೆಗೆ ಹೋದ ಪ್ರಕಾಶ ಕುಂಕುಮ ಭರಣಿಂದ ಕುಂಕುಮ ತಂದ್ ಅವ್ಳ ಹಣೆಗೆ ಇರ್‌ಸಿಕನ ಭಾಗ್ಯ ಪ್ರಕಾಶನ ಕಾಲ್ ಹತ್ರ ಕುಸ್ದ್ ಬೀತ್. ಅವಳ್ನ ಮೆತ್ತಂಗೆ ಹಿಡ್ದ್ ಎತ್ತಿ ತನ್ನ ತೋಳ್‌ಲಿ ಬಳ್ಸಿತ್.

"ಮತ್ತೆ ಸಿಕ್ಕಿದ ಕುಂಕುಮ"ದೊಟ್ಟಿಗೆ ಮತ್ತೆ ಒಂದಾದ ಜೋಡಿ ಹೃದಯಗಳ್ನ ಬಾಗ್ಲ್‌ಲಿ ನಿತ್ ನೋಡ್ತಿದ್ದ ಸೀತಮ್ಮನವರ ಆನಂದದ ಕಣ್ಣೀರ್‌ಂದ ತುಂಬಿದ್ದ ಹನಿಗಣ್ಣ್‌ಗ ಹರ್‌ಸ್ತಿದ್ದೊ.

*******



ಶ್ರೀಮತಿ ಕಟ್ರತನ ಲಲಿತಾ ಅಯ್ಯಣ್ಣ

ಇವು ಅರಣ್ಯಪಾಲಕರಾಗಿದ್ದ ದಿ॥ ಪೊಡನೋಳನ ಸುಬ್ಬಯ್ಯ, ಚೋಂದಮ್ಮ ದಂಪತಿಗಳ ಮಗಳ್. ಇವರ ಪತಿ ಕಟ್ರತನ ಅಯ್ಯಣ್ಣ ನ್ಯಾಯಾಂಗ ಇಲಾಖೆಲಿ ಶಿರಸ್ತೆದಾರರಾಗಿದ್ದ್ ನಿವೃತ್ತರಾಗೊಳೊ. ಇವ್ಕೆ ಮೂರು ಮಕ್ಕ. ಮೊದಲನೆಯವ್ಳ ತೇಜಸ್ವಿನಿ ಮಡಿಕೇರಿ ಸರಕಾರಿ ಶಾಲೆಲಿ ಹೈಸ್ಕೂಲ್ ಶಿಕ್ಷಕಿ. ಇವರ ಪತಿ ಪರಿಚನ ಕಿರಣ್ ಎಮ್ಮೆಮಾಡು ಹೈಸ್ಕೂಲ್‌ಲಿ ಶಿಕ್ಷಕ. ಎರಡನೇ ಮಗಳು ಯಶಸ್ವಿನಿ. ಇವು ದುಬೈಲಿ ಇಂಜಿನಿಯರ್ ಆಗಿರುವ ಬೆಳ್ಯನ ಸುನಿಲ್‌ರೊಟ್ಟಿಗೆ ದುಬೈಲಿ ವಾಸವಾಗೊಳೊ. ಮಂಜ ಶಶಿಕಾಂತ್ ಮೈಸೂರ್‌ಲಿ ಬಿ.ಇ. ಮೆಕ್ಯಾನಿಕಲ್ ಓದ್ತಾ ಉಟ್ಟು.

ಕತೆ, ಕವನ, ನಾಟಕ ಬರವಣಿಗೆ ಲಲಿತಾ ಅಯ್ಯಣ್ಣ ಅವರ ಹವ್ಯಾಸ. ಇವರ ಹಲವಾರು ಕತೆ ಮತ್ತೆ ಕವನಗ ಪತ್ರಿಕೆಗಳಲ್ಲಿ ಪ್ರಕಟ ಆಗುಟ್ಟು. 'ಮತ್ತೆ ಸಿಕ್ಕಿತ್ ಕುಂಕುಮ' ಇವರ ಮೊದಲ ಪುಸ್ತಕ. ಪ್ರಸ್ತುತ ಇವು ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘಲಿ ಆಂತರಿಕ ಲೆಕ್ಕ ಪರಿಶೋಧಕರಾಗಿ ಕೆಲ್ಸ ಮಾಡ್ತಾವಳೊ. ಅಲ್ಲದೆ, ಇವು ಹಲವು ಸಂಘ-ಸಂಸ್ಥೆಲಿ ಸಕ್ರಿಯರಾಗಿದ್ದ್, ಮಡಿಕೇರಿ ಕಾಮಾಕ್ಷಿ ಗೌಡ ಒಕ್ಕೂಟಲಿ ಖಜಾಂಚಿ, ಗೌಳಿಬೀದಿ ಸ್ಪಂದನಾ ಮಹಿಳಾ ಸಂಘಲಿ ಕಾರ್ಯದರ್ಶಿ, ಮಡಿಕೇರಿ ಸಹಕಾರ ಉದ್ಯೋಗಸ್ಥರ ಸಹಕಾರ ಸಂಘಲಿ ನಿರ್ದೇಶಕಿಯಾಗೊಳೊ.

– ಸಲಹಾ ಸಮಿತಿ